ಕಡಿಮೆ ಬೆಲೆಯ ಬ್ಯಾಟರಿಗಳ
ಮೇಲೆ ಹಣವನ್ನು ವ್ಯಯಮಾಡದಿರಿ

ಎವರೆಡಿ
ಬ್ಯಾಟರಿಗಳು
ದೀರ್ಘಕಾಲ ಬಾಳುವುದರಿಂದ
ನಿಮಗೆ ಪೂರ್ಣ 16
ಆಣೆ ಮೌಲ್ಯ ಸಿಕ್ಕುತ್ತದೆ

W54

ಡಿಕ್ಟೇಟರುಗಳು ಲಕ್ಷಾಧಿಪತಿಗಳು.

ಮುಸಲೋನಿ—ಹಿಟ್ಲರುಗಳ ಉತ್ಪತ್ತಿ.

★

ಯುರೋಪಿನ ಡಿಕ್ಟೇಟರುಗಳು, ಕೊಂಚವೂ ಸ್ವಾರ್ಥವಿಲ್ಲದವರೆಂದೂ, ಅವರಿಗೆ ಸ್ವಂತವಾದ ಹೇರಳ ಸಂಪಾದನೆ ಇರುವುದೆಂದೂ ಜನರಾಡಿಕೊಳ್ಳುತ್ತಿರುವುದು ವಾಡಿಕೆಯಾಗಿ ಹೋಗಿದೆ. ಇದು ಎಷ್ಟು ಮಟ್ಟಿಗೆ ಯಥಾರ್ಥವೆಂಬುದು ಈ ಕೆಳಗಿನ ವಿದ್ಯಮಾನಗಳಿಂದ ಅರಿಯಬಹುದು.

ಯುರೋಪಿನ ಸರ್ವಾಧಿಕಾರಿಗಳಲ್ಲಿ, ಮುಖ್ಯವಾಗಿ, ಮುಸಲೋನಿ ಮತ್ತು ಹಿಟ್ಲರುಗಳು ಮಹಾ ಧನವಂತರೆಂದು ಈಚಿಗೆ ಪ್ರಸಿದ್ಧವಾಗಿದೆ. ಇವರಿಗೆ ಬಹಿರಂಗವಾಗಿ ಪ್ರಭುತ್ವದಿಂದ ದೊರಕುವ ವೇತನವು, ಉಳಿದ ಅಧಿಕಾರಿಗಳಿಗಿಂತಲೂ ಅಧಿಕವಾಗಿರುವುದೆಂಬ ಮಾತು ವಾಸ್ತವವೇ; ಹಾಗಿರಬೇಕಾದುದೂ ಸಹಜವೇ.

ಮುಸಲೋನಿಯು, ತನ್ನ ಸರ್ವಾಧಿಕಾರದ ಕಾರ್ಯಕ್ಕಾಗಿ ಪಡೆಯುವ ಪ್ರತಿಫಲ ೫ ಸಾವಿರ ಡಾಲರುಗಳು; ಆದರೆ ಈ ಒಂದು ಸರ್ವಾಧಿಕಾರದ ಉದ್ಯೋಗವನ್ನೇ ಅಲ್ಲದೆ, ಅದರ ಜತೆಗೆ ಉಳಿದ ನಾಲ್ಕು ಶಾಖೆಗಳ ಮಂತ್ರಿತ್ವದ ಕಾರ್ಯಭಾರಗಳನ್ನೂ ಆತನೇ ನಿರ್ವಹಿಸುತ್ತಿದ್ದಾನೆ. ಈ ಹೆಚ್ಚಿನ ಕಾರ್ಯಭಾರಗಳಿಗಾಗಿ, ಆತನೊಂದು ಚಿಕ್ಕಾಸಿನ ಪ್ರತಿಫಲವನ್ನೂ ಪ್ರತ್ಯೇಕವಾಗಿ ಪಡೆಯುತ್ತಿಲ್ಲ.

ಯದ್ಯಪಿ, ಮುಸಲೋನಿಗೆ, ಬೇರೆ ರೀತಿಯಿಂದ ಬರತಕ್ಕ ಆದಾಯವು ಧಾರಾಳವಾಗಿದೆ. ಅವನಿಗೆ, 'ಡಿ—ಇಟೆಲಿಯಾ' ಎಂಬ ಸ್ವಂತ ದೈನಿಕ ಪತ್ರಿಕೆ ಇದೆ. ಇಟೆಲಿಯಲ್ಲಿ, ಈ ಪತ್ರಿಕೆಗೆ ಇರುವಷ್ಟು ಪ್ರಚಾರವು, ಬೇರೆ ಯಾವ ಪತ್ರಿಕೆಗೂ ಇಲ್ಲ: ಹಾಗೂ ಈ ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಬರತಕ್ಕ 'ಜಾಹಿರಾತು'ಗಳಿಗಿರುವಷ್ಟು ಹೆಚ್ಚಿನ ದರವು, ಅಲ್ಲಿಯ ಬೇರೆ ಯಾವ ಪತ್ರಿಕೆಗಳ ಜಾಹಿರಾತುಗಳಿಗೂ ಇಲ್ಲ.

ಇದಲ್ಲದೆ,—ಮುಸಲೋನಿಗೆ, ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ, ಯಥೇಷ್ಟ ಪಾಲುಗಳೂ ಉಂಟು; ಬೇರೆ ವಿಧದ ಹೆಚ್ಚಿನ ಆದಾಯವು ಬರುವ ಸೌಲಭ್ಯವೂ ಉಂಟು. ಅವುಗಳಲ್ಲಿ ಒಂದು ಯಾವುದೆಂದರೆ,—ಮುಸಲೋನಿ ಇಟೆಲಿಯ ಇತರ ಪತ್ರಿಕೆಗಳಿಗೆ ಬರೆದು ಕಳುಹಿಸುವ ಲೇಖಗಳಿಗಾಗಿ, ಆತನು ಪಡೆಯತಕ್ಕ ಸಂಭಾವನೆಯ ಮೊತ್ತ! ಇಷ್ಟು ಮೊತ್ತವನ್ನು, ...ಾ ಪತ್ರಿಕೆಗಳ ಮಾ... ...ರ ಯಾವ ...ರಿಗೂ ಕೊಡುವ...ಲ್ಲ; ...ಸಲೋನಿಯ ... ಅಷ...

ಇವೇ ಲೇಖಗಳು, ಮತ್ತೆ ಪುಸ್ತಕರೂಪವಾಗಿ, ಅಚ್ಚಾಗುವುವು; ವಸ್ತುತಃ, ಇವು ಇಲ್ಲದ ಮನೆಗಳೇ, ಇಟೆಲಿಯಲ್ಲಿ ಇಲ್ಲ. ಅಂದರೆ, ಈ ಪುಸ್ತಕಗಳ ಮಾರಾಟದಿಂದಲೂ, ಮುಸಲೋನಿಗೆ ಲಕ್ಷಾಂತರದ ಸಂಪಾದನೆಯಾಗಿ, ಅವನ ಸಂಪತ್ತು ವೃದ್ಧಿಗೊಳ್ಳಲು ಒಂದು ಮುಖ್ಯ ಕಾರಣವೆನ್ನಿಸಿದೆ.

ಇನ್ನು, ಜರ್ಮನಿಯ ಸರ್ವಾಧಿಕಾರಿಯಾದ ಹಿಟ್ಲರನ ಸಾಂಪತ್ತಿಕ ಸ್ಥಿತಿಗತಿಯೋ? ಅವನಿಗೆ ಪ್ರಭುತ್ವದಿಂದ ದೊರೆಯುವಂತೆ ನಿಷ್ಕರ್ಷಿಸಲಾದ ಪ್ರತಿಫಲ ೨೦ ಸಾವಿರ ಡಾಲರುಗಳು. ಆದರೆ, ಅವನು ಈ ಮೊತ್ತದಲ್ಲಿ ಚಿಕ್ಕಾಸನ್ನೂ ಮುಟ್ಟುವುದಿಲ್ಲ. ಅವನು ತನಗೆ ಬರುವ ಬೇರೆ ವಿಧವಾದ ಆದಾಯದಿಂದಲೇ ತನ್ನ ಜೀವನ ನಡೆಸುತ್ತಿದ್ದಾನೆ.

ನಾಝಿ ಪಾರ್ಟಿಯವರ ಪ್ರಚಾರ ಕಾರ್ಯಾಲಯದ ಆದಾಯದಲ್ಲಿ, ಹಿಟ್ಲರನಿಗೆ ಸರಿಯಾದ ಅರ್ಧಭಾಗವುಂಟು. ಆದರೆ, ಆ ಕಾರ್ಯಾಲಯದ ಆದಾಯವೆಷ್ಟೆಂದು, ಇನ್ನೂ ಪ್ರಕಟವಾಗಿರುವುದೇ ಇಲ್ಲ. ಇದು ಸ್ವಾರಸ್ಯ!

ಹಿಟ್ಲರನು ಬರೆದ ಆ 'ಮೈ ಸ್ಟ್ರಗಲ್' (ನನ್ನ ಕಾದಾಟ) ಎಂಬ ಗ್ರಂಥದ ಪ್ರತಿಗಳು, ಇಂದಿಗೂ, ಲಕ್ಷಾಂತರದ ಸಂಖ್ಯೆಯಲ್ಲಿ ಮಾರಾಟವಾಗುತ್ತಲೇ ಇವೆ. ಈ ವರೆಗೆ, ಈ ಗ್ರಂಥದ ೨೫ ಲಕ್ಷ ಜರ್ಮನ್ ಭಾಷೆಯ ಪ್ರತಿಗಳು, ಖರ್ಚಾಗಿವೆ ಎಂದು ತಿಳಿದುಬರುತ್ತದೆ. ಈ ಪ್ರತಿಗಳ ವಿಕ್ರಯದಲ್ಲಿ, ಸೇಕಡಾ ೧೫ರ ಸಂಭಾವನೆ(ರಾಯಲ್ಟಿ)ಯ ಭಾಗ, ಹಿಟ್ಲರಿಗುಂಟು. ಈ ರೀತಿ, ಸೇಕಡಾ ೧೫ರಂತೆ ಈ ವರೆಗೆ ಹಿಟ್ಲರನಿಗೆ, ಈ ಪ್ರತಿಗಳ ಮಾರಾಟದಿಂದ ದೊರೆತ ಒಟ್ಟು ಸಂಭಾವನೆಯ ಮೊತ್ತ, ಸುಮಾರು ೧೫ ಲಕ್ಷ ೪೦ ಸಾವಿರ ಡಾಲರುಗಳಿಗೂ ಮಿಕ್ಕಿ ಹೋಗಿದೆ. ಇದರಲ್ಲಿ, ಇದೇ ಗ್ರಂಥವು, ಇತರ ಭಾಷೆಗಳಿಗೆ ಭಾಷಾಂತರವಾಗಿ, ಮಾರಿ ಹೋದ ಆ ಪ್ರತಿಗಳ 'ರಾಯಲ್ಟಿ'ಯ ಆದಾಯ ಭಾಗವು, ಈ ಮೇಲಿನ ಮೊತ್ತದಲ್ಲಿ ಸೇರಿಲ್ಲ. ಅದು ಬೇರೆಯೇ ಇದೆ—ಪುಟ್ಟ ಗಂಟು.

ಡೋಂಗರೇ
ಇವರ
ಬಾಲಾಮೃತವು
ಮಕ್ಕಳ
ಹಳೆಯ ಮತ್ತು ಅಸಹ್ಯವಾದ ಕೆಮ್ಮು
ಮತ್ತು ಒಳಜ್ವರ ಇವುಗಳನ್ನು ಗುಣಪಡಿಸಿ
ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ
ಕೊಡುತ್ತದೆ.

ಸಕಲೇಶಪುರದ ಟವರ್ಣ ಮುನಿಸಿಪಾಲಿಟಿ.

ಈ ಟವನಿನಲ್ಲಿ ಹೇಮಾವತಿ ನದಿಯ ಪಕ್ಕದ ಮೈದಾನದಲ್ಲಿ 1938ನೇ ನವಂಬರ್ ತಾರೀಖು 10ರಿಂದ 15ರ ವರೆಗೆ ದನಗಳ ಜಾತ್ರೆಯು ನಡೆಯುತ್ತದೆ. ರಾಸುಗಳಿಗೆ ಸುಂಕವಿಲ್ಲ. ನೀರಿನ, ಹುಲ್ಲಿನ ಮತ್ತು ಸ್ಥಳದ ವಸತಿ ಚೆನ್ನಾಗಿರುತ್ತೆ. ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡಲ್ಪಡುತ್ತೆ. ಜಾತ್ರೆಗಾಗಿ ಇಲ್ಲಿಗೆ ಬರತಕ್ಕ ಜನಗಳಿಗೆ ಬಸ್ಸುಗಳ ಛಾರ್ಜಿನಲ್ಲಿ ರಿಯಾಯ್ತಿ ದೊರೆಯುವಂತೆ ಏರ್ಪಾಡು ಮಾಡಲಾಗುತ್ತೆ.

ಸಕಲೇಶಪುರ,
ತಾ. 1-10-1938.

ಆರ್. ರಾಮಚಂದ್ರ ರಾವ್,
ಪ್ರೆಸಿಡೆಂಟ್.

ಕಾಫಿ ತಯಾರಿಯ ಯಂತ್ರ

ನಮ್ಮ ಕೆಲವು ರೈಲ್ವೆ ಸ್ಟೇಶನುಗಳಲ್ಲಿ, ಅದೊಂದು ಯಂತ್ರದಲ್ಲಿ, ಒಂದಾಣೆ ನಾಣ್ಯ ಹಾಕಿದ ಕೂಡಲೇ, ಪ್ಲಾಟ್‌ಫಾರ್ಮ್ ಟಿಕೇಟುಗಳು ತಮ್ಮಂತೆ ಮೇಲಕ್ಕೆ ಬಂದು ಕೈ ಸೇರುವುದಿಲ್ಲವೇ? ಅಗೋ, ಹಾಗೇ, ನ್ಯೂಯಾರ್ಕ್ ದೇಶದ, ರೈಲ್ವೆ ಫ್ಲಾಟುಫಾರ್ಮುಗಳಲ್ಲೆಲ್ಲಾ, ನಾಣ್ಯ ಹಾಕಿದ ಒಡನೆಯೇ, ಕಪ್ಪಿನಲ್ಲಿ ಕಾಫಿ ತುಂಬಿಸಿ ಕೊಡುವ ಯಂತ್ರವೂ ಒಂದು ಸಿದ್ಧವಾಗಿದೆ. ಆ ಯಂತ್ರಕ್ಕೆರಡು ರಂಧ್ರಗಳಿವೆ. ಅವೆರಡು ರಂಧ್ರಗಳಲ್ಲಿ, ನಾಣ್ಯ ಹಾಕಿ, ಕಾಫಿಯ ಕಪ್ಪನ್ನು ಆ ಯಂತ್ರದ ಹತ್ತಿರಕ್ಕೆ ಹಿಡಿದು ಕುಳಿತರೆ, ಒಂದರಿಂದ ... ಕೈನಶ... ಇನ್ನೊಂದರಿಂದ... ಅಂತ... ತವುತು. ಅದನ್ನು ಆ ಕಪ್ಪಿನಲ್ಲಿ ತುಂಬಿಸಿ ಕೊಡುತ್ತಿವೆ. ಈ ಯಂತ್ರಗಳು, ನ್ಯೂ ಯಾರ್ಕಿನಲ್ಲೆಲ್ಲ ಧಾರಾಳವಾಗಿ ತುಂಬಿ ಹೋಗಿವೆ. ಇಂಡಿಯದಲ್ಲಿಯೂ ಇನ್ನೂ ತುಂಬಿಲ್ಲವೇಕೆ?

ಅಕಾಲ ವಾರ್ಧಿಕ್ಯವನ್ನು ಪರಿಹರಿಸುವುದು.

ಮದನ ಮಂಜರಿ ಮಾತ್ರೆಗಳೆ.

ಅತಿಭೋಗದಿಂದಲೋ, ದುರಭ್ಯಾಸದಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಯಾ...ನದಲ್ಲೆ ಬಂದ ಮುಪ್ಪನ್ನು ಪರಿಹ... ರಲಿ ಇದು ಚಕ್ರವರ್ತಿ ಸ್ಥಾನದಲ್ಲಿ... ...ಮಾತ್ರೆಗಳ ಡಬ್ಬಿ ಕ್ರಯ ... ...ದನ ಮಂಜರಿ ಫಾರ್ಮ... ...ನಾ ಬಜಾರ್, ಮದ...

ಕಳೆದ ವಾರ

ಮುಲ್ತಾನಿನಿಂದ ಒಂದು ಸಮಾಚಾರ;

ಹಿಂದೂ-ಮುಸ್ಲಿಂ ಗಲಭೆಯದು. ಈ ಬಾರಿ ಈ ಗೊಂದಲದ ಕಾರಣ, ಗೋಹತ್ಯೆಯಲ್ಲ; ಮಸೀದಿಯ ಮುಂದೆ ವಾದ್ಯವಲ್ಲ. 'ಯಾರೋ ಕೆಲವು ಹಿಂದೂಗಳು, ಎಲ್ಲಿಯೋ ಒಂದು ಕಡೆ, ಯಾವಳೋ ಒಬ್ಬ ಮುಸ್ಲಿಂ ಹೆಂಗಸಿನ ಮೈ ಮೇಲೆ ಕೈ ಮಾಡಲು ನೋಡಿದರು' ಎಂಬ ವಾರ್ತೆಯೇ. ಇದು ಎಷ್ಟು ನಿ[illegible]ವೆಂದು ವಿಚಾರಿಸಿದವರಿಲ್ಲ; ಹಾಗಾಯಿತೆಂಬ ಈ ಗಾಳೀ ವರ್ತಮಾನವೇ, ಮುಸ್ಲಿಮರನ್ನು ಉದ್ರೇಕಿಸಲು ಸಾಕಾಯಿತು. ಮುಸ್ಲಿಮರು ಇಷ್ಟರಿಂದಲೇ ಮೇಲಕ್ಕೆದ್ದರು. ಮೊದಲು ಅಲ್ಲಿನ ಕಾಂಗ್ರೆಸ್ ಕಾರ್ಯಾಲಯದ ಕಟ್ಟಡಕ್ಕೆ ಬೆಂಕಿ ಕೊಟ್ಟರು; ಎರಡನೆಯದಾಗಿ ಖಾದೀ ಭಂಡಾರವನ್ನು ಸುಟ್ಟರು. ಅನಂತರ, ಕೆಲವು ಹಿಂದೂಗಳ ಅಂಗಡಿಗಳು, ಒಬ್ಬ ಹಿಂದೂ ಡಾಕ್ಟರರ ಮನೆ ಇವುಗಳ ವಿಚಾರ ತೆಗೆದುಕೊಂಡರು. ಇಷ್ಟೆಲ್ಲಾ ಅನಾಹುತ ನಡೆದುದು,- ಕೇವಲ ಒಂದು ವಾರ್ತೆಯ ದೆಸೆಯಿಂದ. ಈ ವಾರ್ತೆಯನ್ನು ಹಬ್ಬಿಸಿದವರು, ಯಾರೋ ಕಾಂಗ್ರೆಸಿನ ವಿರೋಧಿಗಳು ಎಂಬುದು, ಮೊದಲು ಕಾಂಗ್ರೆಸ್ ಮಂದಿರಕ್ಕೆ ಬೆಂಕಿ ಹತ್ತಿಸಿದ ಈ ವಿದ್ಯಮಾನದಿಂದಲೇ ಸ್ಪಷ್ಟ. ಹಾಗೂ ಅವರು, ಎಲ್ಲ ವಾರ್ತೆಗಳಿಗಿಂತಲೂ, 'ಮುಸ್ಲಿಂ ಹೆಂಗಸಿನ ಮೇಲೆ ಕೈ' ಎಂಬ ಈ ಇದೊಂದು ಹೊಸ ನಮೂನೆಯ ವಾರ್ತೆಯನ್ನು ಹಬ್ಬಿಸಿಬಿಟ್ಟರೆ, ಉದ್ರೇಕದ ಕಾರ್ಯವು ಸುಲಭವೂ, ತೀವ್ರ ರೀತಿಯದೂ, ಹೆಚ್ಚು ಪರಿಣಾಮಕಾರಿಯೂ ಆಗುವುದೆಂದು ಭಾವಿಸಿದುದೂ ಸ್ಪಷ್ಟ. ಹೇಗೂ, ಹಲವು ಮಂದಿರಗಳು ಭಸ್ಮವಾಗುವ ವರೆಗೆ, ಪೋಲೀಸರು ಗುಂಡು ಹಾರಿಸಿ, ಇಬ್ಬರಿಗೆ ಗಾಯ ಮಾಡಲಿಲ್ಲ. ಪ್ರಾಯಶಃ ಅವರು, ಅಹಿಂಸೆಯ ಪರೀಕ್ಷೆಯನ್ನು ಕೊಂಚ ಹೊತ್ತು ಮಾಡುತ್ತಿದ್ದರೋ, ಏನೋ!

* * *

ನಮ್ಮ ದೊಡ್ಡಣ್ಣ ಶೌಕತ್ ಅಲಿಯವರು,—

ಜಾತಿಯ ಜಗಳವು ಹೇ[illegible] ತೀರ್ಮಾನವಾದೀತೆಂಬ ವಿಚಾರದಲ್ಲಿ, ಉಪದೇಶಿಸಲು ಹೊರಟಿದ್ದಾರೆ. ಅದು ತೀರ್ಮಾನವಾಗುವ ರೀತಿ ಎಂತದೆಂದು, ಅವರು ಸೂಚಿಸಿಲ್ಲ; ಯಾವ ಕ್ರಮವನ್ನು ಅನುಸರಿಸಿದರೆ ಅದು ಸಾಧ್ಯವಾಗಲಾರದು ಎಂಬುದನ್ನೇ ಸೂಚಿಸಿದ್ದಾರೆ. ಉಪ್ಪಿಂಟೇ ಎಂದರೆ, ಹುಣಿಸೇ ಹಣ್ಣಿನ ಗೂಡೆಯನ್ನು ತೋರಿಸಿದ್ದಾರೆ. 'ಈ ಹಿಂದೂ



ಶ್ರೀ॥ ಶೌಕತ್ ಅಲಿಯವರು.

ಮುಸ್ಲಿಂ ವಿವಾದವನ್ನು ತೀರಿಸಲು, ಒಂದು ರೌಂಡ್ ಟೇಬಲ್ ಕಾನ್ಫರೆನ್ಸನ್ನು ಸೇರಿಸಿ ಫಲವಿಲ್ಲ. ಆ ಯೋಚನೆಯನ್ನು ನಾನು ಒಪ್ಪಲಾರೆ. ಅಲ್ಲಿ ನಡೆಯುವುದೆಂದರೆ,—ಆಡಂಬರದ ಶಬ್ದಜಾಲಗಳ ಪ್ರದರ್ಶನ, ವಾಕ್ಚಾತುರ್ಯದ ಔತನ, ಕೊನೆಗೆ ಪರಿಣಾಮ, ಪರ್ವತದ ಇಲಿ. ಅಲ್ಲಿ ಗಾಂಧಿಯವರು ಮಾತಾಡುವರು; ಶ್ರೀ॥ ಸುಭಾಷ್ ಚಂದ್ರರೂ, ಶ್ರೀ॥ ಝಿನ್ನಾರವರೂ ನಾಲಿಗೆ ಯಾಡಿಸುವರು. ಒಬ್ಬರ ಮೇಲೊಬ್ಬರು ಏನಾದರೂ ಆಕ್ಷೇಪಿಸಿ, ಬೀಗರ ಹಾಡು ಹೇಳಿದಂತೆ, ಅತ್ತಿತ್ತ ನುಡಿಯುವರು; ಇದನ್ನು ಕಂಡು [illegible]ಲಾರ್ಡ್ ಲಿನ್‌ಲಿತ್‌ಗೋರವರು ನಗುವರು. [illegible]ಷ್ಟೇ ತಾನೇ?' ಎಂದಿರುವರು. ಸರಿ; ಹಾಗಾ[illegible] ವಿವಾದದ ತೀರ್ಮಾನಕ್ಕೆ ಏನು ಮಾಡ[illegible] ಬ್ರಿಟಿಶ್ ರಾಜಕೀಯ ಧು[illegible]ಗಲಿ [illegible], ಇದಕ್ಕೂ ಒಂದು [illegible] [illegible]ೇ? ಎವಾರ್ಡಿನ [illegible] [illegible]ಾಗಿ[illegible]ರಿಂದ ಪೆನ್ಶನ್ ಪಡೆವ, ಅರ್ಧ ಬ್ರಿಟಿಶ್ ಅರ್ಧ ಹಿಂದೀಯರಾದ ದೊಡ್ಡಣ್ಣನವರೇ 'ಎವಾರ್ಡ್' ಕೊಡಲಿ ಎಂದರೆ, ಅವರಿಗೆ ಸಂತೋಷವಾದೀತೇ? ಮುಖ್ಯ, ಈ ಪ್ರಶ್ನೆಯಲ್ಲಿ ದೊಡ್ಡಣ್ಣನವರಿಗೆ ತಕ್ಕಷ್ಟು ಪ್ರಾಶಸ್ತ್ಯ ಸಿಕ್ಕಲಿಲ್ಲ, ಇದರಿಂದಲೇ ದೊಡ್ಡಣ್ಣನವರ ವೈರಾಗ್ಯದ ಉದ್ಗಾರ ಹೀಗೆ ಎಂದರೆ ತಪ್ಪೇನೋ!

* * *

ಮಿ. ಲಾಯಿಡ್ ಜಾರ್ಜ್ ಸಾಹೇಬರು

ಮೌನದಿಂದಿದ್ದವರು, ಈಗ ಮಾತಾಡಿದ್ದಾರೆ. ಮ್ಯುನಿಚಿನ ಸಂಧಿಯ ಗುಣಾವಗುಣಗಳನ್ನು ಪ್ರಸ್ತಾವಿಸಿ, 'ಬ್ರಿಟನು, ಮಧ್ಯ ಯುರೋಪಿನ ಒಂದು ಚಿಕ್ಕ ಡೆಮೊಕ್ರೆಟಿಕ್ ರಾಷ್ಟ್ರವನ್ನು ಯೂನಿಯನ್ ಜಾಕ್‌ನಲ್ಲಿ ಸುತ್ತಿ, ಜರ್ಮನಿಗೂ, ಜೆಕ್ಕರಿಗೂ ಸ್ವಾತಂತ್ರ್ಯ ಕೊಡದ ಒಬ್ಬ ನಿರ್ದಯ ಸರ್ವಾಧಿಕಾರಿಯ ವಶಕ್ಕೇ ಧಾರೆ ಎರೆಯಿತು' ಎಂದಿದ್ದಾರೆ. ಅಬಿಸೀನಿಯಾ, ಚೀನಾ, ಜುಗೋಸ್ಲಾವೋಕಿಯಗಳ ಪರಿಸ್ಥಿತಿಯನ್ನು ಶ್ರುತಪಡಿಸಿ, 'ನಾವು ಈ ವರ್ಷಗಳಲ್ಲೆಲ್ಲ, ಅವಮಾನದ ಏಣೀ ಮೆಟ್ಟಲುಗಳನ್ನು ಇಳಿದು ಬರುತ್ತಿದ್ದೇವೆ. ಇನ್ನೂ ಕೆಳಗಿಳಿಯಲು ಶಕ್ಯವೇ?' ಎಂದಿದ್ದಾರೆ. 'ಸದ್ಯಕ್ಕೆ ಯುದ್ಧದ ಭೀತಿ ಏನೋ ತಪ್ಪಿತು; ಆದರೆ ಮಾನ ಹೋಯಿತು; ಶಾಂತಿಯೂ ಬರಲಿಲ್ಲ' ಎನ್ನುತ್ತ, 'ಬ್ರಿಟನಿನ ಮೇಲ್ಪಂಕ್ತಿಯನ್ನು ಇಂದು ಅನುಸರಿಸುವ ಜನಾಂಗಗಳೆಷ್ಟು? ಜಲ ಜನಾಂಗಗಳಲ್ಲಿ, ಕೇವಲ ಒಂದೆರಡಿರಬಹುದು!' ಎಂದಿದ್ದಾರೆ. ಕೊನೆಗೆ 'ಇದರಿಂದ ಶಾಂತಿಯಾಗದು. ಯುದ್ಧವಾಗುವುದು ಖಂಡಿತ. ಆದರೆ ಆ ಯುದ್ಧವು, ಸ್ನೇಹಿತರಿಲ್ಲದ ಯುದ್ಧ' ಎಂದು ಮುಗಿಸಿದ್ದಾರೆ!

ಮಿ. ಲಾಯಿಡ್ ಜಾರ್ಜರು

* * *

'ಹಿಂದುಸ್ಥಾನಿ' ಸಾಹಿತ್ಯವು

ರಾಷ್ಟ್ರಭಾಷೆಯಾಗಿದ್ದರೂ, ಮಹಾತ್ಮರಿಗೆ ಅದು, ಗಡಿನಾಡಿನಲ್ಲಿ, ಕೊಂಚವೂ ಉಪಕಾರಿಯಾಗಲಿಲ್ಲ. ಅವರು, ಅಹಿಂಸಾ ವಿಷಯಕವಾದ ವಿಚಾರಗಳನ್ನು ವಿವರಿಸುವ ತಮ್ಮ ಭಾಷಣಗಳು, ಜನರಿಗೆ ತಿಳಿಯುವಂತೆ, ಭಾಷಾಂತರಕಾರರ ಸಹಾಯವನ್ನು ಪಡೆಯಬೇಕಾಯಿತು. ಇದರ ಪರಿಣಾಮವಾಗಿ, ತನ್ನ ಭಾಷಣದ ಅರ್ಥ ಜನಗಳಿಗೆ ಸರಿಯಾಗಿ ಆಯಿತೋ, ಇಲ್ಲವೋ ಎಂದು ಖಚಿತ ಮಾಡಿಕೊಳ್ಳಲು, ಮಹಾತ್ಮರು ಹಲವು ಪ್ರಶ್ನೆಗಳನ್ನು ಶ್ರೋತೃಗಳಿಗೆ ಹಾಕಿ ಅವರಿಂದ ಉತ್ತರ ಪಡೆಯಬೇಕಾಯಿತು. ಹೇಗೂ 'ಅಹಿಂಸೆ'ಯ ತತ್ತ್ವದ ಬೀಜವನ್ನು ಗಡಿನಾಡಿನಲ್ಲಿ ಮಹಾತ್ಮರು ಬಿತ್ತಿದಂತಾಯಿತು. ಇದಿನ್ನು ಅಲ್ಲಿ ಯಾವ ರೀತಿ ಫಲ ಬಿಡುವುದೆಂಬುದು ನಿರೀಕ್ಷಣೀಯವಾಗಿದೆ!

* * *

ಜರ್ಮನಿಯಲ್ಲಿ ಆಸ್ಟ್ರಿಯದಲ್ಲಿ, ಯೆಹೂದಿಯರ ಚಿತ್ರಹಿಂಸೆಗೆ, ಬೇಟೆಗೆ

ಮಿತಿಯೇ ಇಲ್ಲ. ಯೆಹೂದಿಗಳಿಗೆಲ್ಲ ಉಚ್ಚಾಟನೆ ಏಕಪ್ರಕಾರವಾಗಿದೆ. ಅವರ ಕಸುಬು, ಧನ, ಕನಕ, ಮನೆ, ಮಾರು ಅಧಿಕಾರ ಸ್ಥಾನ ಎಲ್ಲವೂ ಹೋಯಿತು; ವ್ಯಾಪಾರ ವ್ಯವಹಾರಗಳೂ ನಿರ್ನಾಮವಾಯಿತು; ಅವರಿಗೆ ಜರ್ಮನಿಯಲ್ಲಿಯೂ ಸ್ಥಳವಿಲ್ಲ; ಇತರ ರಾಷ್ಟ್ರಗಳಲ್ಲಿಯೂ ದೊಡ್ಡ ದೊಡ್ಡ ಬೇಲಿಗಳುಂಟು. ಹಾಗಾದರೆ, ಇವರ ಮುಂದಿನ ನೆಲೆಯೆಲ್ಲಿ, ಜೀವನದ ಗತಿ ಏನು ಒಂದೂ ಗೊತ್ತಿಲ್ಲ. ಮುಖ್ಯವಾಗಿ, ಇದರಲ್ಲಿ ನಿರಪರಾಧಿಗಳಾದ ಯೆಹೂದಿ ಹೆಂಗಸರ, ಹೆಣ್ಣು ಮಕ್ಕಳ ಅನಾಥ ಪರಿಸ್ಥಿತಿಯು ಅತ್ಯಂತ ಕರುಣಾಜನಕವಾಗಿದೆ. ಅವರು ನಾಝಿಗಳ ಅಸಹ್ಯವಾದ, ಅಮಾನುಷ ಅತ್ಯಾಚಾರಗಳಿಗೆ ಬಲಿಬಿದ್ದು, ಹೊಟ್ಟೇ ಪಾಡಿಗಾಗಿ ತಮ್ಮ ಮಾನವನ್ನು ಮಾರಿಕೊಳ್ಳುವ ಪ್ರಸಂಗ ಒದಗಿ, ಅನಿರ್ವಚನೀಯವಾದ ಕಷ್ಟಪರಂಪರೆಗಳನ್ನು ಅನುಭವಿಸುವ ಹೊತ್ತು ಬಂದಿದೆ. ನ್ಯಾಯ-ಅನ್ಯಾಯ, ನೀತಿ-ಅನೀತಿಗಳ ವಿಚಾರ ತೋರದೆ, 'ಬಲಾಚೆ ಪೃಥ್ವಿ'ಯ ಉದಾಹರಣೆಯೊಂದೇ, ಉಜ್ವಲವಾಗಿ ಬೆಳಗುತ್ತಿದೆ. ನಾರಿಯರೆಂದರೆ ಅಧಿಕವಾದ ಮನ್ನಣೆ ಇತ್ತು, ಪೂಜಿಸುವ ಆ ಪಾಶ್ಚಾತ್ಯ ನಾಗರಿಕ ಜಗತ್ತೇ, ಇಂದು, ಆ ಯೆಹೂದಿ ತರುಣಿಯರ ಮೇಲೆ ನಡೆಯುತ್ತಿರುವ ಆ ಬಲಪ್ರಯೋಗವನ್ನು ಕಂಡೂ, ಕೇಳಿಯೂ ಸುಮ್ಮನೆ ಕುಳಿತಿದೆ. ತಮ್ಮಂತೆಯೇ ಅವರೂ ಹೆಣ್ಣು ಜನ್ಮದಲ್ಲಿ ಹುಟ್ಟಿದವರು; ತಮ್ಮಂತೆಯೇ ಅವರದೂ ಮಾನ ಎಂಬ ಈ ವಿಚಾರವು, 'ನಾಗರಿಕ' ಎಂದು ಬಡಾಯಿ ಹೇಳಿಕೊಳ್ಳುವ, ಆ ಪಾಶ್ಚಾತ್ಯ ಮಹಿಳಾ ಸಂಘಗಳಿಗೆ ಮರೆತೇ ಹೋಗಿದೆ. ಅಥವಾ ಅವರನ್ನೇ ದೂರಿ ಫಲವೇನು? ಬಲಾಢ್ಯ ರಾಷ್ಟ್ರಗಳೂ, ಹಿಟ್ಲರಿಗೆ ಬೆದರಿ, ಅವನಿಗೆ ಡೊಗ್ಗು ಸಲಾಂ ಹಾಕುತ್ತಿರುವಾಗ, ಅವನ ಸರ್ವಾಧಿಕಾರದಲ್ಲಿ ಹೀಗೇಕೆ ನಡೆಯುತ್ತಿದೆ ಎಂದು ಕೇಳುವ ಧೈರ್ಯವಾದರೂ ಯಾರಿಗಿದ್ದೀತು?

* * *

ಅಮೆರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರು,

ಈಗಲೀಗ 'ಶಾಂತಿಸ್ಥಾಪನೆ' 'ಜನಾಂಗಗಳ ಐಕ' ಮೊದಲಾದ ಹಲವು ವಿಚಾರಗಳ ಕುರಿತು, ಪಕ್ಕನೆ ನಿದ್ರೆಯಿಂದೆದ್ದವರಂತೆ, ಗಟ್ಟಿಯಾಗಿ ಮಾತಾಡಲಾರಂಭಿಸಿದ್ದಾರೆ. 'ಅಮೆರಿಕವು, ಶಸ್ತ್ರವಿಸರ್ಜನೆಯ ಒಂದು ಕಾನ್ಫರೆನ್ಸಿಗಾಗಿ ಅಪೇಕ್ಷಿಸುತ್ತಿದೆ. ಭಯದಿಂದ ಉಂಟಾಗುವ ಶಾಂತಿಗೂ, ಖಡ್ಗಮೂಲವಾದ ಶಾಂತಿಗೂ ಭೇದವಿಲ್ಲ. ಬರೇ ಬಲಪ್ರಯೋಗವನ್ನು ತಂದು, ಶಾಸನಸಮ್ಮತವಾದ ಆಳಿಕೆಯ ಬದಲಿಗೆ ಪ್ರತಿಷ್ಠಿಸುವುದಾದರೆ, ಶಾಂತಿಯಾಗದು' ಎಂದಿದ್ದಾರೆ. ಆದರೆ ಇವೆಲ್ಲ ಮಾತುಗಳಿಂದ ಏನು ಫಲ? ಇದರಲ್ಲಿ, ಹೊಸ ವೇದಾಂತವೇನು? ಶಸ್ತ್ರವಿಸರ್ಜನೆಯ ಕಾನ್ಫರೆನ್ಸು ಹಿಂದೆ ನಡೆದುದು, ಎಷ್ಟು ಮಟ್ಟಿಗೆ ಸಾರ್ಥಕವಾಗಿದೆ? ಪುನಃ ಅದೇ ನಡೆಯಲಿ ಎನ್ನುವಲ್ಲಿ ಜಾಣತನವೇನು? ಅಮೆರಿಕವೂ, ಕಾರ್ಯತಃ ಶಸ್ತ್ರಾಸ್ತ್ರಗಳನ್ನು ಹೆಚ್ಚಿಸು[illegible]ವುದಿಲ್ಲವೇ? ಅನ್ನುವಾಗ, ತಾ[illegible] ತಕ್ಕು ನ[illegible], ಪ[illegible]ರು ಸುಭಗರಾಗಬೇ[illegible] ಆ ಮಾತಿನ [illegible] ಎಷ್ಟು!

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1-2-0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1[illegible] ರೂ. 3-0-0. ಅಂಚೆ ವೆಚ್ಚ ಬೇರೆ.

ಕಸ್ತೂರಿಮಿ[illegible]ಣ! ದಶಮೂಲ ಸುಖ[illegible]ದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖ ಸೇವನ ಎಂಬೀ ಮೂ[illegible] ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು-ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯು ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗು[illegible] ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ ರೂ. 2-0-0.
ಪೋಸ್ಟೇಜು ವಗೈರೆ ಬೇರೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

ಶ್ರೀ। ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕ ಮಾಡಿಯದೆ.

ANNOUNCEMENT

We beg to inform all customers, constituents, friends and well-wishers that Saturday, the 19th November 1938 the Birthday of our Founder, the late Mr. A. Subbarao Pai will be observed as a holiday at all our branch offices in the South Kanara District.

Estd: 1906
CANARA BANK LTD.

ವಿದೇಶ

ಫ್ರೆಂಚ್ ಪ್ರಧಾನರ ಸಮರ್ಥನೆ

'ಮ್ಯುನಿಚಿನಲ್ಲಿ ನಡೆದ ಸಂಧಿ ಸಕಾರಣವಾದದ್ದು; ಆ ಸಂಧಿಯಾಗದಿದ್ದರೆ ಯುದ್ಧವಾಗುತಿತ್ತು, ಯುದ್ಧವಾಗಿದ್ದರೆ, ಈಗಿನಗಿಂತ ಆಗಿನ ಪರಿಸ್ಥಿತಿ ಕೆಡುತ್ತಿತ್ತು' ಎಂದು ಫ್ರೆಂಚ್ ಪ್ರಧಾನ ಎಂ. ದಾಲ್ದಿಯರರು ನುಡಿದಿದ್ದಾರೆ.

ಜರ್ಮನಿಯ ಹಳೇ ಕಾಲನಿಗಳ ಕೇಳಿಕೆ

ಈ ಕೇಳಿಕೆ 'ಸರಿ' ಎಂದು, ಪೋಲೇಂಡಿನವರು ಜರ್ಮನಿಯ ಕಡೆ ನಿಂತಿದ್ದಾರೆ. ಪೋರ್ಚುಗಲ್ಲಿನ ಸಹಾನುಭೂತಿ ಎತ್ತ ಕಡೆ ಎಂಬುದು ಪ್ರಕಟವಾಗಿಲ್ಲವಾದರೂ, ಅಲ್ಲಿ ಏನೋ ಒಂದು ಗಾಳಿಗಂಟು ನಡೆಯುವಂತೆ ತೋರುತ್ತದೆ. ಈ ಮಧ್ಯೇ, ತ್ಯಾಂಗನೀಕವು, ಬ್ರಿಟಿಶರ ಕೈಕೆಳಗೇ ಉಳಿಯಬೇಕೆಂದು ಅಲ್ಲಿನ ಯುರೋಪೀಯರ ಚಳವಳವೆದ್ದಿದೆ.

ಬ್ರಿಟಿಶ್ ಮಂತ್ರಿಮಂಡಲದಲ್ಲಿ ಹೊಸ ನೇಮಕ

ರಾಜಿನಾಮೆ ..ಕೊಟ್ಟ ಎಡ್ಮಿರಾಲಿಟಿಯ ಪ್ರಥಮ ಪ್ರಭುಗಳಾದ ಮಿ. ಎ. ಡಫ್ ಕೂಪರರ ಸ್ಥಾನಕ್ಕೆ, ಅರ್ಲ್ ...ಸ್ಟಾನ್‌ಹೋಪರನ್ನೂ, ಅವರ ಸ್ಥಾನಕ್ಕೆ ವಿದ್ಯಾಂಗದ ಬೋರ್ಡಿನ ಪ್ರೆಸಿಡೆಂಟರಾಗಿ ಅರ್ಲ್ ಡಿ. ಲಾ. ವಾರರನ್ನೂ ನೇಮಿಸಲಾಗಿದೆ.

ಜಪಾನಿನ ಮೇಲೆ ಯುನೈಟೆಡ್ ಸ್ಟೇಟ್ಸಿ.. ಆಕ್ಷೇಪ

'ಅಮೇರಿಕದ ...ರಿವಾಸಿಗಳನ್ನೂ, ಅವರ ಹಿತರಕ್ಷಣೆಯನ್ನೂ ವಾಗ್ದಾನದಂತೆ, ಜಪಾನು ...ನೋಡಿಕೊಳ್ಳುತ್ತಿಲ್ಲ' ಎಂದು, ಅಮೇರಿಕದ ಅಧಿಕಾರಿಗಳು, ಜಪಾನಿನವರಿಗೆ, ಲಿಖಿತ ಮೂಲಕ ತಿಳಿಸಿ, ಈ ಕಾರ್ಯವನ್ನು ಪ್ರಬಲವಾಗಿ ನಿಷೇಧಿಸಿದ್ದಾರೆ.

'ಪೂರ್ವ ದೇಶದಲ್ಲಿ ಬ್ರಿಟಿಷರಿಗಿನ್ನು ಪ್ರಾಮುಖ್ಯತೆ ಇಲ್ಲ!'

—ಹೀಗೆಂದು ಜಪಾನಿನ ಕಡೆಯ ರಾಯಭಾರಿಗಳೊಬ್ಬರು ಹೇಳುತ್ತಿದ್ದಾರೆ. '೧೦ ವರ್ಷಗಳಲ್ಲಿ ಚೀನದ ಆಡಳಿತೆಯ ವ್ಯವಸ್ಥೆಯನ್ನು, ಅಮೆರಿಕದ ರಾಜ್ಯಭಾರ ಪದ್ಧತಿಯಂತೆ ಏರ್ಪಡಿಸಲಾಗುತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳೊಡನೆ, ಈ ದಿಗ್ವಿಜಯದ ಫಲವನ್ನು ಹಂಚಿಕೊಂಡು ಉಣ್ಣಲು ಜಪಾನು ತಯಾರಿಲ್ಲ' ಎಂದೂ ಅವರೇ ಪ್ರಕಟಿಸಿರುತ್ತಾರೆ. ಸದ್ಯ, ಜಪಾನೀಯರು ಚೀನದಲ್ಲಿ ಆಕ್ರಮಿಸಿರುವ ಪ್ರದೇಶವು, ಜಪಾನ್ ಸಾಮ್ರಾಜ್ಯದ ಎರಡರಷ್ಟು ಎಂದು ಪ್ರಕಟವಾಗಿದೆ.

ಬ್ರಿಟನು ಹಿಟ್ಲರಿಗೆ ಮ್ಯುನಿಚಿನಲ್ಲಿ ತಲೆಬಾಗಿದ್ದೇಕೆ?

ಇದರ ಕಾರಣವು, ಬ್ರಿಟನಿನ ಯುದ್ಧ ಸಿದ್ಧತೆ, ಅಸಂಪೂರ್ಣವೆಂಬುದರಿಂದಲ್ಲ; ಯುರೋಪಿನಲ್ಲಿ ಯುದ್ಧವಾಗಿ, ಬ್ರಿಟನೂ ಅದರಲ್ಲಿ ಪ್ರವೇಶಿಸಿದರೆ, ಆಗ ಜಪಾನ್, ಆಸ್ಟ್ರೇಲಿಯಾ, ಇಂಡಿಯಾ ಮೊದಲಾದ ಬ್ರಿಟಿಶ್ ಸ್ವಾಸ್ಥ್ಯಗಳ ಮೇಲೆ ದಾಳಿ ನಡೆಸೀತೆಂಬ ಭಯವೇ ಕಾರಣ ಎಂದು ಕೆಲವು ಪತ್ರಿಕೆಗಳಲ್ಲಿ ಪ್ರಸಿದ್ಧಿಗೊಂಡಿದೆ.

ಅಮೆರಿಕದಲ್ಲಿ ಪಾನನಿರೋಧವು ಪುನಃ ಬರುವುದೇ?

ಈ ವಿಚಾರದಲ್ಲಿ ಅಲ್ಲಿ ಈಗ ಹೊಸ ಪರೀಕ್ಷೆ ನಡೆಯುವಂತಿದೆ. ಕಾರಣ ಪಾನಮತ್ತತೆಯಿಂದ ಆಗುವ ಹಾನಿ ಅಲ್ಲಿ ವಿಶೇಷವಾಗುತ್ತ ಬರುತ್ತಿದೆ. ಕಳೆದ ಒಂದೇ ವರ್ಷದಲ್ಲಿ ಕುಡಿಕರಾದ ಡ್ರ್ಯಾವರುಗಳಿಂದ ನೂರಾರು ಅಪಘಡಗಳಿಂದ ಸತ್ತವರು ೪೦ ಸಾವಿರ ಮಂದಿ; ಗಾಯಗೊಂಡವರು ೧೦ ಲಕ್ಷ ಮಂದಿ ಎಂದು ...ಕಟವಾಗಿದೆ.

ಜರ್ಮನಿಗೆ ಯಾರ ಮೇಲೆ ಕಣ್ಣು?

...ಯಶಃ ಪೋಲೆಂಡಿನ ಮೇಲೆ. ಅಲ್ಲಿ ...ಗ ಫೆಶಿಯಿಷ್ಟರ ಚಳವಳಿ ನಡೆಯುದಿಲ್ಲ. ... ನೋಡಿ, ಹಿಟ್ಲರ್ 'ಪೋಲೆಂಡಿನ ಪಾ...' ಮೇಲೆ ಬೀಳುವುದೂ ಸಂಭವವೆಂದು ...ಹೆದವೆದ್ದಿದೆ.

...ಶ್ಚಾತ್ಯರೂ ನಮ್ಮ ...ಳೇ ಕ್ರಮಕ್ಕೆ ಬರುತ್ತ...

ಮಾ ಮಂದಿರದಲ್ಲಿ ಒಂದು ಸೀಟಿಗೆ ಒಂದು ಬುಶೆಲ್ ಗೋಧಿ ಕೊಟ್ಟರಾಯಿತು; ಸಿನೆಮಾ ನೋಡಬಹುದು. ಹಾಗೇ ಒಬ್ಬ ಮ್ಯಾಜಿಸ್ಟ್ರೇಟ್ ಅಲ್ಲೊಂದು ಲಗ್ನ ಮಾಡಿಸಿದಾಗ, ತನ್ನ ಫೀಸ್ ಆಗಿ, ಮದುಮಗಳಷ್ಟು ತೂಕದ ಗೋಧಿಯನ್ನು ಸ್ವೀಕರಿಸಿದ. ಈಗ ಮಿಚಿಗನಿನ ಕ್ಷೌರಿಕರೂ, ತಮ್ಮ ಕೆಲಸದ ಕೂಲಿಯಾಗಿ, ಗೋಧಿಯನ್ನೇ ತೆಗೆದುಕೊಳ್ಳುತ್ತಿದ್ದಾರೆ. ಹಾಗಂದರೇನು, ನಮ್ಮ ಗ್ರಾಮಗಳ ಹಳೇ ಪದ್ಧತಿ, ನಮಗೆ ಬೇಡ, ಅವರಿಗೆ ಬೇಕೇನು?

ಜರ್ಮನಿಯಲ್ಲಿ ದಸ್ತಗಿರಿಗಳು

ಜರ್ಮನಿಯ ನಾನಾ ಭಾಗಗಳಲ್ಲಿ, ಯೆಹೂದಿಗಳ ದಸ್ತಗಿರಿಯಾಗಿದೆ. ಸಾವಿರಾರು ಮಂದಿ ಪೋಲೆಂಡಿನ ಯೆಹೂದಿಯರನ್ನು ಜರ್ಮನಿಯಿಂದ ಹೊರನೂಕುವ ಪ್ರಯತ್ನ ನಡೆದಿದೆ.

ಗ್ಲಾಸ್ಗೋ ಪ್ರದರ್ಶನ

ಮುಗಿಯಿತು. ಬ್ರಿಟನ್, ಡೊಮಿನಿಯನ್, ಕಾಲನಿಗಳ ಪ್ರದರ್ಶನಕಾರರಿಗೆ ಲಕ್ಷಾಂತರ ಪೌಂಡುಗಳ ಲಾಭವಾಯಿತು. ಪ್ರದರ್ಶನದ ಪ್ರೇಕ್ಷಕರ ಜುಮ್ಲಾ ಸಂಖ್ಯೆ ೧೨,೦೦೦,೦೦೦ ಮಂದಿ.

ಜನರಲ್ ಚಾಂಗ್-ಕೈ-ಶೇಕರ ಸಂದೇಶ

'ಯುದ್ಧರಂಗವು ರೈಲ್ವೆಗಳ ಪಶ್ಚಿಮ ದಕ್ಕಿಗೆ ತಿರುಗಿದೆಯಾಗಿ, ಕೊನೆಗೆ ಜಯಲಕ್ಷ್ಮಿ ನಮಗೆ ಕರಗತವಾಗುವ ಕಾಲ ಸಮೀಪಿಸಿತೆಂದೇ ತಿಳಿಯಬೇಕು' ಎಂದು ಜನರಲ್ ಶೇಕ್‌ರವರು, ಚೀನದ ಪಾರ್ಲಿಮೆಂಟಿಗೆ ಒಂದು ವೀರವಾಣಿಯ ಸಂದೇಶ ಕಳುಹಿಸಿ, ಚೀನದ ಮುಂದಿನ

ಜನರಲ್ ಚಾಂಗ್-ಕೈ-ಶೇಕ್‌ರವರು.

ಯುದ್ಧಸಿದ್ಧತೆಯನ್ನು ವಿವರಿಸಿದ್ದಾರೆ. ಈ ಸಂದರ್ಭದಲ್ಲಿ 'ಜಪಾನು ಚೀನದಲ್ಲಿ ತಾನು ನುಂಗಿರುವುದನ್ನು ಜೀರ್ಣಿಸಿಕೊಳ್ಳುವುದು ಕಷ್ಟ. ಯುದ್ಧದ ಖರ್ಚು ಆಗಲೇ ೯೯,೦೦೦ ಮಿಲ್ಯ ಯನ್ನಿನಷ್ಟಾಗಿದೆ. ಇದರಲ್ಲಿ ಹೆಚ್ಚಿನ ಅಂಶ ಸಾಲ' ಎಂದೂ ಪತ್ರಿಕೆಗಳು ಸಾರುತ್ತಿವೆ.

ಮಾರ್ಸೇಲಿಸ್‌ನಲ್ಲಿ ಪ್ರಚಂಡ ಬೆಂಕಿ

ಎದ್ದು ವಿಪರೀತ ನಷ್ಟವಾಗಿದೆ. ೧೦೦ ಮಂದಿ ವ್ಯಕ್ತಿಗಳು ಸತ್ತರೆಂದು ಅಂದಾಜಾಗಿದೆ. ನಷ್ಟ ಸುಮಾರು ೩೦,೦೦೦,೦೦೦ ಫ್ರಾಂಕುಗಳು.

ಸಮಗ್ರ ಅರಬೀ ಸಂಸ್ಥಾನ

ಪ್ಯಾಲಸ್ಟೈನ್, ಇರಾಕ್ ಮತ್ತು ಸಿರಿಯಾ ರಾಜ್ಯಗಳನ್ನು ಒಳಗೊಂಡ ಒಂದು ಸಮಗ್ರ ಅರಬರ ಸಂಸ್ಥಾನವನ್ನು ನಿರ್ಮಿಸುವ ಉದ್ದೇಶಕ್ಕಾಗಿ, ಪ್ರಬಲವಾದ ಒಂದು ಸಂಸ್ಥೆ ಕೆಲಸ ಮಾಡುತ್ತಿದೆ ಎಂದು ಬರ್ಲಿನಿನ ವಾರ್ತಾದಾಯಕನ ವರದಿ.

ಜೆರುಸಲೇಂನಲ್ಲಿ

ಸೈನ್ಯ-ಶಾಸನಗಳ ಬಿಗಿ ಭದ್ರವಾದರೂ, ಅತ್ಯಾಚಾರಗಳು ಕಡಿಮೆಯಾಗಿಲ್ಲ. ಕಳೆದ ವಾರದ ಒಂದೇ ಒಂದು ದಿನದಲ್ಲಿ, ೬ ಮಂದಿ ಅರಬ ರೈತರನ್ನು ಭಯೋತ್ಪಾದಕರು, ಗುಂಡಿಟ್ಟು ಕೊಂದರು; ಗಾಜಾದಲ್ಲಿ ಬಾಂಬು ಬಿಸಾಡಿದರು; ಜಾಫಾದಲ್ಲಿ ರೈಲ್ವೆ ಸ್ಟೇಶನನ್ನು ಆಕ್ರಮಿಸಿ ೩೭ ಸ್ಟರ್ಲಿಂಗನ್ನು ಹೊತ್ತುಕೊಂಡು ಹೋದರು.

"ಕಾಲನಿಗಳನ್ನು ಹಿಂತಿರುಗಿಸಿ"

ಎಂಬ ಕೇಳಿಕೆಯನ್ನು ಕಾಲನಿಗಳ ಲೀಗಿನ ...ಕರಾದ ಹರ್ ... ಇಪ್ಪ್ರೆಂಬ ...ರ್ಗಿನ



ಬಹಳ ಸಮಯದ ಹಿಂದಿನಿಂದ ಸೀಮೆನ್ಸ್‌ರವರು ಉಷ್ಣವಲಯಗಳಿಗೆ ಪ್ರತ್ಯೇಕವಾಗಿ ತಕ್ಕದ್ದಾದ ಟೆಲಿಫೋನುಗಳನ್ನು ಮಾಡುತ್ತಿದ್ದು, ಮತ್ತವುಗಳ ಪ್ರತ್ಯೇಕವಾದ ಉಷ್ಣವಲಯದ ಕೇಬಲಿನ ಉಪಯೋಗವು ಅತ್ಯಂತ ತುಫಾನಿನ ಕಾಲದಲ್ಲಿಯೂ ಸಂಪೂರ್ಣ ವಿಶ್ವಾಸಾರ್ಹತೆಯನ್ನು ಭದ್ರಮಾಡುತ್ತದೆ.

ಸೀಮೆನ್ಸ್ (ಇಂಡಿಯಾ) ಲಿಮಿಟೆಡ್.
167, ಬ್ರಾಡ್ವೆ, ಪಿ. ಒ. ಬಾಕ್ಸ್ ನಂ. 1203, ಮದ್ರಾಸ್.
ಫೋನ್ 4233 ಮತ್ತು 2945.

SmTEK 2

ದೇಶದ ಆಚಾರ ತಿಳಿಯದಿದ್ದರೆ—ಫಜೀತಿ!

ಒಂದು ದೇಶದವನಿಗೆ, ಇನ್ನೊಂದು ದೇಶದ ಆಚಾರವ್ಯವಹಾರಗಳು ತಿಳಿಯದಿದ್ದರೆ, ಅದರಿಂದ ಆಗುವ ಅವಸ್ಥೆಗಳೂ, ಅನರ್ಥಗಳೂ ಎಷ್ಟೆಂದು, ಏನೆಂದು ಹೇಳಬರುವಂತಿಲ್ಲ. ಅದಕ್ಕೊಂದೆರಡು ಉದಾಹರಣೆ ಕೊಡೋಣ.

ಒಬ್ಬ ಆಂಗ್ಲೇಯ ಯುವಕ, ಬಲ್ಗೇರಿಯಾ ದೇಶಕ್ಕೆ ಹೋಗಿ, ಅಲ್ಲಿನ ಆಚಾರಗಳನ್ನು ತಿಳಿಯದೆ, ಅನೇಕ ತೊಂದರೆಗಳಿಗೆ ಗುರಿಯಾದ. ಅವನು ಅಂಥ ಯಾವ ದೊಡ್ಡ ತಪ್ಪನ್ನೂ ಮಾಡಿದವನಲ್ಲ; ಅವನ ತಪ್ಪೆಂದರೆ ಇಷ್ಟೇ; ಅವನು ಆ ದೇಶದ ಆಚಾರವನ್ನು ಅರಿತವನಲ್ಲ.

ಅವನು ಒಂದು ದಿನ, ಬಲ್ಗೇರಿಯದ ಒಂದು ಗ್ರಾಮಕ್ಕೆ ಹೋದ. ಅಲ್ಲಿ ಆ ದೇಶದ, ಒಬ್ಬ ಸುಂದರ ಯುವತಿಯನ್ನು ಕಂಡು ನೋಡುತ್ತಾ ನಿಂತ. ಅವಳೂ ಪಾಪ, ಹಾಗೇ ಇವನನ್ನು ದೃಷ್ಟಿಸಿ ನೋಡುತ್ತಲೇ ನಿಂತುಕೊಂಡಳು. ಆಗ ಯುವಕನು, ತನಗೆ ತಿಳಿದ ಯಾವತ್ತು ಭಾಷೆಗಳಲ್ಲಿಯೂ ಆಕೆಯನ್ನು ಮಾತಾಡಿಸಿದ; ಆ ಮೇಲೆ ತನ್ನೊಡನೆ ನರ್ತನ ಮಾಡಲು ಸೂಚಿಸಿದ. ಅದಕ್ಕೆ ಅವಳು, ಮುಗುಳುನಗೆ ನಕ್ಕು ತಲೆ ಮಾತ್ರ ಆಡಿಸಿದಳು. ಯುವಕನು, ಅದನ್ನು ಸಾಂಕೇತಿಕ ಒಪ್ಪಿಗೆ ಒಂದು ಭಾವಿಸಿ, ತಾನು ಇಳಿದ ಹೋಟಲಿನಲ್ಲಿ, ಅವಳೊಡನೆ ಎರಡು ಸಲ ನರ್ತಿಸಿದ. ಆದರೂ, ಅಷ್ಟರಿಂದಲೇ ತೃಪ್ತನಾಗದೆ, ಅವನು ಇನ್ನೂ ಆಕೆಯೊಡನೆ, ಒಂದೆರಡು ಬಾರಿ ನರ್ತಿಸಬೇಕೆಂದು ಯೋಚಿಸಿದ. ಹಾಗೂ ಮೂರನೆಯ ಬಾರಿ, ಆಕೆಯೊಡನೆ ನರ್ತಿಸಲು ಸಿದ್ಧನಾದನು.

ಅಷ್ಟರಲ್ಲಿ, ಆ ಹೊಟೆಲಿನ ಯಜಮಾನಿ ಅಲ್ಲಿಗೆ ಬಂದು, ಬಹಳ ಮರ್ಯಾದೆಯಿಂದ, 'ಏನ್ರಿ! ಇದು? ಈ ಹುಡುಗಿಯನ್ನೇನು ನೀವು ಮದುವೆಯಾಗುತ್ತೀರಾ?' ಎಂದು ಅವನನ್ನು ಕೇಳಿದಳು. ಯುವಕ ಆ ಮಾತು ಕೇಳಿ, ಬೆಪ್ಪಾಗಿ ಹೋದ.

'ನಮ್ಮ ದೇಶದಲ್ಲಿ, ಒಬ್ಬ ಯುವಕ ಒಬ್ಬ ಯುವತಿಯೊಡನೆ ೩ ಸಲ ನರ್ತನ ಮಾಡಿದನೆಂದರೆ, ಅವನಾಕೆಯನ್ನು ಮದುವೆಯಾಗಲು ನಿರ್ಧರಿಸಿರುವನೆಂದೇ ಸಿದ್ಧಾಂತ' ಎಂದು ಆಕೆ ತಿಳಿಸಿದಳು.

ಯುವಕನು ಕೇಳಿ, ನಾಚಿಕೆಯಿಂದ, ಮರುಮಾತಾಡದೆ ಓಡಿಹೋದವನು ಮತ್ತೆ ಪತ್ತೆ ಇಲ್ಲ.

* * *

ಡೆನ್ಮಾರ್ಕಿನಲ್ಲಿ ಇನ್ನೊಂದು ಪದ್ಧತಿಯುಂಟು. ಅದನ್ನು ತಿಳಿಯದೆ, ಇನ್ನೊಬ್ಬ ಆಂಗ್ಲ ಯುವಕನೂ ಸಿಕ್ಕಿಬಿದ್ದ.

ಅವನು ಡೆನ್ಮಾರ್ಕಿಗೆ ಹೋಗಿ, ಒಂದು ಮನೆಯಲ್ಲಿ ವಾಸವಾಗಿದ್ದ. ಅವನಿಗಾ ದೇಶಭಾಷೆ ಸುಟ್ಟು ತಿನ್ನಲಿಕ್ಕೂ ಬಾರದು.

ಇವನು, ವಾಸಮಾಡಿದ ಆ ಮನೆಯಲ್ಲಿಯೇ, ಒಬ್ಬ ರೂಪವತಿಯಾದ ಯುವತಿಯೂ ಇದ್ದಳು. ಆಕೆಯೊಡನೆ, ಸ್ನೇಹಭಾವದಿಂದ ಮಾತಾಡಲು ಅವನಿಗೆ ಆಶೆಯಾಯಿತಾದರೂ, ಪಾಪ, ಭಾಷೆ ತಿಳಿಯದು.

ನಿಜವಾದ ಭಾಷೆ ತಿಳಿಯದಿದ್ದರೂ, ಪರಸ್ಪರ ಯುವಕ, ಯುವತಿಯರು, ಸಾಮಾನ್ಯವಾಗಿ, ತಮ್ಮದೇ ಆದ ಅದೊಂದು ಕಳ್ಳ ಭಾಷೆಯಲ್ಲಿ, ಸಾಂಕೇತಿಕ ಅಥವಾ ಸೌ...ಜ್ಞಾ ಪ್ರಕರಣದ ಮೂಲಕ ಮಾತಾಡಿಕೊಳ್ಳುವ ರೂಢಿ ಎಲ್ಲೆಲ್ಲೂ ಇರುವುದೇ ಅಷ್ಟೆ. ಅದರಂತೆ, ಇವರಿಬ್ಬರೂ ಪರಸ್ಪರ ಮಾತಾಡುತ್ತಿದ್ದರು.

ಹೀಗಿರಲು, ಒಂದು ದಿನ, ಈ ಯುವಕ, ಪೇಟೆಗೆ ಹೋಗಿ, ಒಳ್ಳೇ ಸೊಗಸಾದ ಹೂವುಗಳಿಂದ ಮಾಡಿದ ಒಂದು ಪುಷ್ಪಗುಚ್ಛವನ್ನು ತಂದು, ಆಕೆಯ ಕೈಗೆ ಕೊಟ್ಟ. ಅದನ್ನು ನೋಡಿದಳೋ ಇಲ್ಲವೊ!—ಆ ಯುವತಿ, ಕೂಡಲೇ ಗಟ್ಟಿಯಾಗಿ ಕಿರಿಚಿಕೊಂಡು, ಏಕಪ್ರಕಾರ ಅಳಲಾರಂಭಿಸಿದಳು.

ಹುಡುಗಿ ಹೀಗೆ ಅರಚಿಕೊಂಡು ಅಳುತ್ತಿರುವುದನ್ನು ಕೇಳಿ, ಮನೆಯವರೆಲ್ಲರೂ ಗಾಬರಿಯಾಗಿ ಓಡಿ ಬಂದರು. ದೊಡ್ಡ ಗಲಭೆಗಿಟ್ಟಿತು. ಕೊನೆಗೆ ಅದರ ಕಾರಣವೂ ತಿಳಿದುಬಂತು.

ಡೆನ್ಮಾರ್ಕ್ ದೇಶದಲ್ಲಿ, ಹೀಗೆ ಯುವಕನೊಬ್ಬನು, ಯುವತಿಯೊಬ್ಬಳಿಗೆ, ಒಂದು ಪುಷ್ಪಗುಚ್ಛವನ್ನು ಅರ್ಪಿಸಿದಲ್ಲಿ, ಆಕೆಯನ್ನು ಅವನು, ಸ್ವೇಚ್ಛಾವಿಹಾರಕ್ಕೆ ಕರೆಯುವ ಸಂಕೇತವೇ ಅದೆಂದು ಅರ್ಥ. ಆದುದರಿಂದಲೇ, ಮಾನವತಿಯಾದ ಆ ಯುವತಿಯೂ, ಆ ರೀತಿ ಕಿರಿಚಿಕೊಂಡು, ಅಳಲು ಕಾರಣ.

ಯುವಕನು ತನ್ನ ಅಚಾತುರ್ಯವನ್ನು ಈಗ ತಿಳಿದುಕೊಂಡು, ಅಲ್ಲಿಂದ ಹೇಳದೆ ...ಳದೆ ಜಾರಿಬಿಟ್ಟ.

ದೇಶದ ಸಂಪ್ರದಾ...

ಹಂಗೇರಿಯವರು

ಜುಗೋಸ್ಲಾವೋಕಿಯದಲ್ಲಿ ತಮಗೆ ದೊರೆತ ರಾಷ್ಟ್ರಗಳನ್ನು ಇಷ್ಟರಲ್ಲೇ ಕೈವಶ... ಕೊಳ್ಳಲಿದ್ದಾರೆ. ಅಂತ...

...ಯರ್ಸ್
ಕನ್ವಲ್ಶನ್
ಕ್ಯೂರ್

[illegible]

ಜಯಕರ್ ಬ್ರದರ್ಸ್,
ಗಿರಗಾಂ ಮುಂಬಾಯಿ.

The Canara Banking Corporation, Udipi, Ltd.
(Incorporated in British India)
ESTD: 1906.

MEMBER:—
RESERVE BANK OF INDIA
&
BANKERS' CLEARING HOUSE, MADRAS.

Capital Authorised, Issued & Subscribed	Rs. 3,50,000/-
Paid up Capital	Rs. 3,03,205/-
Reserves	Rs. 3,88,842/-

RATES OF INTEREST ON DEPOSITS:

3 months ...	... 2½% p. a.	12 or 24 months ...	3½% p. a.
6 or 9 months	... 3 % p. a.	Short-Term...	... 2 % p. a.

ALL KINDS OF BANKING TRANSACTIONS UNDERTAKEN.

ಕಂಠೀರವ
KANTEERAVA
KANARESE, BI-WEEKLY

ಜೀವನವು ವ್ಯಾಪಾರದ ಸಾಮಾನುಗಳಂತಿರುವುದಲ್ಲ. ಆದ್ದರಿಂದ ದೃಢ ಪ್ರಯತ್ನದಿಂದ ಗುಣವೂ ಬೆಲೆಯೂ ಉಂಟಾಗುವಂತೆ ಮಾಡಿ ಲೋಕಾಭಿವೃದ್ಧಿಗೆ ಉಪಯೋಗಿಸತಕ್ಕದ್ದು.
ಸೂಕ್ತಿಮಾಲೆ.

XX]　　ಮಂಗಳೂರು, ತಾ. ೧—೧೧—೧೯೩೮　　[೬೦
೧೮೬೦ ಬಹುಧಾನ್ಯ ಸಂ। ಕಾರ್ತಿಕ ಶು। ೯ ಕುಜವಾರ

ಉಪದೇಶದ ಉದ್ಗಾರ ಸಾರೋದ್ಧಾರ!

ಡಾಕ್ಟರ ಅಂಬೇಡ್ಕರರವರ ಹೆಸರು, ಈಗೆಲ್ಲರಿಗೂ ಸಾಮಾನ್ಯ ತಿಳಿದಿದೆ. ಅದೇ, ಕೆಲವು ವರ್ಷಗಳ ಹಿಂದೆ, ಅವರ ಹೆಸರನ್ನು ಕೇಳಿದವರು ಕೂಡ ಬಹು ಮಂದಿ ಇರಲಿಲ್ಲ. ಹಾಗಾದರೆ, ಆ ಹೆಸರಿಗೆ ಅಷ್ಟು ಪ್ರಾಶಸ್ತ್ಯ, ಸೋಡ್ತಿಯಲ್ಲಿ ಸಂಪತ್ತು ಸಿಕ್ಕಿದಂತೆ, ಏಕಾಏಕಿ ಎಲ್ಲಿಂದ ಬಂದಿತು? ಗ್ರೇಟ್ ಬ್ರಿಟನಿನ ಆ ರೌಂಡ್ ಟೇಬಲ್ ಕಾನ್ಫರೆನ್ಸಿನ ಶುಭ ಮುಹೂರ್ತದಲ್ಲಿ, ಹಿಂದೀ ರಾಷ್ಟ್ರೀಯತ್ವದ ಗೌರವಕ್ಕೆ ಕುಂದು ಬರುವಂತೆ, ಒಳಗಿಂದೊಳಗೆ ಕುಟಿಲ ನೀತಿಯ ಪ್ರಯೋಗಗಳು ನಡೆಯುತ್ತಿದ್ದಾಗ, ಆಗ ಮನ್ನಣೆಯ ಮಣೆ ದೊರೆತವರಲ್ಲಿ ಇವರೊಬ್ಬರು; ಭೂಷಣದ ಪ್ರಾಶಸ್ತ್ಯ, ಪ್ರತಿಷ್ಠೆಗಳನ್ನು ಅನಾಯಾಸವಾಗಿ ಪಡೆದವರಲ್ಲಿ ಇವರೊಬ್ಬರು. ಪತಿತ ವರ್ಗದಲ್ಲಿ, ಇವರಿಂದಲೂ ಹೆಚ್ಚಿನ ಸಾರ್ವಜನಿಕ ಸೇವೆಯನ್ನು ಸಲಿಸಿದ್ದ ಇತರ ಮಹನೀಯರೆಷ್ಟೋ ಮಂದಿ ಇದ್ದರೂ, ಮಾನ ಮನ್ನಣೆಯ ಭಾಗ್ಯವು ಇವರನ್ನೇ ಕಾದಿದ್ದಿತು. ಅದೇ, ರಹಸ್ಯಮಯವಾದ ಆ ಬ್ರಿಟಿಶ್ ಡೆಪ್ಲೊಮೆಸಿಯು, ಇವರನ್ನೇ ತನ್ನ ಬಲಗೈ ಬಂಟರಲ್ಲೊಬ್ಬನನ್ನಾಗಿ ಆಯ್ದುಕೊಂಡು, ಇವರ ಮಾತಿಗೇ ತಲೆದೂಗಿ, ಇವರ ಮೈಮೇಲೆ, ಆ ಪ್ರಾಶಸ್ತ್ಯದ ಹೊರೆಯನ್ನು ತಂದು ಹೇರಿತು; ಪ್ರಾಮುಖ್ಯತೆಯ ಬಣ್ಣವನ್ನು ತಂದು ಮೆತ್ತಿತು. ಅಂದಿನಿಂದ, ಈ ಡಾಕ್ಟರರು, ತಾವು ಯಾವ ಕಾರ್ಯಕ್ಕಾಗಿ ಉಪಯೋಗಿಸಲ್ಪಡಬೇಕೆಂದು ಆ ಬ್ರಿಟಿಶ್ ಯಜಮಾನರ ಮನೋಗತವಿದ್ದಿತೋ, ಆ ಉದ್ದೇಶಸಾಧನೆಗಾಗಿ, ಕ್ರಮವರಿತು ತಮ್ಮ ಸೇವೆ ಸಲ್ಲಿಸಿ, ತಮ್ಮ ಆಶ್ರಯದಾತರಾದ ಪ್ರಭುಗಳನ್ನು, ಸಂತೋಷದಿಂದುಬ್ಬಿ ಮೈಮರೆಯುವಂತೆ ಮಾಡಿರುತ್ತಾರೆ. ಅಷ್ಟೇ ಅಲ್ಲ; ನಮ್ಮ ರಾಷ್ಟ್ರೀಯ ಮುಖಂಡರಾದರೂ,—ಡಾಕ್ಟರರ ಅದೃಷ್ಟಬಲದಿಂದಲೋ ಎಂಬಂತೆ,—ಪೂನೆಯ ಸಂಧಿ ಕಾಲದಲ್ಲಿ, ಇವರನ್ನು ಪತಿತ ವರ್ಗದ ಮುಂದಾಳುಗಳೆಂದೇ ಒಪ್ಪಿ ವ್ಯವಹರಿಸಿದ ಮೂಲಕ, ಇವರ ಸ್ಥಾನಮಾನವನ್ನು ಬಲಗೊಳಿಸಿರುವ ಈ ವಿದ್ಯಮಾನವನ್ನೂ, ದೇಶದ ಪ್ರಜೆಗಳ ಮುಂದೆ, ತಕ್ಕ ಹಾಗೆ ಉಪಯೋಗಿಸಿಕೊಳ್ಳಲು, ಇವರೆಂದಿಗೂ ಮರೆಯಲಿಲ್ಲವೆಂಬುದನ್ನು ಎಲ್ಲರೂ ಬಲ್ಲರು.

ಇಂತಹ ಗೃಹಸ್ಥರೊಬ್ಬರು, ಅಹಮ್ಮದಾಬಾದಿನ ಒಂದು ಸಾರ್ವಜನಿಕ ಭಾಷಣದಲ್ಲಿ,—'ಗಾಂಧಿಯವರಾಗಲೀ, ಕಾಂಗ್ರೆಸೇ ಆಗಲೀ ಪತಿತ ವರ್ಗಕ್ಕೆ ಕೊಂಚವಾದರೂ ಉಪಕಾರ ಮಾಡುವರೆಂಬ ವಿಶ್ವಾಸ ಭರವಸೆಗಳು ನನಗಿಲ್ಲ' ಎಂದೇ, ಅಲ್ಲಿ ನಿರಾಶೆಯ ಉದ್ಗಾರಗಳನ್ನು ಸುರಿಸಿರುವುದೇನೂ ಆಶ್ಚರ್ಯವಲ್ಲ. ಇವರ ಈ ಮಾತಿಗೆ ಕಾರಣಗಳು ಮೂರು. 'ರೌಂಡ್ ಟೇಬ್ಲ್ ಕಾನ್ಫರೆನ್ಸಿನ ಕಾಲದಲ್ಲಿ, ಪತಿತ ವರ್ಗಕ್ಕಾಗಿ ಸ್ಥಾನಗಳನ್ನು ಕಾದಿಡಬೇಕೆಂಬ ಕೇಳಿಕೆಯನ್ನು, ಗಾಂಧಿಯವರು ಮನ್ನಿಸಲಿಲ್ಲ. ಪತಿತ ವರ್ಗದ ಒಬ್ಬ ಸದಸ್ಯನನ್ನು ಸೇರಿಸಿಕೊಳ್ಳುವಂತೆ, ಗಾಂಧಿಜಿಯವರು, ಕಾಂಗ್ರೆಸ್ ಮಂತ್ರಿಮಂಡಲವನ್ನು ಒತ್ತಾಯ ಪಡಿಸಲಿಲ್ಲ. ಪತಿತ ವರ್ಗದ ಉನ್ನತಿಗಾಗಿ, ಹಿಂದಿನ ಸರಕಾರವು ನೇಮಿಸಿದ್ದ ಅದೊಂದು ಕಮಿಟಿಯ ಶಿಫಾರಸುಗಳನ್ನು, ಜಾರಿಯಲ್ಲಿ ತರಲು, ಬೊಂಬಯಿಯ ಕಾಂಗ್ರೆಸ್ ಮಂತ್ರಿಮಂಡಲವು, ಎಳ್ಳಿನ ಏಳು ಭಾಗದಷ್ಟೂ ಪ್ರಯತ್ನಿಸಲಿಲ್ಲ.' ಆದ್ದರಿಂದಲೇ, ಡಾಕ್ಟರ್ ಸಾಹೇಬರೂ, ತಮ್ಮವರಿಗೆ, 'ನೀವು ಕಾಂಗ್ರೆಸಿನಿಂದ ದೂರವಾಗಿರಿ; ಅಥವಾ ನಿಮ್ಮದೇ ಒಂದು ಪ್ರತ್ಯೇಕ ಸಂಸ್ಥೆಯನ್ನು—ಸ್ವತಂತ್ರ ಲೇಬರ್ ಪಾರ್ಟಿಯನ್ನು—ರಚಿಸಿಕೊಳ್ಳಿ' ಎಂದಿದ್ದಾರೆ. ಸದ್ಯ, 'ಮುಸ್ಲಿಮರಿಗೊಂದು ಫೆಡರೇಶನ್; ನಾನ್ ಮುಸ್ಲಿಮರಿಗೊಂದು ಫೆಡರೇಶನ್' ಎಂಬ ಮುಸ್ಲಿಮ್ ಲೀಗಿನ ಕೇಳಿಕೆಯಂತೆ, 'ನೀವೂ ಒಂದು ಮೂರನೆಯ ಫೆಡರೇಶನಿಗಾಗಿ ಕೇಳಿ' ಎಂದೂ ಇವರು ಉಪದೇಶಿಸದಿದ್ದುದು, ದೊಡ್ಡ ಪುಣ್ಯವೇ ಎನ್ನಿ!

ಡಾಕ್ಟರರ ಈ ಆರೋಪಗಳು, ಎಷ್ಟು ಮಟ್ಟಿಗೆ ಸಕಾರಣ, ಸಯುಕ್ತಿಕ ಮತ್ತು ವಿಹಿತ ಎಂಬುದನ್ನು, ಬಲ್ಲವರು ಬಲ್ಲರು. ಅಥವಾ ಈ ಆರೋಪಗಳಿಗೆ ತಕ್ಕ ಉತ್ತರ ಹೇಳಲು ಸಮರ್ಥರೇ ಆದ ಮಹಾತ್ಮಾಜಿಯವರಾಗಲೀ, ಬೊಂಬಯಿ ಪ್ರಭುತ್ವದವರಾಗಲೀ ಉತ್ತರ ಕೊಡದೆ ಇರಲಾರರೆನ್ನೋಣ. ಆದರೆ, ವಸ್ತುತಃ, ಮಹಾತ್ಮಾಜಿಯವರು ಹರಿಜನರಿಗಾಗಿ ಏನು ಮಾಡಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದು ಲೋಕಕ್ಕೇ ತಿಳಿದಿದೆ; ಹರಿಜನರ ಸರ್ವತೋಮುಖವಾದ ಉನ್ನತಿಗಾಗಿ ಸಾಧಿಸುತ್ತಿರುವ ಗಾಂಧಿಜಿಯವರು, ತಮ್ಮ ಅಸ್ಪೃಶ್ಯತಾ ನಿವಾರಣೆಯ ಚಳವಳದಿಂದ ಸನಾತನ ಹಿಂದೂಗಳ ಕಣ್ಣಿಗೆ ಶೂಲಪ್ರಾಯರಾಗಿದ್ದಾರೆಂಬುದೂ ಡಾಕ್ಟರರಿಗೇ ಗೊತ್ತಿದೆ. ಹಿಂದೂಗಳಾದ ...ವರು, ಹಿಂದೂಗಳೊಡನೆಯೇ ಇರಬೇಕೆಂಬ ತತ್ವವನ್ನು ಅನು... ರೌಂಡ್ ಟೇಬ್ಲ್ ಕಾನ... ...ಹಾತ್ಮಾಜಿಯವರು, ಬಿಗಿ ಹಿಡಿದಿದ್ದ... ...ವದು

ಹರಿಜನರ ಆರ್ಥಿಕ, ಸಾಮಾಜಿಕ, ರಾಜಕೀಯ ಉನ್ನತಿಗಾಗಿ, ಡಾಕ್ಟರರವರು ಮಾಡಿರುವ ಮಹತ್ಕಾರ್ಯಗಳೇನೆಂಬುದು ಪ್ರಪಂಚಕ್ಕೆ ತಿಳಿಯದ ಸಂಗತಿಯಾದರೂ, ಆ ದಿಕ್ಕಿನಲ್ಲಿ ಇತರರು ಮಾಡಿರುವ ಯತ್ನಗಳನ್ನು ಖಂಡಿಸಿ, ಟೀಕಿಸಿ ಇತರರ ಆ ಪ್ರಸಿದ್ಧವಾದ ಯತ್ನಗಳೂ ತಮಗೆ ತಿಳಿಯದ ಹಾಗೆ, ಮರೆಮಾಜುವ ಜಾಣತನದ ಅಭ್ಯಾಸವು ಇವರಲ್ಲಿ ಉಂಟೆಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದುದೇ. ಉದಾಹರಣೆಗಾಗಿ, ಪೂನಾ ಸಂಧಿಯನ್ನೇ ತೆಗೆದುಕೊಳ್ಳಿ! ಅದರಲ್ಲಿ, ಇವರೂ ಪ್ರಾಮುಖ್ಯ ಭಾಗ ವಹಿಸಿರಲಿಲ್ಲವೇ? ಆಗ, ಸಮಗ್ರ ಹಿಂದೂ ದೇಶಕ್ಕೆ, ಹಿಂದೂ ಪ್ರಪಂಚಕ್ಕೆ ಇದರಿಂದ ಅನ್ಯಾಯವಾಯಿತೆಂಬ ಕೂಗು ಏಳಲಿಲ್ಲವೇ? ಅದನ್ನೀಗ ಡಾಕ್ಟರರು, ಹೇಗೆ ಮರೆತರು?

ಡಾಕ್ಟರರು, ತಾವೇ ಪತಿತ ವರ್ಗದ ಆಜನ್ಮಸಿದ್ಧ ಹಕ್ಕಿನ ರಕ್ಷಕರೆಂದು ಭಾವಿಸಿ, ಅದರ ವಿಚಾರದಲ್ಲಿ, ನಿಸ್ಸೀಮ ಪ್ರೇಮವುಂಟೆಂದು ತೋರ್ಪಡಿಸಿಕೊಳ್ಳುತ್ತಾರೆ. ಆದರೆ, ಪತಿತ ವರ್ಗಕ್ಕಾಗಿ ಮಹಾತ್ಮಾಜಿಯವರ್...ಗಲೀ, ಅವರ ಕೆಲ ಅನುಯಾಯಿಗಳಾಗಲೀ, ...ಲ್ಲಿಸಿದ ಸಾರ್ವಜನಿಕ ಸೇವೆಯ ಮುಂದೆ, ...ಂದು ನಿಮಿಷವಾದರೂ, ಇವರ ಬಾಯಿ ಪಟಾ...ಯ ಫಿರಂಗಿ ನಿಲ್ಲಬಲ್ಲುದೇ? ಕಣ್ಣಿದ್ದವರೆಲ್ಲ..., ಪತಿತ ವರ್ಗದ ನಿಜವಾದ ಸ್ನೇಹಿತರ್ಯಾರೆಂದು ...ತಿಳಿಯಬಲ್ಲರು. ಕಾಂಗ್ರೆಸ್ ಪ್ರಭುತ್ವದ ಪ್ರಾಂತಗಳಲ್ಲಿ, ಹರಿಜನರಿಗಾಗಿ ಯಾವ ಉನ್ನತಿಸಾಧನೆಯ ಕಾರ್ಯಗಳು ನಡೆಯುತ್ತಿವೆ ಎಂದು ವಿ...ರಿಸಲು ಹೊ...ಟಿದ್ದ, ಬಂಗಾಳದ ಶೆಡ್ಯೂಲ...ಕಾಸ್ಟ್ ಮುಖಂಡರ ವಾರ್ತೆಯೇನೂ ಹಿಂದಿ... ಮಾತಲ್ಲವಷ್ಟೇ ಅನ್ನುವಾಗ, ಡಾಕ್ಟರರು, ಆ ಮುಖಂಡರು ಬರೆದಿ... ಆ ಹೇಳಿಕೆಯನ್ನಾದರೂ ಓದಿಕೊಂಡು, ತೃಪ್ತಿ... ಪಡಬಾರದಾಗಿದ್ದಿತೇ? ಮುಖ್ಯ, ಬ್ರಿಟಿಶ್ ದೊರೆತನವು ಸ್ಥಾನಮಾನಗಳನ್ನು ತಂದು ಹೇರಿದಾಗ ಇದ್ದ ಮನೋವೃತ್ತಿಯನ್ನು ಎಂದಿಗೂ ಬಿಡಬಾರದು; ಮಂತ್ರಿಪದವಿಯನ್ನು ಮರೆಯಬಾರದು ಎಂಬುದೇ ಇವರ ಉದ್ದೇಶವಿರಬಹುದು; ಈ ಉದ್ದೇಶವಿರುವವರಿಗೆ, ಇತರರು ಹರಿಜನರಿಗಾಗಿ ಮಾಡುತ್ತಿರುವ ಉಪಕಾರ ಕಾರ್ಯಗಳು ಗೋಚರಿಸುವುದಾದರೂ ಹೇಗೆ?

'ಫೆಡರೇಶನನ್ನು ಒತ್ತಾಯದಿಂದ ಹೇರಿದರೆ!'

'ಬ್ರಿಟಿಶ್ ಪ್ರಭುತ್ವದವರು, ನಮ್ಮ ಮೇಲೆ ಫೆಡರೇಶನನ್ನು ಹೇರಲು ಪ್ರಯತ್ನಿಸುತ್ತಿದ್ದಾರೆ; ಆದರೆ, ಕಾಂಗ್ರೆಸ್, ಅದನ್ನು ವಿರೋಧಿಸಬೇಕೆಂದೇ ದೃಢಸಂಕಲ್ಪ ಮಾಡಿದೆ. ನಾವು, ವಿದೇಶೀಯರಿಂದ ರಚಿಸಲ್ಪಟ್ಟ ಒಂದು ರಾಜ್ಯಾಂಗ ಘಟನೆಯನ್ನು ಸ್ವೀಕರಿಸೆವು; ನಾವು, ಹಿಂದುಸ್ಥಾನದ ಜನರ ನ್ಯಾಯಸಮ್ಮತವಾದ ಕೇಳಿಕೆಗಳನ್ನೂ, ಆಶಾಕಾಂಕ್ಷೆಗಳನ್ನೂ ಪೂರೈಸುವ ಅಂತಹದೊಂದು ರಾಜ್ಯಾಂಗ ಘಟನೆಯನ್ನು, ನಮ್ಮ ದೇಶೀಯರಿಂದಲೇ ತಯಾರ್ಮಾಡಿಸುವೆವು'—ರಾಷ್ಟ್ರಪತಿಗಳಾದ ಶ್ರೀ॥ ಸುಭಾಷ್ ಚಂದ್ರ ಭೋಸರವರು, ಶಿಲ್ಲಾಂಗಿನ ಒಂದು ಸಾರ್ವಜನಿಕ ಸಭೆಯಲ್ಲಿ ಹೀಗೆ ನುಡಿಯುತ್ತ ಮುಂಬರಿದರು:—

'ಫೆಡರೇಶನನ್ನು, ಒತ್ತಾಯದಿಂದ, ನಮ್ಮ ಮೇಲೆ ಹೇರಿದ್ದೇ ಆದರೆ, ನಾವು ಅದನ್ನು ಪ್ರತಿಭಟಿಸಲೇ ಬೇಕಾಗುವುದು; ಅಗತ್ಯ ಬಿದ್ದರೆ, ಶಾಸನಭಂಗ ಚಳವಳದಿಂದಲೂ, ಅದನ್ನು ವಿರೋಧಿಸಬೇಕಾದೀತು. ಪ್ರಕೃತ, ಇಡೀ ದೇಶವೇ, ಸ್ವಾತಂತ್ರ್ಯದ ಧ್ವಜದ ಕೆಳಗೆ ಆಶ್ರಯ ಪಡೆಯುವಂತೆ ಪ್ರಯತ್ನಿಸಬೇಕು; ಕಾಂಗ್ರೆಸಿಗೆ ಸೇರುವವರಲ್ಲಿ ಸುವ್ಯವಸ್ಥೆಯೂ, ಶಿಸ್ತೂ ನೆಲೆಗೊಳ್ಳುವಂತೆ ಏರ್ಪಡಿಸಬೇಕು; ಹಾಗೂ, ಕೊನೆಗೆ, ಅವರು, ಹೆಚ್ಚಿನ ಸ್ವಾರ್ಥತ್ಯಾಗವನ್ನು ಮಾಡುವಂತೆಯೂ, ಕಷ್ಟನಷ್ಟಗಳನ್ನೂ ಸಹಿಸುವಂತೆಯೂ ಅವರನ್ನು ಸಿದ್ಧಗೊಳಿಸಬೇಕು. ಕಾರಣ...ವೇನೆಂದರೆ,—ಸ್ವಾತಂತ್ರ್ಯಕ್ಕೆ, ಅದರ ಬೆಲೆ ಉ...ಟೀ ಉಂಟು.

'ಜರ್ಮನಿಯು ಯುದ್ಧಕ್ಕೆ, ಸಂಪೂರ್ಣ...ವಾಗಿ ತಯಾರಾಗಿದ್ದಿತು. ಆದ್ದರಿಂದ... ಯುದ್ಧ ಮಾಡುವ ಅಗತ್ಯವಿಲ್ಲದೆ, ಅದು ... ಕೇಳಿಕೆಗಳನ್ನು ...ಸಿಕೊಂಡಿತು. ...ದಾಟಕ್ಕೆ ಸಿದ್ಧ...

ಮೈಸೂರು ಸಂಸ್ಥಾನದ ಸುದ್ದಿಗಳು.

(ಸ್ವಂತ ಸುದ್ದಿಗಾರರಿಂದ)

ಪೋಸ್ಟ್ ಕಾರ್ಡಿನ ಬೆಲೆಯನ್ನು ಇಳಿಸಲು ಸಾಧ್ಯವಿಲ್ಲ

ಶ್ರೀ. ಜಿ. ವಿ. ಬೇವೂರರ ಹೇಳಿಕೆ

ಇಂಡಿಯಾದ 'ಪೋಸ್ಟ್ಸ್ ಮತ್ತು ಟೆಲಿಗ್ರಾಫ್ಸ್' ಇಲಾಖೆಯ ಡೈರೆಕ್ಟರ್ ಜನರಲ್ಲರಾದ ಶ್ರೀ. ಜಿ. ವಿ. ಬೇವೂರರನ್ನು, ಮೈಸೂರು ವಾಣಿಜ್ಯ ಸಂಸ್ಥೆಯ ಅಧ್ಯಕ್ಷರಾದ ರಾಜಚರಿತವಿಶಾರದ ರಾವ್ ಸಾಹೇಬ್ ಸಿ. ಹಯವದನರಾಯರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ತಮ್ಮ ಸಂಸ್ಥೆಯ ಭವನಕ್ಕೆ ಬರಮಾಡಿಕೊಂಡು ಸತ್ಕರಿಸಿದರು.

ಶ್ರೀ. ಹಯವದನರಾಯರು ಸಂಸ್ಥಾನದಲ್ಲಿರುವ ೬೫ ಲಕ್ಷ ಪ್ರಜೆಗಳಿಗಾಗಿ ೫೫೮ ಪೋಸ್ಟಾಫೀಸುಗಳಿವೆಯೆಂದೂ, ಇದರ ಪರಿಮಾಣ ಬಂ...ಾಳ, ಆಸ್ಸಾಂ ಮತ್ತು ಬೊಂಬಾಯಿ ಪ್ರಾಂತಗಳೊ...ಡನೆ ಹೋಲಿಸಿದರೆ ಅಷ್ಟು ತೃಪ್ತಿಕರವಾಗಿ ತೋರುವುದಿಲ್ಲವೆಂದೂ, ಹೇಳಿದರು. ಪೋ...ಫೀಸುಗಳನ್ನು ಇನ್ನೂ ಹೆಚ್ಚಿಸಬೇಕೆಂದೂ, ಮುಖ್ಯವಾಗಿ ಗ್ರಾಮಾಂತರಗಳಲ್ಲಿ ಈ ಸೌಕರ್ಯವು ಹೆಚ್ಚಾಗಬೇಕೆಂದೂ ಹೇಳಿದರು.

ಶ್ರೀ. ಬೇವೂರರು ಜನಸಂಖ್ಯೆಯ ಪರಿಮಾಣದ ಮೇಲೆ ಪೋಸ್ಟಲ್ ಸೌಕರ್ಯಗಳನ್ನು ಗೊತ್ತು ಮಾಡುವುದು ಆರ್ಥಿಕ ದೃಷ್ಟಿಯಿಂದ ಬಹಳ ನಷ್ಟವೆಂಬುದನ್ನು ಒತ್ತಿ ಹೇಳಿದರು. ಪೋಸ್ಟಾಫೀಸುಗಳನ್ನು ಹೆಚ್ಚಿಸುವ ವಿಷಯವು ಇಡೀ ಇಂಡಿಯಾ ದೃಷ್ಟಿಯಲ್ಲಿ ಈಗ ಪರಿಶೀಲಿಸಲಾಗುತ್ತದೆ. ಈಗ ಭಾರತದಲ್ಲಿ, ೨೪,೦೦೦ ಪೋಸ್ಟಾಫೀಸುಗಳಿವೆಯೆಂದೂ, ಈ ಪೈಕಿ ೧೯,೦೦೦ ಪೋಸ್ಟಾಫೀಸುಗಳು ಬ್ರಾಂಚ್ ಪೋಸ್ಟ್ ಆಫೀಸುಗಳೆಂದೂ, ಆರ್ಥಿಕ ದೃಷ್ಟಿಯಲ್ಲಿ ಪ್ರತಿಯೊಂದು ಬ್ರಾಂಚ್ ಪೋಸ್ಟ್ ಆಫೀಸಿನಿಂದಲೂ ೨೪೦ ರೂ. ವರ್ಷಕ್ಕೆ ನಷ್ಟವಾಗುತ್ತಿದೆಯೆಂದೂ, ಆದರೆ ಈ ನಷ್ಟವು ದೊಡ್ಡ ಪೋಸ್ಟ್ ಆಫೀಸುಗಳಿಂದ ಸರಿಹೋಗುತ್ತಿದೆಯೆಂದೂ, ತಾವು ಉದ್ದೇಶಪೂರ್ವಕವಾಗಿಯೇ ನಷ್ಟಹೊಂದಲು ಬ್ರಾಂಚ್ ಪೋಸ್ಟ್ ಆಫೀಸುಗಳನ್ನು ಹೊಸದಾಗಿ ಏರ್ಪಡಿಸುತ್ತಿದ್ದೇವೆ, ಗ್ರಾಮಾಂತರದ ಜನರು ಈ ಸೌಕರ್ಯವನ್ನು ಉಪಯೋಗಿಸಿಕೊಂಡು ತಮ್ಮ ನಷ್ಟವನ್ನು ಕಡಿಮೆಯಾದರೂ ಮಾಡಬೇಕು ...ೂ ಹೇಳಿದರು.

ಪೋ...ಸ್ಟ್ ಕಾರ್ಡಿನ ಬೆಲೆಯನ್ನು ೯ ಕಾಸಿನಿಂದ ೬ ಕಾಸಿಗೆ ಇಳಿಸಬೇಕೆಂದು ಮಾಡಲ್ಪಟ್ಟ ಸೂಚನೆಗೆ ಉತ್ತರವಾಗಿ ಶ್ರೀ. ಬೇವೂರರು 'ಈ ಅಂಶವು ಕೇಂದ್ರ ಅಸೆಂಬ್ಲಿಯಲ್ಲಿ ಕಳೆದ ಆರು ವರ್ಷಗಳಲ್ಲಿ ಅನೇಕ ಸಾರಿ ಚರ್ಚೆಯಾಗಿದೆ; ವಾಸ್ತವವಾಗಿ ಪ್ರಪಂಚದ ಎಲ್ಲ ಭಾಗಗಳಿಂದಲೂ, ಭಾರತದಲ್ಲಿಯೇ ಅತ್ಯಂತ ಅಗ್ಗವಾದ ಅಂಚೆ ಸೌಕರ್ಯವಿದೆ. ಇನ್ನೂ ಅಗ್ಗ ಮಾಡಬೇಕೆನ್ನುವುದು ಸರಿಯೇ? ಈಗಿನ ಕಾರ್ಡು ಬೆಲೆಯನ್ನು ೬ ಕಾಸಿಗೆ ಇಳಿಸಿದರೆ, ವರ್ಷಕ್ಕೆ ೫೦ ಲಕ್ಷ ರೂ. ನಷ್ಟವಾಗುವುದು; ಬೆಲೆಯನ್ನು ಒಂದು ಪಕ್ಷ ಇಳಿಸಿದರೆ, ಬಡವರಿಗೆ ಉಪಕಾರವಾಗುವುದೆನ್ನುವುದನ್ನು ನಾನು ನಂಬಲಾರೆ. ವ್ಯಾಪಾರಗಾರರು ಸಾಮಾನ್ಯವಾಗಿ ತಮ್ಮ ವ್ಯವಹಾರಗಳನ್ನೆಲ್ಲಾ ಕಾರ್ಡಿನ ಮೂಲಕವೇ ನಡೆಸುತ್ತಿರುವುದರಿಂದ, ಇವರ ವ್ಯವಹಾರವನ್ನೂ, ಬಡವರ ವ್ಯವಹಾರವನ್ನೂ ಗಮನಿಸಿದರೆ ಬಡವರಿಗೆ ಮಾತ್ರ, ಹೆಚ್ಚು ಉಪಕಾರವಾಗುವುದೆನ್ನುವುದು ಸತ್ಯವಲ್ಲವೆಂದು ಯಾರಿಗಾದರೂ ತೋರುವುದು' ಎಂದರು.

ಮತ್ತೊಂದು ಸಲಹೆಗೆ ಉತ್ತರವಾಗಿ ಶ್ರೀ. ಬೇವೂರರು, ಸಂಸ್ಥಾನದ ಅಂಚೆಯ ವ್ಯವಸ್ಥೆಯಲ್ಲಿ ಸಂಸ್ಥಾನದ ಪ್ರಜೆಗಳಿಗೆ ನೌಕರಿಯನ್ನು ಉಚಿತ ಪ್ರಮಾಣದಲ್ಲಿ ಕೊಡಲಾಗುತ್ತಿದೆಯೆಂದೂ, ಇತ್ತೀಚೆಗೆ ಪ್ರಮಾಣವನ್ನು ಹೆಚ್ಚಿಸಿರುವುದೆಂದೂ ತಿಳಿಸಿದರು.

ದಿವಾನರ ಭವನದಲ್ಲಿ ವಿವಾಹ.

ದಿವಾನರಾದ ಸರ್ ಮಿರ್ಜಾ ಇಸ್ಮೈಲ್‌ರವರು ...ಮ್ಮ ಸೋದರ ಸೊಸೆ ಮಿಸ್ ಮಾಲಕ್ ತಾಜ್ ...ಗಂರವರನ್ನು ಇಂಡಿಯನ್ ಸಿವಿಲ್ ಸರ್ವಿಸ್‌ನಲ್ಲಿ ...ಂಟ್ ಕಲೆಕ್ಟರರಾಗಿರುವ ಮಿ॥ ಎ. ಹಿಲಾಲಿ ...ಟ್ಟು, ಕಾರ್ಲ್‌ಟನ್ ಭವನದಲ್ಲಿ ವಿವಾ... ...ಂಭ...ಂದ ...ಕೇ? ...ವಾರ್ಡಿನ ...ಾಗಿ...

ಗಡಿನಾಡಿನ ಡಾ॥ ಖಾನ್ ಸಾಹೇಬರ ಕಾಂಗ್ರೆಸ್ ಸರಕಾರವು, ಜಿಲ್ಲಾ ಅಧಿಕಾರಿಗಳನು ...ತ ಪ್ರಾಂತದ ಸ್ಥಳೀಯ ಸಂಸ್ಥೆಗಳ ಚೆಯರ್ ಮ್ಯಾನರಾಗಿ ನೇಮಿಸುವ ಈ ಪದ್ಧತಿಯನ್ನು ರದ್ದುಮಾಡಿ, ಪ್ರಜಾ ಸ್ವಾತಂತ್ರ್ಯವನ್ನು ಹೆಚ್ಚಿಸಿದೆ.

ಡಾ॥ ಖಾನ್ ಸಾಹೇಬರವರು

ಜಬಲ್ಪುರದಿಂದ ೭ ಮೈಲು ದೂರದಲ್ಲಿ ನರ್ಬುದಾ ನದೀ ತೀರದಲ್ಲಿರುವ ತಿಲ್ವಾರ ಘಾಟಿನಲ್ಲಿ ನಡೆಯುವ ಮುಂದಿನ ರಾಷ್ಟ್ರೀಯ ಮಹಾಸಭಾ ಅಧಿವೇಶನದ ಸಕಲ ಸನ್ನಾಹಗಳು, ಭರದಿಂದ ಸಿದ್ಧವಾಗುತ್ತಿವೆ.

ವಾರ್ಧಾದ ವಿದ್ಯಾಭ್ಯಾಸ ಧೋರಣೆಗಳ ಯೋಜನೆಯು, ಬಿಹಾರ ಸರಕಾರದಿಂದ, ಅಲ್ಲಿನ ೫೦ ಶಾಲೆಗಳಲ್ಲಿ, ಪರೀಕ್ಷಾರ್ಥವಾದ ಪ್ರಯೋಗದಲ್ಲಿ ಉಪಯೋಗಿಸಲ್ಪಡಲಿದೆ.

...ತಮ್ಮ ನಿತ್ಯದ ಆಹಾರದಲ್ಲಿ ಮೀನು ಮತ್ತು ಮಾಂಸದ ಉಪಯೋಗವನ್ನು, ಕೆಲವು ವಾರಗಳ ವರೆಗೆ, ನಿಲ್ಲಿಸಿದುದರ ಪರಿಣಾಮವಾಗಿ, ಕಲ್ಕತ್ತೆಯ ಕುರುಡ ಶಾಲೆಯ ಸ್ಕೌಟುಗಳು ೧೦೦ ರುಪಾಯಿಗಳನ್ನು ಉಳಿಸಿ, ಅದನ್ನು ಬಂಗಾಳದ ನೆರೆ ಹಾವಳಿಯ ನಿರಾಶ್ರಿತ ಫಂಡಿಗ ಕೊಡಲು ಸಮರ್ಥರಾದರು.

ನಮ್ಮ ಗವರ್ನರರಾದ ಘನವನ್ನೈದಿದ ಲಾರ್ಡ್ ಇರಸ್ಕೈನ್‌ರವರು, ಮಧುರಾ ಜಿಲ್ಲೆಯ ತಮ್ಮ ಪ್ರವಾಸಕಾಲದಲ್ಲಿ ಕಾಂಗ್ರೆಸ್ ಮಂತ್ರಿವರ್ಗದ ಕೆಲಸ ಕಾರ್ಯಗಳನ್ನೂ ಅವರ ಅತ್ಯುನ್ನತ ಕರ್ತವ್ಯದೃಷ್ಟಿಯನ್ನೂ ಕೊಂಡಾಡಿ, ತಾವು ತಮ್ಮ ಪ್ರೋತ್ಸಾಹ ಮತ್ತು ಸಹಕಾರವನ್ನು ಅವರಿಗೆ ಕೊಟ್ಟಿದ್ದೇವೆ ಎಂದು ನುಡಿದರು.

ಕುಂಭಕೋಣ ಪ್ರಾಂತದಲ್ಲಿ ಮಳೆ ಇಲ್ಲದೆ ಹಾಹಾಕಾರವೆದ್ದಿದೆ. ವಿಪ್ರವರ್ಗದವರು ಕೆಲವರು ಕಾವೇರಿಯಲ್ಲಿ ಸೊಂಟುದ್ದದ ನೀರಲ್ಲಿ ನಿಂತು, ಮಳೆ ಬರುವಂತೆ, ವರುಣಜಪಕ್ಕೆ ಆರಂಭಿಸಿದ್ದಾರೆ.

ಭೂ ತೆರಿಗೆಯ ಪದ್ಧತಿಯ ಪುನರಾವರ್ತನೆಯ ಕುರಿತಾದ ಧೋರಣೆಯನ್ನು ಸ್ಪಷ್ಟಗೊಳಿಸ

ಸರ್ ಏ. ಪಿ. ಪಾತ್ರೋರವರು

ಬೇಕೆಂದು ಸರ್ ಏ. ಪಿ. ಪಾತ್ರೋರವರು ಮದ್ರಾಸ್ ಸರಕಾರವನ್ನು ಕೇಳಿರುತ್ತಾರೆ.

ಮದ್ರಾಸಿನಲ್ಲಿ ಇಂಪೀರಿಯಲ್ ಬ್ಯಾಂ...ನ್ನು ...ಕೆನಿಟ್ರಿಯಾಗಿದ್ದ ದೇವದಾಸ ಎಂ...ವನನ್ನು, ...ಸನನ... ...ಯಗಂ ಎಂಬ ಇನ್ನೊಬ್ಬ ಸೆನಿಟ್ರಿಯು ...ಳು ಇರ... ...ನೆನು ಕೊಳ್ಳೆ ಮ...ದ ಸಂಬಂಧ... ...ಟ್ಟಿಗೆ ಸ... ...ನಲ್ಲಿ ...ಕ್ಕಿಸ್ಪರ...

ಘನವನ್ನೈದಿದ ಹೈದರಾಬಾದಿನ ನೈಝಾಂ ಪ್ರಭುಗಳವರು ರಾಜ್ಯರಚನೆಯ ಕಾರ್ಯಭಾರಗಳಿಗಾಗಿ, ರಾಜಕೀಯ ಶಾಖೆಯಿಂದ ಬೇರೆಯಾಗಿರುವ ಹೊಸ ಸರಕಾರೀ ಸೆಕ್ರೆಟೇರಿಯೆಟ್ಟನ್ನು ಮಂಜೂರು ಮಾಡಿದ್ದಾರೆ.

ಘನವನ್ನೈದಿದ ನೈಝಾಂರವರು.

ಮದನಪಲ್ಲಿ ಬೋರ್ಡ್ ಹ್ಯಾಸ್ಕೂಲಿನ ವಿದ್ಯಾರ್ಥಿನಿಯಾದ ೧೮ ವರ್ಷ ವಯಸ್ಸಿನ ಕುಮಾರಿ ರಾಘವ ಎಂಬಾಕೆಯ ಶವವು, ಅಲ್ಲಿನ ಆಂಜನೇಯ ದೇವಾಲಯದ ಕೆರೆಯಲ್ಲಿ ದೊರಕಿದೆ. ತನಿಖೆ ನಡೆಯುತ್ತಿದೆ.

ಇಂಡಿಯಾ ಸರಕಾರದ ಕೃಷಿ ಶಾಖೆಯ ಮಾರ್ಕೆಟಿಂಗ್ ಎಡ್ವೈಜರರ ಲೆಕ್ಕಾಚಾರದ ಮೇರೆಗೆ,—ಬಂದೋಬಸ್ತು ಸಾಲದೆ, ವರ್ಷಂಪ್ರತಿ ಇಂಡಿಯದಲ್ಲಿ ೧೫ ಲಕ್ಷ ಕೋಳಿಮೊಟ್ಟೆಗಳು ಹಾಳಾಗುತ್ತಿವೆ ಎಂದು ಗೊತ್ತಾಗಿದೆ.

ಸರನ್ ಜಿಲ್ಲೆಯ ಒಬ್ಬ ಬ್ರಾಂಚ್ ಪೋಸ್ಟು ಮಾಸ್ಟರ್, ಓದು ಬರಹ ಬಾರದ ಒಬ್ಬ ಹಳ್ಳಿಯವನ ಸೇವಿಂಗ್ಸ್ ಬೇಂಕ್ ಪಾಸ್ ಬುಕ್ಕಿನಲ್ಲಿ ಫೋರ್ಜರಿ ಮಾಡಿ, ವಿಶ್ವಾಸ ವಂಚನೆಯ ಹಲವು ಕೃತ್ಯಗಳನ್ನು ನಡೆಸಿದನೆಂದು ಆತನಿಗೆ ೫ ವರ್ಷಗಳ ದಂಡನೆ, ೩೦೦ ರುಪಾಯಿಗಳ ಜುಲ್ಮಾನೆ ವಿಧಿಸಲಾಗಿದೆ.

ಸರ್ದಾರ್ ವಲ್ಲಭಭಾಯ್ ಪಟೇಲರವರು, ಬರೋಡಾ ಸಂಸ್ಥಾನದ ಪ್ರಜೆಗಳ ಕಾನ್ಫರೆನ್ಸಿನಲ್ಲಿ ಅಧ್ಯಕ್ಷತೆ ವಹಿಸಿ, 'ಇಂಡಿಯದ ಹಲವು ದೇಶೀಯ ಸಂಸ್ಥಾನಗಳಲ್ಲಿನ ಈಚಿಗಿನ



ಸರ್ದಾರ್ ವಲ್ಲಭಭಾಯ್ ಪಟೇಲರು.

ವಿದ್ಯಮಾನಗಳನ್ನು ನೋಡುವಾಗ, ಕಾಂಗ್ರೆಸ್‌ನವರು, ಸಂಸ್ಥಾನದ ಜನಗಳನ್ನು, ಅವರವರ ವ್ಯವಸ್ಥೆಯ ಮೇಲೇ ಹೊಂದಿಕೊಂಡಿರುವಂತೆ, ಅವರ ಪಾಡಿಗೇ ಬಿಟ್ಟಿರುವುದು ಯುಕ್ತವಾಯಿತು' ಎಂದಿದ್ದಾರೆ.

ಬಾಬು ರಾಜೇಂದ್ರ ಪ್ರಸಾದರವರು, ಕೊಂಚ ಕಾಲ, ಸಂಪೂರ್ಣ ವಿಶ್ರಾಂತಿ ಪಡೆಯಬೇಕೆಂದು ಡಾಕ್ಟರು ಸೂಚಿಸಿದ್ದಾರೆ.

ಹೈದರಾಬಾದು ಸಂಸ್ಥಾನದಲ್ಲಿ, ಅಲ್ಲಿನ ಸ್ಟೇಟ್ ಕಾಂಗ್ರೆಸಿನ ಪ್ರಥಮ ಸರ್ವಾಧಿಕಾರಿಗಳಾದ ಸ್ವಾಮಿ ರಮಾನಂದ ತೀರ್ಥರ ಕೈದಾಗಿದೆ. ಅಲ್ಲದೆ, ೧೯ ಮಂದಿ ಆರ್ಯಸಮಾಜದವರ ದಸ್ತಗಿರಿಯೂ ನಡೆದಿದೆ.

ಟೆಲಿಫೋನಿನ ದರಗಳನ್ನು, ದೂರ ದೂರದ ಪ್ರದೇಶಗಳ ವಟ್ಟಿಗೆ, ಕಡಿಮೆ ಮಾಡುವ ಯೋಚನೆ ಇಂಡಿಯಾ ಸರಕಾರಕ್ಕೆ ಇದೆ ಎಂದು ತಿಳಿದುಬರುತ್ತಿದೆ.

ಹೈದರಾಬಾದ್ ನಗರದಲ್ಲಿ, ಅಲ್ಲಿನ ಸಿವಿಲ್ ಲಿಬರ್ಟೀಸ್ ಯೂನಿಯನಿನವರು, ಒಂದು ಮೆರವಣಿಗೆಯಾಗಿ ಹೋಗುತ್ತಿದ್ದಾಗ, ಪೋಲೀಸರು ಕೆಲವರನ್ನು ಕೈದು ಮಾಡಿದರು. ಇದನ್ನು ಕಂಡು, ಜನಗಳ ಗುಂಪು, ಪೋಲೀಸರ ಮೇಲೆ ಕಲ್ಲು, ಪಾದರಕ್ಷೆ ಮೊದಲಾದುವನ್ನು ಬಿಸಾಡಿದರೂ, ಪೋಲೀಸರೇನೂ ಪ್ರತಿಯಾಗೇನೂ ಮಾಡದೆ, ತಾಳ್ಮೆಯಿಂದ ಇದ್ದುದು ... ಸ...

ಅತ್ಯುತ್ಕೃಷ್ಟ

ಗುಣದ ವಜ್ರಗಳು

ಮತ್ತು

ಶ್ರೇಷ್ಠ ತರಗತಿಯ ಆಭರಣಗಳಿಗೆ

ಸುರಾಜ್‌ಮಲ್

(1895ರಲ್ಲಿ ಸ್ಥಾಪಿತವಾದುದು)

313, ಎಸ್ಪ್ಲನೇಡ್ :: ಮದ್ರಾಸು

ಬೊಂಬಯಿಯ ಎಸೆಂಬ್ಲಿಯ ಅಧಿವೇಶನದಲ್ಲಿ, ಶ್ರೀ. ವಿ. ಪಾರುಲೇಕರ್ (ಸ್ವತಂತ್ರ ಪಕ್ಷ) ರವರು, ಎಲ್ಲೆ ಮೀರಿ ಮಾತಾಡಬಾರದೆಂದು ಅಧ್ಯಕ್ಷಸ್ಥಾನದಿಂದ ಎಚ್ಚರಿಸಲ್ಪಟ್ಟರೂ, ಆ ಸದಸ್ಯರು, ಕೇಳದೆ, ಇಬ್ಬರಿಗೂ ಮಾತಿಗೆ ಮಾತಾಗಿ, ಕೊನೆಗೆ ಆ ಮೆಂಬರರು, ಆ ದಿನದ ಸಭಾಕಾರ್ಯಗಳಲ್ಲಿ ಭಾಗ ವಹಿಸಬಾರದೆಂದು, ಅಧಿಕಾರದ ಅಂಕುಶ ಪ್ರಯೋಗವಾಯಿತು.

ಬೊಂಬಯಿಯಲ್ಲಿ ಕೊಳಕು ಗುಡಿಸಲುಗಳನ್ನು ತೆಗೆದು ಹಾಕಲು ಯೋಜನೆಯೊಂದು ಸಿದ್ಧವಾಗಿದ್ದು ಅದಕ್ಕೆ ೪೮ ಲಕ್ಷ ರುಪಾಯಿಗಳು ಖರ್ಚಿಗೆ ಬೇಕೆಂದು ಅಂದಾಜಾಗಿದೆ.

ಡೇರಾ ಇಸ್ಮಾಯೆಲ್ ಖಾನ್ ನಗರದಲ್ಲಿ, ಮಹಾತ್ಮರ ದರ್ಶನದ ಉದ್ದೇಶದಿಂದ, ಮಹಿಳೆಯರದೊಂದು ಪ್ರತ್ಯೇಕ ಸಮಾರಂಭ ಕೂಟವು ಜರುಗಿತು. ಎಲ್ಲ ಸಮಾಜಗಳ ಸುಮಾರು ೬ ಸಾವಿರ ಮಂದಿ ಮಹಿಳೆಯರು ಕೂಡಿ, ಮಹಾತ್ಮಾಜಿಯವರ ದರ್ಶನ ಮಾಡಿ ಧನ್ಯರಾದರು. ಹರಿಜನ ಫಂಡಿಗಾಗಿ, ೧೦೦ ರುಪಾಯಿಗಳ ನಿಧಿಯೊಂದನ್ನು ಮಹಾತ್ಮರಿಗೆ ಕಾಣಿಕೆಯಾಗಿ ಒಪ್ಪಿಸಿದರು.

ಬಂಗಾಳ ಪ್ರಾಂತದ ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಯೂನಿಯನ್ ಬೋರ್ಡುಗಳಲ್ಲಿರುವ ವಿವಿಧ ರಾಜಕೀಯ ಪಂಗಡಗಳ ಸದಸ್ಯರ ಸಂಖ್ಯೆ ಎಷ್ಟೆಂಬ ಲೆಕ್ಕಾಚಾರವನ್ನು ಸಂಗ್ರಹಿಸುವಂತೆ, ಬಂಗಾಳದ ಮಂತ್ರಿಮಂಡಲವು, ವಿಸ್ತಾರವಾದ ತನಿಖೆ ನಡೆಸಬೇಕೆಂದು ಅಲ್ಲಿನ ಪೋಲೀಸ್ ಶಾಖೆಗೆ ಅಪ್ಪಣೆ ಮಾಡಿದೆ. ಈ ಅನ್ವೇಷಣದ ಉದ್ದೇಶ ತಿಳಿದಿಲ್ಲ.

ಶ್ರೀ. ಸುಭಾಷ್‌ಚಂದ್ರ ಭೋಸರನ್ನೇ, ಇನ್ನೊಂದು ವರ್ಷಕ್ಕೂ ರಾಷ್ಟ್ರಪತಿಗಳನ್ನಾಗಿ ಆರಿಸಬಹುದೆಂಬ ಮಾತು ಹು...ಟ್ಟಿದ್ದರೂ, ಆ ಪದವಿಯ ಕಿರೀಟವು, ಮೌಲಾನಾ ಅಬುಲ್ ಕಲಂ ಅಜದ್ ರವರಿಗೆ ಸೇರುವ...

ಮೌಲಾನಾ ಅಬುಲ್ ಕಲಂ ಅಜದ್‌ರವರು.

ದು ಉಚಿತವೆಂಬ ಒಂದು ... ರಟಿದೆ.

ಡಿಲ್ಲಿಯ ಒಬ್ಬ ಶ್ರೀಮಂತ ಸೇಟ್, ಕರಾಚಿ ಓಂ ಮಂಡಲದ ಮೇಲ್ಪಂಕ್ತಿಯನ್ನೇ ಅನುಸರಿಸಿ, ಡಿಲ್ಲಿಯಲ್ಲಿಯೂ, ಒಂದು ಅಂತಹದೇ ಮಂಡಲಿಯ ಸ್ಥಾಪನೆಗಾಗಿ ಪ್ರಯತ್ನಿಸುತ್ತಿದ್ದಾನೆ. ಅದರ ಯೋಜನೆಯು ರಹಸ್ಯವಾಗಿದೆ. ಆ ಸೇಟ್ ಹೆಂಡತಿ ಸತ್ತವನು.

ಲಾಹೋರಿನಲ್ಲಿ ಒಂದು ವಿನೋದಮಯವಾದ ಸ್ವಾರಸ್ಯ! ಅಲ್ಲಿಗೆ ಬಿಹಾರ್ ಮಿನಿಸ್ಟರರಾದ ಮಾನ್ಯ ಶ್ರೀ ಜಗಲುಲ್ ಚೌಧರಿಯವರು ದಯೆಮಾಡಿಸುವರೆಂದಿದ್ದು, ಜನಗಳು ಅವರನ್ನು ಸ್ವಾಗತೀಕರಿಸಲು ರೈಲ್ವೆ ಸ್ಟೇಶನಿನಲ್ಲಿ ಪುಷ್ಪಮಾಲೆಗಳೊಡನೆ ಕಾದಿದ್ದರು. ಅಷ್ಟರಲ್ಲಿ ರೈಲ್ ಬಂತು; ಅದೊಡನೆ ಗುಂಪಿನ ಕೆಲವರು ಒಬ್ಬರಿಗೆ ಹೂಮಾಲೆಗಳನ್ನು ಹಾಕತೊಡಗಿದರು. ಜನಗಳೂ, ಅವರೇ ಮಿನಿಸ್ಟರರೆಂದು ಭಾವಿಸಿ, ಅವರಿಗೇ ಇವರೂ ಹೂಮಾಲೆಗಳನ್ನು ಕೊರಳಿಗೆ ತೂರಿಸಿದರು. ಕೊನೆಗೆ ನೋಡುವಾಗ, ಇವರೊಬ್ಬ ಇಂಗ್ಲೆಂಡಿನಿಂದ ಹಿಂದಿರುಗಿದ ಗೃಹಸ್ಥರೆಂದು ತಿಳಿದು ಬರಲು, ಜನಗಳು ಬೆಪ್ಪಾಗಿ, ಮಿನಿಸ್ಟರರನ್ನು ಹುಡುಕತೊಡಗಿದರು. ಮಿನಿಸ್ಟರರೂ, ಆ ಮೇಲೆ ಇವರಿಗೆ ರೈಲ್ವೇ ಪ್ಲಾಟಫಾರ್ಮಿನ ಇನ್ನೊಂದು ಕಡೆ ನೋಡ ಸಿಕ್ಕಿದರು.

(೧ನೇ ಪುಟದಿಂದ)

ದಾಟವಿಲ್ಲದೆಯೇ ಸ್ವಾತಂತ್ರ್ಯ ದೊರಕೀತು.' ಎನ್ನುತ್ತ, 'ಅಂತರ ಜನಾಂಗಿಕ ಪರಿಸ್ಥಿತಿ, ಈಗ ಬಹಳ ಅನುಕೂಲವಾಗಿದೆ. ಬ್ರಿಟಿಶ್ ಸರಕಾರ, ಆಯುಧಗಳ ಬಲದಿಂದ ರಾಜ್ಯಭಾರ ಸ... ಲಾರದು' ಎಂದರು. ...ಂಭಿಸಿ

ಬಳಿಕ, ಇಂಡಿಯದ ... ಜನತೆಯ ಅಗಾಧ ನವಜ... ನ್ನೆತ್ತಿ, ಸ್ವಾತಂತ್ರ್ಯವನ್ನು ...ಟ್ಟೆ... ಭಾರತೀಯನೂ ಬ... ...ಡ ದೇಶಗಳಲ್ಲೊಂ... ತಂತ್ರ್ಯವಿಲ್ಲದ ಜ... ನನೇ ಅಲ್ಲವೆಂ...! ಇಲ್ಲಿ ನಾಯಿಗಳ ಕೊಂಡಿರುವನೆಬಾರದೆ, ಆಶ್ರಯಕ್ಕಾಗಿ ...ನವರ ಅಂಕೆಸಂಖ್ಯೆಗಳ ... ಹೇಳುವುದು ಸುಲಭವಲ್ಲ. ...ಡಿಗೋಡಿ ಬಂದು, ಜೈಲು ...ಲವರು, ಇದ್ದಲ್ಲಿಯೇ ಉಳಿ... ...ರ ನಿರ್ಬಂಧವಾಸದ ಕ್ಯಾಂಪು ...ಂತಿ ಹೊಂದುತ್ತಾರೆ.

ಇದೆಲ್ಲಾ ಗಲಭೆಗಳು ... ...ನಲ್ಲ; ಘೋರ ಯುದ್ಧದ ... ...ದುವು. ಆಗಲೇ, ಹೆತ್ತುದು...

(೧೮ನೇ ಪುಟ ನೋಡಿ)

Coorg ... SAN... cle... b... o... Fort,

...ಳೂರು

...ಂಗೊಲದಲ್ಲಿ ಇದುವರೆಗೆ ಎಡಿಶನಲ್ ಡಿ. ಮುನ್ಸೀಫರಾದ ಶ್ರೀ. ಇ. ಕೃಷ್ಣಮೂರ್ತಿಯವರು, ಕಾಸರಗೋಡು ಡಿ. ಮುನ್ಸೀಫರಾದ ಶ್ರೀ. ಆರ್. ವಿ. ಸೀತಾರಾಮರಾಯರ ಸ್ಥಾನಕ್ಕೆ ವರ್ಗಾಯಿಸಲ್ಪಟ್ಟಿರುವರು.

ನಮ್ಮ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರಾದ ಮಿ| ಕೆ. ಮೋಹಿದಿನ್ ಹುಸೇನ್ ಬಹದೂರರವರು, ಕೃಷ್ಣಾ ಜಿಲ್ಲೆಯ ಬೆಜವಾಡಾ ಸಬ್ ಡಿವಿಜನಿನ ಡಿಪ್ಯೂಟಿ ಪೋಲೀಸ್ ಸುಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿರುವರು.

ತಮ್ಮ ರಜಾ ಕಳೆದೊಡನೆಯೇ, ಸಿವಿಲ್ ಅಸಿಸ್ಟಾಂಟ್ ಸರ್ಜನರಾದ ಶ್ರೀ. ಬಿ. ರಾಮ ಭಟ್ಟಿಯವರು, ಕಾಸರಗೋಡು ಗವರ್ನಮೆಂಟ್ ಹಾಸ್ಪಿಟಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಮಾನ್ಯ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ, ಜಿಲ್ಲೆಯ ಅಫೀಸರರ ಮತ್ತು ಅಫೀಸರರಲ್ಲದವರ ತ್ರೈಮಾಸಿಕ ಸಭೆಯು, ಕಲೆಕ್ಟರರ ಆಫೀಸಿನಲ್ಲಿ ಕಳೆದ ಶುಕ್ರವಾರ ಜರಗಿತು. ಕೋಟೆಕಾರಿನಲ್ಲಿ ಜರಗಿದ ಹಳ್ಳಿಗಳ ಪುನರ್ಘಟನಾ ಕೆಲಸಗಳ ಕುರಿತು ವಿಚಾರಿಸಲಾಯಿತು. ಉಳ್ಳಾಲಕ್ಕೆ ಮಾರ್ಗ ಹಾಗೂ ರೇಡಿಯೋದ ಅಗತ್ಯ ಯೋಚಿಸಲಾಯಿತು. ಕೈಗಾರಿಕೆ ಹಾಗೂ ವಾಣಿಜ್ಯ ಪ್ರದರ್ಶನಾಲಯವು, ಅದರ ತೆರೆಯುವಿಕೆಯು ಮುಂದುವರಿಸಲ್ಪಟ್ಟರೂ, ನವಂಬರ ೧ರಿಂದ ಫೆಲಿಕ್ಸ್ ಪೈ ಬಜಾರಿನಲ್ಲಿ ತೆರೆದೇ ಇಡಲ್ಪಡುವುದೆಂದು ತಿಳಿಸಲಾಯಿತು. ರೆವಿನ್ಯೂ ಡಿ. ಆಪೀಸರರ ಅಧ್ಯಕ್ಷತೆಯಲ್ಲಿ ಡಿವಿಜನಲ್ ಕಮಿಟಿಗಳನು... ಡುವ ವಿಚಾರ ಚರ್ಚೆಗೆ ಬಂದು, ಉದ್ಯೋಗಸ್ಥ...ವರ್ಗದವರು ಬೇಡವೆಂದೂ, ಶ್ರೀಗಳಾದ ಕಾರಂ..., ಸಲ್ದಾನ, ವಿಟ್ಟಲ ಶೆಟ್ಟಿ ಮುಂತಾದವರು ಬೇಕೆಂದ... ನುಡಿಯಲು ಆ ವಿಚಾರದ ಯೋಚನೆ ಮುಂದಿನ ಸಭೆಗೆ ಮುಂದುವರಿಸಲಾಯಿತು. ಪ...ತ್ತೂರಿಗೆ ೪, ಕಾಸರಗೋಡು ತಾಲೂಕಿಗೆ ೮, ಕುಂದಾಪುರ ತಾಲೂಕಿ... ೫, ಪುಟ್ಟ ಸೇತುವೆಗಳನ್ನು ಕಟ್ಟಿಸುವ ವಿಚಾರ ಯೋಚಿಸಲಾಯಿತು. ಹಲವು ಕಡೆಯ ಮಾರ್ಗ ಹಾಗೂ ಪುಟ್ಟ ಸೇತುವೆಗಳ ಯೋಜನೆಗಳೂ ಚರ್ಚೆಗೆ ಬಂದುವು.

ದ. ಕ. ಜಿಲ್ಲಾ ಹರಿಜನ ಎಡ್ವೈಜರಿ ಬೋರ್ಡಿನ ಪ್ರಥಮ ಸಭೆಯು, ಮಾನ್ಯ ಕಲೆಕ್ಟರರ ಅಧ್ಯಕ್ಷತೆಯಲ್ಲಿ, ಕಲೆಕ್ಟರರ ಆಫೀಸಿನಲ್ಲಿ, ತಾ. ೨೮ನೇ ಶುಕ್ರವಾರ ಜರಗಿತು. ಲೇಬರ್ ಶಾಲೆಗಳೇ ಇಲ್ಲದ ಪುತ್ತೂರು ತಾಲೂಕಿನಲ್ಲಿ, ಶಾಲೆಗಳನ್ನು ಸ್ಥಾಪಿಸುವ ಯೋಜನೆ ಮಾಡಲಾಯಿತು. ಕಾದಿಟ್ಟ ಅಪ್ರಯೋಜಕ ಸ್ಥಳಗಳ ಉಪಯೋಗ, ಮುಂದೆ ಪ್ರತಿ ತಿಂಗಳು ಸಭೆ ಜರಗಿಸುವ ವಿಚಾರ ಇವುಗಳನ್ನು ಚರ್ಚಿಸಲಾಯಿತು.

ಗವರ್ನಮೆಂಟ್ ಕಾಲೇಜು ...ಲೆಯಾಳಿ ಅಸೋಸಿಯೇಶನಿನ ಸಭೆಯು, ಕಾಲೇಜ... ಕಟ್ಟಡದಲ್ಲಿ ಶ್ರೀ. ಪಿ. ರಾಮ ಪಿಶ್ರೋಡಿಯವರ ಅಧ್ಯಕ್ಷತೆಯಲ್ಲಿ, ಕಳೆದ ಶನಿವಾರ ಜರಗಿತು. ಮಲಬಾರ್ ದೇವಸ್ಥಾನ ಪ್ರವೇಶದ ಕುರಿತಾಗಿ ಚರ್ಚಿಸಲಾಯಿತು. ಮಲಬಾರಿನಲ್ಲಿ ದೇವಳ ಪ್ರವೇಶ ಮಸೂದೆ ಅಗತ್ಯವೆಂದೂ, ಇದರಿಂದ ಪ್ರಕೃತ ಹರಡಿರುವ ನಿಕೃಷ್ಟ ಜಾತೀಯತೆಯು ನಾಶವಾಗುವುದೆಂದೂ, ದೇವಸ್ಥಾನಗಳ ಹೆಸರಲ್ಲಿ, ದಕ್ಷಿಣ ದೇಶದಲ್ಲಿನಂತೆ, ಅಲ್ಲೂ ಅಕೃತ್ಯಗಳು ನಡೆಯುತ್ತಿರುವುದು ಅಧಿಕವಾದ್ದರಿಂದ ದೇವಳ ಶುದ್ಧೀಕರಣವು ಅಗತ್ಯವೆಂದೂ ಚರ್ಚೆ ನಡೆಯಿತು. ಅನೇಕ ವಿದ್ಯಾರ್ಥಿಗಳೂ, ಶ್ರೀ. ಯಂ. ಯನ್. ಅಡಿಯೋಡಿಯವರೂ ಚರ್ಚೆಯಲ್ಲಿ ಭಾಗವಹಿಸಿದ್ದರು.

ಅಲ್ಬುಕರ್ಕ್ ಕ್ರಿಕೆಟ್ ಪಂದ್ಯಾಟದಲ್ಲಿ, ಯಂ. ಸಿ. ಸಿ. ಮತ್ತು ಸೈಂಟ್ ಅಲೋಸಿಯಸ್ ಕಾಲೇಜುಗಳೊಳಗೆ ಪಂದ್ಯಾಟ ನಡೆದು, ಮೊದಲಿನವರು ಮತ್ತಿನವರನ್ನು ಗೆದ್ದರು.

ದ. ಕನ್ನಡ

ಕಾಸರಗೋಡು:—ಸ್ಥಳೀಯ ಪಂಚ್ಯಾತ ಬೋರ್ಡಿನವರು ಪೋಲಿ ನಾಯಿಗಳನ್ನು ಕೊಲ್ಲುವ ಏರ್ಪಾಡು ಮಾಡಿರುವುದು ಸ್ತುತ್ಯ.

ನೀಲೇಶ್ವರದ 'ರಾಜಾಸ್' ಹೈಸ್ಕೂಲಿನ ವಿದ್ಯಾರ್ಥಿಗಳಲ್ಲನೇಕರು ಇಲ್ಲಿಗೆ ಬಂದಿದ್ದು ಇಲ್ಲಿಯ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿಗಳೊಡನೆ 'ಫೂಟ್ ಬೋಲ್', 'ವೊಲ್ಲಿ ಬೋಲ್' ಮತ್ತು ಕ್ರಿಕೆಟ್ ಪಂದ್ಯಾಟಗಳನ್ನಾಡಿದರು.

ಹದಿನಾಲ್ಕನೆಯ ಆರೋಗ್ಯ ಮತ್ತು ಶಿಶುಸಪ್ತಾಹ ಸಮಾರಂಭವು ತಾ. ೨೩ಕ್ಕೆ ಪ್ರಾರಂಭವಾಗಿ ತಾ. ೨೭ಕ್ಕೆ ಅಂತ್ಯವಾಯಿತು. ಶಾಲಾ ಮಕ್ಕಳ ಮೆರವಣಿಗೆ, ಶ್ರೀ. ಎ. ಶ್ರೀನಿವಾಸ ಪೈ, ಬಿ. ಎ., ಬಿ. ಎಲ್.ರವರ ಪ್ರಾರಂಭ ಭಾಷಣ, ವಿದ್ಯಾರ್ಥಿಗಳಿಗೆ ತಿಂಡಿ ಹಂಚೋಣ, ಪ್ರಬಂಧ ಸ್ಪರ್ಧೆ, ಸಾರ್ವಜನಿಕ ಸಭೆ, ಭಾಷಣಾದಿಗಳೂ, ಬಾಲಭಟ ದಳದವರ ಸ್ಕೌಟು ಆಟಗಳೂ, ವ್ಯಾಯಾಮಪ್ರದರ್ಶನವೂ, ಆರೋಗ್ಯ ಇಲಾಖೆಯ ಸಿನೇಮಾ ಪ್ರದರ್ಶನವೂ ಇದ್ದುವು.

ಅಲ್ಲದೆ ಶ್ರೀ. ಆರ್. ವಿ. ಸೀತಾರಾಮರಾವ್, ಡಿ. ಮುನ್ಸೀಫ್, ಕಾಸರಗೋಡು ಇವರ ಅಧ್ಯಕ್ಷತೆಯಲ್ಲಿ ಇನ್ನೊಂದು ಸಾರ್ವಜನಿಕ ಸಭೆಯು ಜರುಗಿ, ಭಾಷಣ, ಬಹುಮಾನದ ಪ್ರಬಂಧಗಳನ್ನು ಓದುವುದು, ಇನಾಮು ಹಂಚುವುದು ಮುಂತಾದ ಕಾರ್ಯಕ್ರಮಗಳಿದ್ದುವು.

ಕಾರ್ಕಳ:—ಕಾರ್ಕಳ ತಾಲೂಕಿನ ಮರ್ಣೆ, ಮಿಯಾರು, ಇರ್ವತ್ತೂರು, ಸಾಣೂರು, ಬೆಳವಾಯಿ, ಮಾಪಾರ್ಡಿ, ಮರೋಡಿ, ಪೇರಾಡಿ, ಸಾವ್ಯ, ಕುತಲೂರು, ನಾರಾವಿ ಮತ್ತು ತೆಂಕ ಹಾಗೂ ಬಡಗ ಮಿಜಾರು ಗ್ರಾಮಗಳಲ್ಲಿ ದನಕರುಗಳಿಗೆ ಬರುವ ರಿಂಡರ ಪೆಸ್ಟು ಎಂಬ ಹೀರೇ ಬೇನೆಯು ಹರಡಿಕೊಂಡಿದ್ದು ಪಶುವೈದ್ಯ ಇಲಾಖೆಯ ನೌಕರ ಉದ್ಯೋಗಸ್ಥರು ಇದು ಇತರ ಕಡೆಗಳಿಗೆ ಹರಡಿ ಪ್ರಬಲವಾಗದಂತೆ ತಕ್ಕ ಜಾಗ್ರತೆ ತೆಗೆದುಕೊಳ್ಳುತ್ತಾ ಇದ್ದಾರೆ.

ಅಜೆಕಾರು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ತಾ. ೨೭—೧೦—೩೮ರ ದಿನ ಆರೋಗ್ಯ ಮತ್ತು ಶಿಶು ಸಪ್ತಾಹವು ಬಹಳ ವಿಜೃಂಭಣೆಯಿಂದ ನಡೆಯಿತು.

ತಾ. ೨೭ ಮತ್ತು ೨೮ರಲ್ಲಿ ಬೋರ್ಡ್ ಮೈನ ಎಲಿಮೆಂಟರಿ ಶಾಲೆಯಲ್ಲಿ ಶ್ರೀಮತಿಯರಾದ ಕೆ. ಶಾಂತಾ ಬಾಯಿ ಮತ್ತು ಯಚ್. ಲಲಿತಾ ದೇವಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಗಳು ಕೂಡಿ ಮಾತೃತ್ವ ಮತ್ತು ಶಿಶುಸಂಗೋಪನ ಇತ್ಯಾದಿ ವಿಷಯಗಳ ಮೇಲೆ ಭಾಷಣಗಳು ನಡೆದುವು.

ಮೂಲ್ಕಿ:—ನಮ್ಮ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳವರು ತಾ. ೨೭—೧೦—'೩೮ರಲ್ಲಿ ಇಲ್ಲಿ ಬಂದಿದ್ದು ಸ್ಥಳೀಕ ಪೋಲೀಸ್ ಸ್ಟೇಷನಿನ ತನ್ಕಿ ನಡಿಸುತ್ತಿರುವರು.

ದಶಾವತಾರ ಬಯಲಾಟಗಳಲ್ಲಿ ಹಾಸ್ಯಗಾರರಾಗಿ ಸುಪ್ರಸಿದ್ಧರಾದ ನಮ್ಮೂರಿನವರಾದ ಶ್ರೀ. ಕೊಗ್ಗಣ್ಣ ಭಾಗ್ವತರು ಕಳೆದ ತಾ. ೨೭ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇ...

ಇಲ್ಲಿಯ ಎಕ್ಸೈಸ್ ಇನ್ಸ್‌ಪೆಕ್ಟರ್ ಶ್ರೀ. ಯಂ. ಗೋಪಾಲನ್‌ರಿಗೆ ವರ್ಗವಾಗಿದೆ ಎಂದು ತಿಳಿದುಬರುತ್ತದೆ.

ಅಜೆಕಾರು:—ಆರೋಗ್ಯ ಮತ್ತು ಶಿಶು ಸಪ್ತಾಹವು ತಾ. ೨೭—೧೦—೩೮ರಲ್ಲಿ ಅಜೆಕಾರ ಬೋರ್ಡ್ ಶಾಲಾ ವಠಾರದಲ್ಲಿ ಕಾರ್ಕಳ ವಕೀಲ್ ಶ್ರೀ. ಪಿ. ವಿ. ಉಪಾಧ್ಯ, ಬಿ. ಎ., ಬಿ. ಎಲ್.ರವರ ನೇತೃತ್ವದಲ್ಲಿ ಜರುಗಿ, ಮೆರವಣಿಗೆ, 'ಆರೋಗ್ಯ ಚಕ್ರವರ್ತಿಯ ದರ್ಬಾರ್' ಎಂಬ ಏಕಾಂಕ ನಾಟಕ, ಶಿಶು ಪ್ರದರ್ಶನ, ಪುರಸ್ಕಾರವಿತರಣ ಎಂಬೀ ಮೊದಲಾದ ಕಾರ್ಯಕ್ರಮಗಳೊಡನೆ ಮುಕ್ತಾಯವಾಯಿತು.

ಕುಂದಾಪುರ:—ಜಿಲ್ಲಾ ವಿದ್ಯಾಧಿಕಾರಿಗಳು ಸ್ಥಳೀಯ ಬೋರ್ಡು... ಹೈಸ್ಕೂಲಿನ ವರ್ಷಾವಧಿ ಇನ್ಸ್‌ಪೆಕ್ಷನನ್ನು ತಾ. ... ಮತ್ತು ೨೫ರಲ್ಲು ನಡೆಸಿದರು. ೨೫ರಲ್ಲು ಹೈಸ್...ಲಿನ ವಿದ್ಯಾರ್ಥಿಗಳು ವ್ಯಾಯಾಮವ ಶಕ್ತಿಪ್ರದರ್ಶನ ಮಾಡಿ ಅವರನ್ನು ಸಂತೋಷಗೊಳಿಸಿದರು. ಮ...ದಿವಸ ಬಸರೂರು ಮೊದಲಾದ ಕೆಲವು ಎಲಿಮೆಂ... ಶಾಲೆಗಳನ್ನು ನೋಡಿಕೊಂಡು ತಾ. ೨೭ರಲ್ಲು ಮ...ೂರು ಕಡೆಗೆ ಹೊರಟುಹೋದರು.

ಕರ್ನಾಟಕದ...ಸಿದ್ಧ ಹರಿದಾಸರವರಾದ ಶ್ರೀ. ಹಂಡೆ ಶ್ರೀಪಾದಾಚಾರ್ಯರವರು ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ತಾ. ೨೬, ... ರಲ್ಲು ಮೂರು ದಿವಸ ರಾತ್ರೆ ಹರಿಕಥಾ ಕಾಲ...ವನ್ನು ಮಾಡಿದರು.

—೦÷೦—

NOTICE

In the Court of the Subordinate Judge of South Kanara.

R. E. P. No. 74/1937.
in O. S. No. 124/1931.

Between:—

1. Narayana Kekunnaya— *Plaintiff, Dec...e-holder*
2. K. Vasudeva K...ath— *Decree-holders' Assignee*

} *Petitioners*

and

Kuttan Adiyodi (dead) and 7 others } *Respondents (Defendants)*

To,

The 2nd Respondent, Kunhi Rama Adiyodi, nephew of Kuttan Adiyodi, at present residing in Konoth Ayilavalappil Kunhi Kannan Nambiyar's house at Pallikere in Nileshwar village, Kasargod Taluk.

Whereas in the above execution petition the 2nd petitioner has applied ... the sale of the immovable pro... specified in the draft sale ... you are hereby informed ...ay of November 1938 ...r settling the terms of ...sale.

...e that the 2nd ... E. A. No. ...order 21 Rule ...for and pur... ...hat the said ...r hearing ... appear ... leader ...y of ...n the ...ons ...n ...e.

ಅಗ್ಗ... ಮಾಡಬೇಕೆನ್ನು... ಬೆಲೆಯನ್ನು ೬ ಕಾ... ಲಕ್ಷ ರೂ. ನಷ್ಟವಾ... ಪಕ್ಷ ಇಳಿಸಿದರೆ, ಬಡ... ನ್ನುವುದನ್ನು ನಾನು ನಂಬ... ಸಾಮಾನ್ಯವಾಗಿ ತಮ್ಮ ವ್ಯವ... ನ ಮೂಲಕವೇ ನಡೆಸುತ್ತಿರುವ... ಹಾರವನ್ನೂ, ಬಡವರ ವ್ಯವಹ... ದರೆ ಬಡವರಿಗೆ ಮಾತ್ರ, ಹೆಚ್ಚು... ದೆನ್ನುವುದು ಸತ್ಯವಲ್ಲವೆಂದು ಯಾರಿ... ವುದು' ಎಂದರು.

ಮತ್ತೊಂದು ಸಲಹೆಗೆ ಉತ್ತ... ಬೇವೂರರು, ಸಂಸ್ಥಾನದ ಅಂಚೆಯ... ಸಂಸ್ಥಾನದ ಪ್ರಜೆಗಳಿಗೆ ನೌಕರಿಯನ್ನು ... ಮಾಣದಲ್ಲಿ ಕೊಡಲಾಗುತ್ತಿದೆಯೆಂದೂ, ... ಪ್ರಮಾಣವನ್ನು ಹೆಚ್ಚಿಸಿರುವುದೆಂದೂ ತಿಳಿ...

ದಿವಾನರ ಭವನದಲ್ಲಿ ವಿವಾ...

ದಿವಾನರಾದ ಸರ್ ಮಿರ್ಜಾ ಇಸ್ಮೈಲ್... ...ಮ್ಮ ಸೋದರ ಸೊಸೆ ಮಿಸ್ ಮಾಲಕ್... ...ಗಂರವರನ್ನು ಇಂಡಿಯನ್ ಸಿವಿಲ್ ಸರ್ವಿಸ್‌ನಲ್ಲಿ ...ಂಟ್ ಕಲೆಕ್ಟರರಾಗಿರುವ ಮಿ|| ಎ. ಹಿಲಾಲಿ ...ಟ್ಟು, ಕಾರ್ಲ್‌ಟನ್ ಭವನದಲ್ಲಿ ವಿವಾ...

ಬಲಹೀನತೆ ನಿಮ್ಮ ಮಗುವಿನ ಜೀವಮಾನದಲ್ಲಿ ಕೇಡನ್ನುಂಟುಮಾಡುವದು

ಅವನು ಬೆಳೆಯುವಾಗಲೇ ಅವನಿಗೆ ಶಕ್ತಿಯನ್ನುಂಟುಮಾಡಿರಿ
ಜಯಶೀಲನಾಗಲು ಅವನಿಗೆ
ಬಲವನ್ನು ಅನುಗ್ರಹಿಸಿರಿ



SCOTT'S Emulsion

ಸ್ಕಾಟ್ಸ್ ಎಮಲ್ಷನ್
ಜೀವವಿರುವ ವರಿಗು ಶಕ್ತಿವಂತನಾಗಿ ಮಾಡುವದು

8 ಮತ್ತು 16 ಔನ್ಸುಗಳ ಸೀಸಾಗಳಲ್ಲಿ ಮಾರಲ್ಪಡುತ್ತೆ. ದೊಡ್ಡ ಸೀಸಾದಿಂದ ಲಾಭ ಹೆಚ್ಚು.

ರಖಂ ವ್ಯಾಪಾರಿಗಳು: ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ (ಇಂಡಿಯ) ಲಿಮಿಟೆಡ್, ಕಲಕತ್ತ . ಬೊಂಬಾಯಿ . ಮದ್ರಾಸು . ಕರಾಚಿ ರಂಗೂನ್ . ಕೊಲಂಬೊ . ಕಾನ್ಪೂರ್ ಸಾ... ...ಬಾದ್ . ಕೊಚ್ಚಿನ್ ಹಿಂದೂಗಳ ಕಣ್ಣ... . ಲಾಹೋರ್ ...ನರು, ಹಿಂದು...

ನಿಮ್ಮ ಮಗುವಿಗೆ ಸಾಕಾದಷ್ಟು ಶಕ್ತಿಯಿಲ್ಲದ ಕಾರಣ ಕಮ್ಮಿ ತೂಕದಿಂದ ಬೇಗನೇ ಆಯಾಸ ಹೊಂದುವನು. ರೋಗಾದಿಗಳಿಂದ ವಿಮುಕ್ತನಾದರು ತೆಳುವನಾಗಿರುವ ವರಿಗೂ ಬಲಾಢ್ಯನಾಗಿರಲಾರನು.

ಸ್ಕಾಟ್ಸ್ ಎಮಲ್ಷನ್ ತೂಕವನ್ನು ಹೆಚ್ಚಿಸಿ, ವೀರ್ಯ ವೃದ್ಧಿ ಮಾಡುವದು. ಈ ಕೆಳಗಿನ ಪದಾರ್ಥಗಳಿರುವುದರಿಂದ ವೈದ್ಯರು ಸ್ಕಾಟ್ಸನ್ನು ಸಿಫಾರಸು ಮಾಡಿರುತ್ತಾರೆ.

ಕಾಡ್ ಲೀವರ್ ಆಯಿಲ್—ನೈಸರ್ಗಿಕ ಅನ್ನ ಸತ್ವ ಇದರಲ್ಲಿ ಧಾರಾಳವಾಗಿರುವವು.

ವಿಟಮಿನ್ 'ಎ'—ಇದರಲ್ಲಿ ದೇಹಾಭಿವೃದ್ಧಿ ಮಾಡುವಂಥ, ಅಂಟು ರೋಗಗಳ ವಿರೋಧಿಸುವಂಥ ಜೀವರಸಾಯನ ಸಾಮರ್ಥ್ಯ ಉಂಟು.

ವಿಟಮಿನ್ 'ಡಿ'—ಶರೀರದೊಳಗಿನ ಎಲುಬಿನ, ಮತ್ತು ದಂತಗಳ ಸಾಮರ್ಥ್ಯಕ್ಕೆ ಅವಶ್ಯಕವಾಗಿ ಬೇಕಾದ 'ಕಾಲ್ಸಿಯಂ' ಇದರಲ್ಲಿ ಧಾರಾಳವಾಗಿರುವದು.

ಸಾಧಾರಣ ಕಾಡ್ ಲೀವರ್ ಆಯಿಲ್ ನಲ್ಲಿರುವ ಸಹಜ ಗುಣದಕ್ಕಿಂತ ಮೂರರಷ್ಟು ಹೆಚ್ಚಾಗಿ **ಸ್ಕಾಟ್ಸ್ ಎಮಲ್ಷನ**ಲ್ಲಿದೆ. ಸುಲಭವಾಗಿ ಜೀರ್ಣವಾಗುವದು. ...ಇತರ್ ಆಹಾರಗಳನ್ನು ...ಡ್ ಟೇಬ್ಲ್... ...ವುದಾಗಿ ಮಾ...ದು ...

'ಹೈಪೊಫಾಸ್‌ಫೈಟ್ ಅಫ್ ಲೈಮ್ ಮತ್ತು ಸೋಡ'ದಲ್ಲಿ ಎಲುಬುಗಳಿಗು, ದಂತಗಳಿಗು ಶಕ್ತಿ ಕೊಡುವ ಕಾಲ್ಸಿಯುಮ್ ಇರುವದು. ನರಗಳಿಗು. ಮೆದಡಿನಲ್ಲಿಯು ತಂತುಗಳಿಗು ಆರೋಗ್ಯವನ್ನುಂಟುಮಾಡುವ ಫಾಸ್‌ಫೊರಸ್ ಕೂಡಾ ಇರುವದು.

ಸಾಧಾರಣ ಭೋಜನ ಸಾಮಗ್ರಿಯಲ್ಲಿ ಇಲ್ಲದ ಕೆಲವು ಪದಾರ್ಥಗಳು ಸಹಜವಾಗಿ **ಸ್ಕಾಟ್ಸ್ ಎಮಲ್ಷನ**ಲ್ಲಿ ಧಾರಾಳವಾಗಿ ಇರುವವು. ಅಂಟುರೋಗಗಳು ಬರದಂತೆ ಮಾಡುವದು. ಸದಾ ಶಕ್ತಿಯನ್ನುಂಟುಮಾಡುವದು. ಪ್ರತಿಯೊಂದು ಸ್ಕಾಟ್ಸ್ ಬಿಂದುವಿನಲ್ಲಿ ಜೀವಾಂತರದ ವರಿಗು ಫಲ ಕೊಡುವ ಶಕ್ತಿ ಉಂಟು.

ವ್ಯಾಯಾಮ ಶಿಕ್ಷಣ—ಸ್ಕಾಟ್ಸ್ ಎಮುಲ್ಷನಿಂದ ಹೊಸ ಎಲುಬುಗಳು, ಮಾಂಸ ಕಂಡರಗಳು, ನರಗಳು ತಯಾರಾಗಿ ವ್ಯಾಯಾಮ ಶಿಕ್ಷಣದಲ್ಲಿ ಅಭಿವೃದ್ಧಿ ಹೊಂದುವವು. ತೆಳುವಾಗಿರುವ ಮಕ್ಕಳು ಅಧಿಕಾಯಾಸದಿಂದ ಹಾನಿ ಹೊಂದುವರು. ಇದಾಗದಂತೆ **ಸ್ಕಾಟ್ಸ್ ಎಮಲ್ಷನ್** ಮಕ್ಕಳನ್ನು ರಕ್ಷಿಸುವದು.

ಎಲುಬುಗಳನ್ನು ವೃದ್ಧಿ ಮಾಡ್ತು... ...ವುದರಲ್ಲಿ ಎರಡು ಪಿಂಟುಗಳ (...ರಿಂದ... ...ಜನ್ನು) ಸ್ವಚ್ಛವಾದ ಕ್ಷೀರ... ಅದು ... ವ ಫ...ದಕ್ಕಿಂತ ಹೆಚ್ಚಾಗಿ... ಫಲಗಳನ್ನು ...ವ ಸ್ಕಾಟ್... ಕೊಂಡಿತು.

ರಾಜ್ಯವೈಭವ—ರತ್ನಕಿರೀಟ—ಸಿಂಹಾಸನಾಧಿಕಾರ.

ಇವೇ ಯುರೋಪಿನ ದೇಶಭ್ರಷ್ಟರ ಸುಖಸ್ವಪ್ನ!

ಯುರೋಪಿನ ರಾಜಕಾರಣಪಟುಗಳೂ, ಅರಸರೂ ಹಲವು ಮಂದಿ ಪದಚ್ಯುತರಾಗಿ, ದೇಶವನ್ನುಳಿದು, ದೇಶಾಂತರಗಳಲ್ಲಿ, ಅಲೆದಾಡುತ್ತಿದ್ದಾರೆ. ಇವರ ಭಾಗಕ್ಕೆ, ಇವರ ದೇಶವೆಂಬುದು ಯಾವುದೂ ಇಲ್ಲ ಪ್ರಪಂಚದಲ್ಲಿ. ಇವರು ಅಂದು ರಾಜರಾದರೂ, ಮಹೋನ್ನತ ಕೀರ್ತಿಶಾಲಿಗಳಾದರೂ ಇಂದು ಬೈರಾಗಿಗಳಿಗೂ ಕಡೆ. ಇಂಥವರ ಸಂಖ್ಯೆ ಈಗ ಯುರೋಪಿನಲ್ಲಿ ಹೆಚ್ಚುತ್ತಿದೆ. ಅವರ ಪ್ರಕೃತದ ಸ್ಥಿತಿಗತಿಗಳು, ಒಬ್ಬ ಬಡ ಒಕ್ಕಲಿಗನಿಂದಲೂ ಉತ್ತಮವಲ್ಲ.

ಆದರೂ, ಇವರೆಲ್ಲರಲ್ಲಿಯೂ ಒಂದು ದೊಡ್ಡ ಆಶೆ, ಭ್ರಮೆ ಮಾತ್ರ ಇದ್ದೇ ಇದೆ. ತಮ್ಮ ದೇಶದಲ್ಲಿ, ಸದ್ಯದಲ್ಲೇ ಒಂದು ಮಹಾಕ್ರಾಂತಿಯುಂಟಾಗದೇ? ಜನಗಳ ಮನಸ್ಸು ಆಗ ಬಿಗುಡಾಯಿಸದೇ? ಪ್ರಭುತ್ವದ ಪದ್ಧತಿ ಬೇರೆಯಾಗದೇ? ಆಗ, ತಮಗೆ ಸ್ವದೇಶಕ್ಕೆ ಹಿಂದಿರುಗುವ ಸಂಧಿ, ಅಲ್ಲಿಂದ ಕರೆ ಬರುವ ಸಂದರ್ಭ, ಪುನಃ ರಾಜಭೋಗವನ್ನು, ಹಿಂದಿನಂತೆಯೇ, ಅನುಭವಿಸುವ ಸುಯೋಗ ಒದಗದೇ?—ಈ ಭ್ರಾಂತಿ, ಅವರನ್ನು ಎಂದಿಗೂ ಬಿಟ್ಟಿಲ್ಲ. ಅವರು, ಆ ಸುಖಸ್ವಪ್ನದಲ್ಲಿ, ಹಗಲಿರುಳೂ ತೇಲಾಡುತ್ತಾ ಇದ್ದಾರೆ!

ಕೈಸರ್—ಮರೆಯಾದ ಮುದಿ ಸಿಂಹ

ಯುರೋಪಿನಲ್ಲಿ ಯುದ್ಧವನ್ನೊಂದು ಪದ್ಧತಿಯಾಗಿ ಮಾಡಿಟ್ಟ ಪುಣ್ಯಾತ್ಮನೀತನೇ. ಈಗ ಹಾಲೆಂಡಿನ ಡೂರ್ನಿನಲ್ಲಿ ಕಟ್ಟಿಗೆಯೊಡೆಯುತ್ತಿದ್ದಾನೆ; ಆ ಹಳ್ಳಿಯಲ್ಲಿ, ಗುಲಾಬೀ ಗಿಡಗಳ ಕಸಿ ಮಾಡುತ್ತಿದ್ದಾನೆ. ಇಂದು ಯಾರೂ ಅವನ ನೆನಪು ಮಾಡುವುದಿಲ್ಲ; ಅವನೊಬ್ಬ ವಿಸ್ಮೃತ ವ್ಯಕ್ತಿ. ಅವನೇ ಏಕೆ? ಯಾರು ಅವನನ್ನು ಆ ಪುರಾತನ ಸಿಂಹಾಸನದಿಂದ ತಳ್ಳಿ, ದೇಶಭ್ರಷ್ಟನನ್ನಾಗಿ ಮಾಡಲು ಸಹಾಯಕರಾದರೋ, ತಾವೇ ಹಿಟ್ಲರನ ಪಾದಾಕ್ರಾಂತರಾಗಿ, ಯಾರು ಅವನ ಭಯದಿಂದ, ಅನ್ಯ ದೇಶಗಳಲ್ಲಿ ಸುತ್ತಾಡುತ್ತಿರುವರೋ,—ಅವರನ್ನೂ, ಆ ಹಾಲೆಂಡಿನ ಕೆಲವು ಮಂದಿಯನ್ನೂ,—ಪ್ರಪಂಚವು, ಇಂದು ಪೂರ್ಣವಾಗಿ ಮರೆತೇ ಬಿಟ್ಟಿದೆಯೆನ್ನಿ!

× × × ×

ಗ್ರ್ಯಾಂಡ್ ಡ್ಯೂಕ್ ಸಿರಿಲ್

ಅನಂತರ, ಇವನ ಸಾಲಿಗಿಳಿದವರು, ರಷ್ಯದ ಗ್ರ್ಯಾಂಡ್ ಡ್ಯೂಕ್ ಸಿರಿಲ್‌ರವರು; ರೋಮನಾಫ್‌ರವರ ಹಕ್ಕುದಾರರು.

ಇವನ ರಾಜಪರಿವಾರದವರು, ಇವನಿಗೆ ಸಲ್ಲಿಸತಕ್ಕ 'ಚಕ್ರವರ್ತಿ'ಯ ಮರ್ಯಾದೆಗಳನ್ನು, ಆಗಾಗ ಸಲ್ಲಿಸುತಿದ್ದುದುಂಟು. ಜಗತ್ತಿನ ನಾನಾ ಭಾಗಗಳಲ್ಲಿ ಹಂಚಿ ಹೋಗಿದ್ದ, ರಷ್ಯದ ಸಾವಿರಾರು ಮಂದಿ ದೇಶಭ್ರಷ್ಟ ಪ್ರಜೆಗಳು, ಅಲ್ಲಲ್ಲಿ ಗೋಡೆಯ[illegible] ತೂಗ ಹಾಕಿದ ತಮ್ಮ [illegible] ಮಾಜಿ ಅರ[illegible] ಭಾವಚಿತ್ರವನ್ನು ಕಂಡಾಗಲೆಲ್ಲ, ತಲೆಬಾಗಿ [illegible]ರವಿಸಿದುದುಂಟು. 'ಯಾವುದಾದರೊಂದು ದಿನ, ವಿದ್ಯಮಾನಗಳು [illegible]ಗದಿರವು' ಎಂದು ಅವರು ಹೇಳಿಕೊಂ[illegible]ದುದುಂಟು. ಇತ್ತ, ಆ ಗ್ರ್ಯಾಂಡ್ ಡ್ಯೂಕನೂ, ಪ್ಯಾರಿಸಿನಿಂದ ರಿವೀರಾಕ್ಕೆ, ಹಾಗೂ ಇತರ ಕಡೆಗಳಿಗೆ ಓಡಾಡುತ್ತಿದ್ದರೂ, ತನ್ನ ರಾಜಕಾರಣವನ್ನು, ರಾಜತ್ವದ ಹಕ್ಕುಬಾಧ್ಯತೆಗಳನ್ನು ಫ್ರಾನ್ಸಿನಲ್ಲಿ ಒಂದು ಮಾಸಪತ್ರಿಕೆಯ ಮೂಲಕ, ತಾನೇ ಸಂಪಾದಕನಾಗಿ, ಪ್ರಚುರಗೊಳಿಸುತ್ತ ಆಯುಷ್ಯವನ್ನು ಕಳೆದುದುಂಟು.

ಆದರೆ ವಿದ್ಯಮಾನಗಳು ಬದಲಾಗಲಿಲ್ಲ; ರಾಜನಾಗುವನೆಂಬ ಸುಖಸ್ವಪ್ನದಲ್ಲಿ ಓಲಾಡುತ್ತ, ಸಿರಿಲನೂ, ಈಚಿಗೆ ಮೃತನಾಗಿಬಿಟ್ಟ!

× × × ×

ಲಿಯಾನ್ ಟ್ರೊಟಸ್ಕಿ

ರಷ್ಯದ ಆರಾಧ್ಯಪುರುಷನಾಗಿದ್ದ, ಅಂದಿನ ಲಿಯಾನ್ ಟ್ರಾಟಸ್ಕಿಯ ಗತಿಯಾದರೂ, ಈಗೇನು?

ಅವನೆಲ್ಲಿಯೋ ಮೆಕ್ಸಿಕೋ ದೇಶದಲ್ಲಿ ಅಡಗಿದ್ದಾನೆ. ಅವನ ಶ್ವಾಸಕೋಶಗಳಲ್ಲಿ, ತೂತು ಬಿದ್ದುಹೋಗಿದೆ. ಅವನ ವೈಭವವು, ಎಂದೋ ಮುಗಿದಿದೆ; ಅಧಿಕಾರದ ಆಸೆ ಅಂದೇ ಅಳಿದಿದೆ.

ಈ ದೇಶಭ್ರಷ್ಟರಲ್ಲಿ, ಒಂದು ವಿಚಾರ, ಮೇಲಕ್ಕೆ ಎದ್ದು ಕಾಣುತ್ತಿದೆ. ಅವರೆಲ್ಲರೂ ಒಬ್ಬರನ್ನೊಬ್ಬರು, ದ್ವೇಷಿಸುತ್ತಿದ್ದಾರೆ. ದಿನ ಬೆಳಗಾದರೆ, ತಮ್ಮ ಭಾಗ್ಯರವಿಯುದಿಸುವನೆಂದು ಆತುರದಿಂದ ಕಾದುಕೊಂಡಿದ್ದಾರೆ. ಏನು ಭ್ರಾಂತಿ!

× × × ×

ಸ್ಪೈನಿನ ದೊರೆ

ಯುರೋಪಿನ ಪಂದ್ಯಾಟಗಳಲ್ಲಿ, ಕುದುರೇ ಜೂಜುಗಳಲ್ಲಿ, ಸಾಮಾಜಿಕ ಕೂಟಗಳಲ್ಲಿ ಕೆಲವೊಮ್ಮೆ, ಅದೊಂದು ಮುಖ, ನಿಮ್ಮ ಕಣ್ಣಿಗೆ ಬೀಳುವುದು. ಆ ಮುಖದಲ್ಲಿ, ಕೆಲವು ವೇಳೆ ಉಲ್ಲಾಸ; ಕೆಲವು ವೇಳೆ ದುಃಖ. ಈ ಮುಖ ಯಾರದು ಬಲ್ಲಿರಾ? ಸ್ಪೈನಿನ ದೊರೆ ಅಲ್ಫಾನ್ಸೋವಿನದು!

ಸ್ಪೈನಿನಲ್ಲಿ ಇಂದಿನ ಯುದ್ಧ ಮುಗಿದು, ಒಂದು ಕಡೆಯವರು ಗೆದ್ದಾಗ, ಸಾವಿರಾರು ಮಂದಿ, ಹೊಸದಾಗಿ ದೇಶಭ್ರಷ್ಟರಾಗುವರು. ಅವರಲ್ಲಿ ಹಲವರು, ಈ ಅಲ್ಫಾನ್ಸೋ ರಾಜನನ್ನು, ಆ ಕಿತ್ತಳೆ ಬೆಳೆಯುವ ಸೀಮೆಯಿಂದ ಹೊರ ತಳ್ಳಿದವರು!

× × × ×

ಇಟೆಲಿಯ ದೊರೆ

[illegible]ಲ್ಲರೂ ಕ[illegible]ನ್ನು ಇಟೆಲಿಯ[illegible] ನೋಡೋಣ! [illegible]ಸನನ್ನು ಗಡಿ[illegible] ಮಾಡಿಲ್ಲ; [illegible]ಕ್ಕಳು ಇರ ಆಳುವ[illegible]ದಿಸಿ. [illegible] ಸ್ವ[illegible]ಟಿಗೆ ಸ[illegible] ಸಿಕ್ಕಿದ [illegible]ನ್ನತ್ತ ಮಾನ್ಯ ದೇಶಗಳಲ್ಲಿ,

ಮುಸಲೋನಿಯವರು ಕುದುರೆ ಸವಾರಿಯಲ್ಲಿ

ಅವನಿಗೆ ಸ್ವತಂತ್ರವಿಲ್ಲ; ಮುಸಲೋನಿ ಡಿಕ್ಟೇಟರನ ಕೈಗೊಂಬೆ. ಇಷ್ಟಾದರೂ, ಇಟೆಲಿಯಿಂದ ದೇಶಭ್ರಷ್ಟರಾದವರ ಸಂಖ್ಯೆಯೇನೂ ಕಡಿಮೆಯಿಲ್ಲ.

ಅದು ಆ ೧೯೧೧ನೆಯ ಇಸ್ವಿ. ಆಗ ಪತ್ರಿಕಾ ಉದ್ಯೋಗಿಯಾದ ಬಿನೋಟೋ ಮುಸಲೋನಿಯೂ, ಅವನ ಪ್ರಾಣಸ್ನೇಹಿತ ಪಿಟರೋ ನೆನಿಯೂ, ಅದೊಂದು ದ್ರೋಹದ ತಪ್ಪಿತಕ್ಕಾಗಿ ಜೈಲಿಗೆ ಕಳುಹಿಸಲ್ಪಟ್ಟರು. ಇವರಿಬ್ಬರೂ ಸೇರಿ, ಆಫ್ರಿಕಾಕ್ಕೆ ಯುದ್ಧಕ್ಕಾಗಿ ಹೋಗುತಿದ್ದ ಇಟೆಲಿ ಸೈನ್ಯಗಳು, ಅಲ್ಲಿಗೆ ಟ್ರೈನಿನ ಮೂಲಕ ಹೋಗದಂತೆ, ರೈಲ್ವೆ ಮಾರ್ಗಗಳನ್ನು ಕೆಡವಿದರೆಂಬುದೇ, ಇವರ ಮೇಲಿನ ಅಂದಿನ ಆರೋಪ!

ಹೌದು; ಮುಸಲೋನಿ ಅಂದು, ಈ ಕಷ್ಟವನ್ನು ಸಹಿಸಲು, ಸಂತೋಷದಿಂದ ಸಿದ್ಧನಾಗಿ ನಿಂತಿದ್ದ. ಅಂದು, ಅವನು ಸೋಶಿಯಲಿಸ್ಟ್; ಫೇಶಿಯಿಸ್ಟ್ ಆಗಿದ್ದ. ೭ ತಿಂಗಳು ತನಗೆ ಜೈಲುವಾಸವಾದರೂ ಚಿಂತ್ಯವಿಲ್ಲ; ಅಂತೂ ರಕ್ತಪಾತವನ್ನು ತಪ್ಪಿಸಲೇಬೇಕೆಂದು ಪ್ರತಿಜ್ಞೆ ಮಾಡಿದ್ದ ಶಾಂತಿವೀರನಾಗಿದ್ದ. ಅದೇ, ಅನಂತರ, ಅವನೇ,—ಆಫ್ರಿಕದಲ್ಲಿನ ಪ್ರಶ್ನೆ ಬಂದಾಗ—ಹೇಗೆ ಆ ರಕ್ತಪಾತವನ್ನು ಪ್ರೋತ್ಸಾಹಿ[illegible]ದು, ಇತಿಹಾಸ ಪ್ರಸಿದ್ಧವಾದ ಸಂಗ[illegible]

ಬಳಿಕ, ೧೯೨೨ರಲ್ಲಿ, ರೋಮಿನ ಮೇಲೆ ನಡೆದ ಪ್ರಸಿದ್ಧವಾದ ಆಕ್ರಮಣದಂದು, ಬಾಲ್ಯಸ್ನೇಹಿತನೂ, ಉಗ್ರ ಫೇಶಿಯಿಸ್ಟ್‌ವಾದಿಯೂ ಆದ ನೆನಿಯಾಸಿಗೂ, ಮುಸಲೋನಿಗೂ ಸರಿಬೀಳದೆ, ಇಬ್ಬರೂ ಬೇರೆಯಾಗಿ ಬಿಟ್ಟರು. ಮುಂದೆ ಮುಸಲೋನಿ, ಶಾಂತಿಪ್ರಿಯನಾದ ನೆನಿಯ ಪತ್ರಿಕಾ ಟೀಕೆಗಳನ್ನು, ಅದರ ತೀಕ್ಷ್ಣತೆಯನ್ನು ಸಹಿಸಲಾರದೆ, ಅವನನ್ನು ದೇಶದಿಂದ ಹೊರ ನೂಕಿಸಿದನು. ನೆನಿ ದೇಶಭ್ರಷ್ಟನಾದನು.

× × × ×

ನೆನಿಯ ಚಟುವಟಿಕೆ—

ಇಷ್ಟಾದರೂ ಕಡಿಮೆಯಾಗಲಿಲ್ಲ. ಅವನದು ಸುಮ್ಮನೆ ಕೂಡುವ ಜೀವವಲ್ಲ. ದೇಶಭ್ರಷ್ಟನಾಗಿ ಅಲೆದಾಡುತಿದ್ದರೂ, ಮುಸಲೋನಿಯ ಸೈನ್ಯಗಳು, ಸ್ಪೈನಿನಲ್ಲಿ ವಿಜಯದಿಂದ ಉಬ್ಬಿ ವೈಭವದೊಡನೆ ಮೆರೆಯುತ್ತಿದ್ದಾಗ, ನೆ[illegible] ಅಲ್ಲೊಂದು ಕೈ ತೋರಿಸಿಬಿಟ್ಟ. ಆಗ ವಿಮಾನಗಳು, ಆ ಸೈನ್ಯಗಳ ತಲೆಯ ಮೇಲೆ ಹಾರಾಡಿದುವು, ಹಾಗೂ ಮಳೆಗರೆದುವು; ಏನನ್ನು? ಬಾಂಬುಗಳನ್ನು ಅಲ್ಲ; ಲಕ್ಷಾಂತರ ಕರಪತ್ರಗಳನ್ನು. ಆ ಪತ್ರಗಳಲ್ಲಿ ಹೀಗಿತ್ತು:—

'ನೀವು ಇದುವರೆಗೆ ಯಾರನ್ನು ಕೊಂದಿದ್ದೀರೋ, ಕೊಲ್ಲುತ್ತಿದ್ದೀರೋ, ಅವರೆಲ್ಲರೂ, ಆ ಗಂಡಸರೂ, ಹೆಂಗಸರೂ, ಮಕ್ಕಳೂ ನಿಮ್ಮಂತೆಯೇ ಮನುಷ್ಯರು'.

ಹೊಟ್ಟೆನೋವು, ವಾಂತಿ, ಅಜೀರ್ಣ, ಕಾಲರಾ, ಸೆಟೆಬೇನೆ, ಬವಳಿ ಮುಂತಾದ ಅನೇಕ ಬೇನೆಗಳಿಗಾಗಿ

ಜವೇರಿಯನ್ನರ ಜೀವನ ಮಿಕ್‌ಶ್ಚರವು

ರಾಮಬಾಣದಂಥ ಉಪಾಯವಾಗಿದೆ. ಇದನ್ನು ಹೊಟ್ಟೆಯಲ್ಲಿ ತೆಗೆದುಕೊಳ್ಳಬಹುದು. ಇಲ್ಲವೆ ಮೈಮೇಲೆ ಲೇಪಿಸಬಹುದು. ಡಾಕ್ಟರ ಮತ್ತು ವೈದ್ಯರು ಇಲ್ಲದ ವೇಳೆಯಲ್ಲಿ ಜವೇರಿಯನ್ನರ ಜೀವನ ಮಿಕ್‌ಶ್ಚರದಂಥ ನೆರವಾಗುವಂಥ ಔಷಧವು ಮತ್ತೊಂದಿಲ್ಲ.

ಪಟ್ಟಣಗಳಲ್ಲಿ ಕೆಮಿಸ್ಟರ ಅಂಗಡಿಗಳಲ್ಲಿಯೂ ಹಳ್ಳಿಪಳ್ಳಿಗಳಲ್ಲಿ ಕಿರಾಣೀ ಅಂಗಡಿಗಳಲ್ಲಿಯೂ ಈ ಔಷಧವು ಮಾರಲಿಕ್ಕೆ ಸಿಗುತ್ತದೆ.

ಎಮ್. ಎಚ್. ಜವೇರಿಯಾನ ಮತ್ತು ಕಂಪೆನಿ

ದೇವಕರಣ ಮ್ಯಾನ್ಶನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ೨.

ಈ ಕರಪತ್ರಗಳ ಕಂಠೋಕ್ತವಾದ ಪರಿಣಾಮ[illegible]ವೆಂದು ತಿಳಿದಿಲ್ಲ. ಇಷ್ಟು ನಿಜ. ಆ ಕರಪತ್ರಗಳು ಹೊರಟಂದಿನಿಂದ, ಇಟೆಲಿಯ ಸೈನ್ಯಗಳಿಗಲ್ಲಿ, [illegible]ಳಿಬರುವಂಥ ವಿಜಯಗಳ ಯಶಸ್ಸು ಸಿದ್ಧಿಸಲಿಲ್ಲ. ಮೊದಲಿನಷ್ಟು ದೊಡ್ಡ ವಿಜಯಲಾಭ ದೊರಕಲಿಲ್ಲ.

ನೆನಿಯ ಕೈಯ ಕರಪತ್ರಗಳ ಪ್ರಭಾವವೇ ಇದು?

× × × ×

ಇನ್ನೊಬ್ಬ—ಮುಸಲೋನಿಯ ಎದುರುವಾದಿ

ಇಟೆಲಿಯಲ್ಲಿ ಮುಸಲೋನಿಯ ಇನ್ನೊಬ್ಬ ಪ್ರತಿವಾದಿ ಎಂದರೆ,—ಫರಂಕಿ. ಇವನು ಇನ್ನೂ ತಲೆ ಎತ್ತುತ್ತಾ ಇದ್ದಾನಷ್ಟೆ. ಈತ ಮುಸಲೋನಿಯ ಮುಖ್ಯ ಸೇನಾನಾಯಕರಲ್ಲಿ ಒಬ್ಬ.

[illegible]ಪೋಪರೊಡನೆ ಸೇರಿಕೊಂಡು, ಗಲಭೆ ಮಾಡುತ್ತಿರುವ[illegible]ವನು; 'ಕುಲತತ್ತ್ವ'ಗಳ ಚಳುವಳಿಯ ಹಿಂ[illegible]ಗಡೆ ಇರುವವನೂ ಇವನೇ. ಮೊನ್ನೆ ಮೊನ್ನೆ 'ಲಿಬಿಯದ ಗವರ್ನರರ ಸ್ಥಾನವನ್ನು ಫರಂಕಿಯವರಿಗೆ ಕೊಟ್ಟಿದೆ' ಎಂದು, ರೋಮಿನ ವಿದೇಶೀ ಕಾರ್ಯಾಲಯವು, ಪ್ರಕಟಿಸಿದ್ದು, ಹೊಸ ವಿಚಾರವೇನೂ ಅಲ್ಲ. ಇದರಿಂದ, ಈ ಫರಂಕಿಯನ್ನು ದೂರಕ್ಕೆ ಅಟ್ಟುವ ಯೋಚನೆ ನಡೆದಿದೆ ಎಂಬುದು ಸ್ಪಷ್ಟ. ಆ ಮಾತನ್ನು, ಮುಸಲೋನಿಯವರೇ, ಸೂಚಿಸಿದ್ದಾರೆ. ಆದರೆ, ಫರಂಕಿಯೇನೂ ಇದರಿಂದ ಭೀತನಾಗಿಲ್ಲ. 'ಇದೆಲ್ಲಾ ಬರೀ ಪೊಳ್ಳು ಹರಟೆ' ಎಂದೇ ಅವನು ಗಟ್ಟಿಯಾಗಿ ಒದರಿಬಿಟ್ಟಿದ್ದಾನೆ; ಮಾತ್ರವಲ್ಲ; ಮುಸಲೋನಿಯನ್ನೇ ಧಿಕ್ಕರಿಸಿ, ಅಲ್ಲಿಂದ ಹೊರಟುಬಿಟ್ಟಿದ್ದಾನೆ.

ಈ ಸಂದರ್ಭದಲ್ಲಿ, ಬಾಲ್ಯ ಸ್ನೇಹಿತನಾಗಿದ್ದು, ದೇಶಭ್ರಷ್ಟನಾದ ನೆನಿಯನ್ನು ಮುಸಲೋನಿ ಕರೆಸಿಕೊಳ್ಳಬಹುದೆಂದೂ, ಅಲ್ಲಲ್ಲಿ ಜನಗಳು ಗುಟ್ಟಾಗಿ ಮಾತಾಡಲಾರಂಭಿಸಿದ್ದಾರೆ.

× × × ×

ಆರ್ಚ್ ಡ್ಯೂ[illegible] ಒಟ್ಟೊ

ಇನ್ನು, ದುರಾದೃಷ್ಟದ ದೇಶಗಳಲ್ಲೊಂದಾದ ಈಚಿಗಿನ ಆಸ್ಟ್ರಿಯಾ! ಇಲ್ಲಿ ನಾಝಿಗಳ ಹೊಡೆತವನ್ನು ಸಹಿಸಲಾರದೆ, ಆಶ್ರಯಕ್ಕಾಗಿ ದೇಶಭ್ರಷ್ಟರಾಗುತ್ತಿರುವವರ ಅಂಕೆಸಂಖ್ಯೆಗಳನ್ನು, ನಿರ್ದಿಷ್ಟವಾಗಿ ಹೇಳುವುದು ಸುಲಭವಲ್ಲ. ಕೆಲವರು ಇಂಗ್ಲೆಂಡಿಗೋಡಿ ಬಂದು, ಜೈಲು ಸೇರುತ್ತಾರೆ. ಕೆಲವರು, ಇದ್ದಲ್ಲಿಯೇ ಉಳಿದು, ಫೆಶಿಯಿಸ್ಟರ ನಿರ್ಬಂಧವಾಸದ ಕ್ಯಾಂಪುಗಳಲ್ಲಿ ವಿಶ್ರಾಂತಿ ಹೊಂದುತ್ತಾರೆ.

ಆದರೆ, ಇದೆಲ್ಲಾ ಗಲಭೆಗಳು [illegible] ಉಂಟಾದುವಲ್ಲ; ಘೋರ ಯುದ್ಧದ [illegible] ಆರಂಭವಾದುವು. ಆಗಲೇ, ಹೆ[illegible]ದು.

(೧೭ನೇ ಪುಟ ನೋಡಿ)

[...]ಲ್ಲ ರೋಮಾಂಚಕಾರಿಯಾದ ಪವಿತ್ರ ಪ್ರೇಮ.

—ಹೆತ್ತವರಲ್ಲಿ ಆದರ್ಶ ಭಕ್ತಿ.

ಜಪಾನಿನಲ್ಲಿ ಪವಿತ್ರ ಪ್ರೇಮದ ನಿದರ್ಶನಗಳು ಹಲವು ಉಂಟು. ಅದು ಅಲ್ಲಿನ 'ಸುಂದರಿಯರ ವ್ಯಾಪಾರ ಮಂದಿರ'ದಲ್ಲಿಯೂ ಕೂಡ ಕಂಡು ಬರುತ್ತದೆ,

ಅಂಥ ಮಂದಿರಗಳಿಗೆ, ದೇಶದ ನಾನಾ ಭಾಗಗಳಿಂದ ಚಿಕ್ಕ ಹಾಗೂ ಪ್ರೌಢ ವಯಸ್ಸಿನ ಹೆಣ್ಣು ಮಕ್ಕಳು ಬಂದು, ಸೇರುವುದುಂಟು. ಅಂಥವರಲ್ಲಿ, ಇಲ್ಲಿಗೆ ಬಂದು ಸೇರುವ ಮೊದಲೇ, ಪ್ರಣಯ ಪರಿಚಯವನ್ನು ಮಾಡಿಕೊಂಡವರೂ, ಮಾಡಿಕೊಳ್ಳದವರೂ ಉಂಟು.

ಹೀಗೆ, ಈ ಮಂದಿರಗಳಿಗೆ ಬರುವ ಹುಡುಗಿಯರಿಗೆ, ಸಾಮಾನ್ಯವಾಗಿ ಪ್ರಪಂಚವ್ಯವಹಾರದ ಜ್ಞಾನವಿರುವುದಿಲ್ಲ. ಒಂದೊಂದು ವೇಳೆ, ಕೇವಲ ಬಾಲಿಕಾವಸ್ಥೆಯ ಹುಡುಗಿಯರೇ, ಅಲ್ಲಿಗೆ ಬರುವುದೂ ಉಂಟು. ಇವರಲ್ಲಿ, ಯುವಕರ ಪವಿತ್ರ ಪ್ರಣಯವನ್ನು ಸಂಪಾದಿಸಿರುವವರೂ ಕೆಲವರಿರುವರೆಂದು, ಮೊದಲೇ ಸೂಚಿ, ಲಾಗಿದೆ.

ಹಾಗಿದ್ದರೂ ಏನು? ಆ ಹುಡ[...]ಯರಲ್ಲಿ ಈ ಪ್ರೇಮವು, ಮಾತಾ-ಪಿತೃಭಕ್ತಿ[...]ಯ ಮುಂದೆ ಎಲ್ಲಿಯೋ ತೇಲಿ ಹೋಗುತ್ತ[...]. ಅಲ್ಲಿ ಆ ಭಕ್ತಿಗೆ ಅಷ್ಟು ಪ್ರಾ[...]ಶಸ್ತ್ಯ, [...]ಮಹತ್ವ. ಆದ್ದರಿಂದಲೇ, ಜಪಾನಿ[...] ಹುಡುಗಿಯರು, ಅವರ ತಂದೆ ತಾಯಿಗಳ ಸು[...]ಖಕ್ಕಾಗಿ, ಹಿ[...]ತಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲು ಸರ್ವದಾ ಸಿದ್ಧರೇ. ಅದು, ಆ ದೇಶದಲ್ಲಿ ಅನೂಚಾನವಾಗಿ ಬಂದ ಹಳೆಯ ಪದ್ಧತಿ.

ಆದರೆ, ಈ ಹೆಣ್ಣು ಮಕ್ಕಳು ಒಮ್ಮೆ ಈ 'ಸುಂದರಿಯರ ವ್ಯಾಪಾರ ಮಂದಿರ'ಕ್ಕೆ ಕಾಲಿಟ್ಟರೆಂದರೆ,—ಮತ್ತೆ ಅವರು ಅಲ್ಲಿಂದ ಹೊರ ಬರುವರೆಂಬ ಮಾತೇ ಇಲ್ಲ. ಅಥವಾ ಇದ್ದರೂ, ಎಲ್ಲಿಯೋ, ಅಪರೂಪವಾಗಿ, ಲಕ್ಷಕ್ಕೊಬ್ಬಳು! ಇಂಥ ಪರಿಸ್ಥಿತಿಯಲ್ಲಿ, ಪೂರ್ವ ಪ್ರ[...]ಯಿಯೊಡನೆ ಅವರು ಅನುರಾಗದಿಂದಿ[...]ಲು ಅವಕಾಶವೆಲ್ಲಿ?

ಒಂದು ವೇಳೆ, ಪೂರ್ವ[...] ಪ್ರಣಯಿಯೇನಾದರೂ, ಅಷ್ಟೊಂದು ಉತ್ಸುಕನಾಗಿ ತಾನು ಪ್ರೀತಿಸುತ್ತಿರುವವಳನ್ನು, ಈ ಮಂದಿರದಿಂದ ಬಿಡಿಸಿಕೊಂಡು ಹೋಗಲು ಬಯಸಿದಲ್ಲಿ, ಆ ಮಂದಿರದ [...]ಜಮಾನಿ ಆ ಹುಡುಗಿಗಾಗಿ ತಂದೆ ತಾಯಿಗಳಿ[...] ಕೊಟ್ಟ ಹಣ, ಈಕೆಯ ಪೋಷಣೆಗಾಗಿ-ಹೊ[...]ಟ್ಟೆ ಬಟ್ಟೆಗಳಿಗಾಗಿ ಆದ ವೆಚ್ಚ, ಮತ್ತದರ ಬಡ್ಡಿ ಮುಂತಾದುವುಗಳನ್ನೆಲ್ಲಾ ಸೇರಿಸಿ, ಒಂದಕ್ಕೆ ನಾಲ್ಕರಷ್ಟು ದೊಡ್ಡದಾಗಿ ಮಾಡಿ, ಆ ಮೊತ್ತವನ್ನು ತೆತ್ತರೆ, ಹುಡುಗಿಯನ್ನು ಬಿಡಿಸಿಕೊಂಡು ಹೋಗಲು ಅಡ್ಡಿ ಇಲ್ಲವೆನ್ನುತ್ತಾಳೆ. ಆದರೆ, ಈ ಪ್ರಣಯಿಯಲ್ಲಿ ಅಷ್ಟು ಹಣವಿರುವುದೆಲ್ಲಿ? ಹೀಗಾಗಿ, ಆ ಯುವತಿಯ ಬಿಡುಗಡೆಗೇ ಆಗಲಿ, ಪವಿತ್ರ ಪ್ರೇಮ ಪ್ರದರ್ಶನಕ್ಕಾಗಲೀ ಎಡೆ ದೊರಕದು.

ಈ ನೈಜ ಪ್ರೇಮದ ವಿಚಾರದಲ್ಲಿ, ಅಲ್ಲಿ ಜರುಗಿದ ಘಟನೆಯ ವೃತ್ತಾಂತವೊಂದು ಈ ರೀತಿಯಾಗಿದೆ:—

ಯೇನ್ ಸೋಯಾ ಎಂಬಾಕೆ, ಪೆರುಗಲ್ ದೇಶದ ಒಬ್ಬ ಸುಂದರ ಯುವತಿ. ಈಕೆಯ ನೆರೆಯವನಾಗಿ, ಒಬ್ಬ ಸುಂದರ ಯುವಕನೂ ಇದ್ದ. ಇವರಿಬ್ಬರಲ್ಲಿ ಪರಸ್ಪರ ಪ್ರೇಮ ಬೆಳೆದು ಬಂದಿತ್ತು. ಹೀಗಿರುವಾಗ, ಆ ಯುವತಿಯರ ಹೆತ್ತವರಿಗೆ, ದುಡ್ಡಿನ ತಾಪತ್ರಯ ಬಹಳವಾಯಿತು. ಸಂಸಾರವು ಸಾಗದಾಯಿತು. ಅವರು ಕೆಲಸ ಮಾಡುತ್ತಿದ್ದ, ಆ ಬೆಂಕೀ ಪೆಟ್ಟಿಗೆಯ ಕಾರ್ಖಾನೆಯ ಕೂಲೀ ಕೆಲಸವೂ ನಿಂತು ಹೋಗಿ, ಹೊಟ್ಟೆಗೆ ಹಿಟ್ಟಿಲ್ಲದೆ, ಉಪವಾಸ ಬೀಳುವ ಸ್ಥಿ[...]ತಿ ಒದಗಿತು. ಮನೆಯಲ್ಲಿರುವ ಒಂದೊಂದೇ [...]ರ್ಥಗಳನ್ನೂ ಮಾರಲು ಆರಂಭಿಸಿ, ಅವೂ [...] ಹೋದುವು. ಇನ್ನು, ಅವರಿಗೆ, ಮಾ[...] ಉಳಿದ ಪದಾರ್ಥವೆಂದರೆ,—ಮಗ[...] ಕೊನೆಗೆ ಆಕೆಯನ್ನೂ, ಒಂದು ವ್ಯಾಪಾರ ಮಂದಿರಕ್ಕೆ ಮಾರ[...] ವ್ಯವಸ್ಥೆಯೂ ಆಗಿ ಹೋಯಿತು!

ಇದರಿಂದ ಹೆತ್ತವರ ಕಷ್ಟನಿವಾರಣೆಗೆ ಮಾರ್ಗವಾಯಿತು. ಅಲ್ಲದೆ, ತನ್ನಿಂದ ಹೆತ್ತವರಿಗೂ ಸುಖವಾಯಿತೆಂದು, ಆ ಹುಡುಗಿಗೂ ಪರಮ ಸಂತೋಷವಾಯಿತು. ಆಕೆ ತಾನು 'ಧನ್ಯೆ! ತನ್ನ ಜನ್ಮ ಸಾರ್ಥಕವಾಯಿತು' ಎಂದುಕೊಂಡಳು.

ಇಷ್ಟರಲ್ಲಿ, ಈ ಎಲ್ಲ ವೃತ್ತಾಂತವೂ, ಈಕೆಯ ಪೂರ್ವ ಪ್ರಣಯಿಯಾದ ಆ ಯುವಕನಿಗೆ ತಿಳಿಯಿತು. ಆದರೂ ಏನು? ಜಪಾನ್ ಹುಡುಗಿಯರ ಅಖಂಡ ಮಾತಾ-ಪಿತೃಭಕ್ತಿಯ ಮುಂದೆ, ಯಾವುದೂ ನಡೆಯದೆಂಬುದು ಅವನಿಗೆ ಚೆನ್ನಾಗಿ ತಿಳಿದೇ ಇತ್ತು.

ಈ ಹುಡುಗಿಯನ್ನು, ಆ ವ್ಯಾಪಾರ ಮಂದಿರಕ್ಕೆ ಕಳುಹಿಸುವ ದಿನ, ಈ ಯುವಕನು, ಆ ಹುಡುಗೆಯ ಮನೆಯ ಮುಂಗಡೆ, ದೂರದಲ್ಲಿ ನಿಂತು, ನಡೆಯುವುದನ್ನೆಲ್ಲ ನೋಡುತ್ತಿದ್ದ. ತಂದೆತಾಯಿಗಳೊಡನೆ, ಈ ಯುವತಿಯೂ ಹೊರಟಿದ್ದಳು. ಆಗ, ಆ ಯುವಕ, ಆಕೆಯ ಹೆತ್ತವರಿಗೆ ತಿಳಿಯದಂತೆ, ತನ್ನ ಪ್ರಣಯಿನಿಗೆ ವಂದನೆಯನ್ನು ಅರ್ಪಿಸಿ, ಕೊಂಚ ದೂರ ಹಿಂಬಾಲಿಸಿ, ಮನಸ್ಸಿನಲ್ಲಿ ಏನನ್ನೋ ಯೋಚಿಸುತ್ತ ಮನೆಗೆ ಹಿಂದಿರುಗಿದ.

ಇತ್ತ ಇವರು ಮೂವರೂ, ಆ ದುರಾಚಾರದ ಮಂದಿರಕ್ಕೆ ಬಂದು ಸೇರಿದರು. ಈ ಯುವತಿಯ ಹೆಸರು ಮಂದಿರದ ರಿಜಿಸ್ಟರಿನಲ್ಲಿ ದಾಖಲಾಯಿತು; ಈ ವಿಕ್ರಯ ಸಂಬಂಧವಾದ ದಾಖಲೆಗಳು, ಕಾಗದ ಪತ್ರಗಳನ್ನು ಬರೆದು ಮುಗಿದು, ಹೆತ್ತವರ ಸಮ್ಮತಿಯ ದಸ್ಕತುಗಳೂ ಆಗಿ ಹೋದುವು. ಹೆತ್ತವರಿಗೆ, ನಿರ್ಣಯವಾದ ಮೊತ್ತವೂ ದೊರಕಿತು. ಅವರು ಮನೆಗೆ ಹಿಂದೆರಳಿದರು. ಹುಡುಗಿಗೆ ಮಂದಿರದಲ್ಲಿ ಒಂದು ನಿರ್ದಿಷ್ಟವಾದ ಸ್ಥಾನವು ಕಲ್ಪಿಸಲ್ಪಟ್ಟು, ಅಲ್ಲಿ ಆಕೆ ಇರತೊಡಗಿದಳು.

ಇಷ್ಟರಲ್ಲಿ ಸಂಜೆಯಾಯಿತು. ಆ ಮಂದಿರಕ್ಕೆ, ನಿತ್ಯ ಪದ್ಧತಿಯಂತೆ, ರಸಿಕರು, ವಿಲಾಸಪ್ರಿಯರೂ ಒಬ್ಬೊಬ್ಬರೇ ಬರಲಾರಂಭಿಸಿದರು. ಇಂದೇ ಸೇರಿದ ಈ ಯುವತಿಯೂ, ಅಲ್ಲಿನ ನಿಯಮದಂತೆ, ಬಂದವರನ್ನು ಸಂತೋಷಗೊಳಿಸಲು ಸಿದ್ಧಳಾಗಿಯೇ ಕಾದು ನಿಂತಿದ್ದಳು!

ಕ್ರಮಶಃ, ಅಲ್ಲಿನ ಕಾವಲಿನ ಆಳೊಬ್ಬನು ಬಂದು, 'ನಿಮ್ಮೊಡನೆ ಮಾತಾಡಲು ಯಾರೋ ಬಂದು ಕಾದಿರುವರು' ಎಂದು ಹೇಳಿದನು. ಯುವತಿಯು, ಬಂದವನನ್ನು ನೋಡಿದಳು. ಆತನು ಇನ್ನಾರೂ ಅಲ್ಲ; ತನ್ನ ಪೂರ್ವ ಪ್ರಣಯಿಯಾದ ಆ ನೆರೆಯ ಯುವಕನೇ. ಯುವತಿಯ ಸಂತೋಷಕ್ಕೆ ಪಾರವೇ ಇಲ್ಲ.

ಅಲ್ಲಿ, ಹಾಗೆ, ಅವರಿಬ್ಬರೂ ಕಲೆತು, ದೃಢವಾದ ಪ್ರಮಾಣವನ್ನು ಮಾಡಿಕೊಂಡರು.

ಬೆಳಗಾಯಿತು. ಕಾವಲಿನ ಆಳು ಬಂದು, ಬಾಗಿಲನ್ನು ತೆರೆದು ನೋಡಿದ. ಇಬ್ಬರೂ ಪರಸ್ಪರ ತಬ್ಬಿಕೊಂಡು ಗಾಢ ನಿದ್ರೆಯಲ್ಲಿದ್ದುದನ್ನು ಕಂಡ. ಕಿಡಿಕಿಯಿಂದ ಬಿಸಿಲು ಬಂದು, ಅವರ ಮೈ ಮೇಲೆ ಬಿದ್ದಿದೆ; ಆದರೂ ಅವರು ಎಚ್ಚರಗೊಂಡಿಲ್ಲ. ಎಚ್ಚರಗೊಳ್ಳುವಂತೆಯೂ ಇಲ್ಲ!

ಅವರಿಬ್ಬರೂ ಮೃತರಾಗಿ, ದೀರ್ಘನಿದ್ರೆಯನ್ನು ಅನುಭವಿಸುತ್ತಿದ್ದರು!

ಪರೀಕ್ಷಿಸಲಾಗಿ, ಆ ಮೃತ ಯುವಕನ ಕೈಯಲ್ಲಿ ಒಂದು ಚಿಕ್ಕ ಸೀಸೆ ಇತ್ತು. ಅದರಲ್ಲಿ ವಿಷವಿತ್ತು. ಅವರಿಬ್ಬರ ಮರಣಕ್ಕೆ ಕಾರಣವಾದುದು ಅದೇ!

ಅವರಾ ಪವಿತ್ರ ಪ್ರೇಮವು ಕೊನೆಗೊಂಡುದೆಂದರೆ,—ಹೀಗೆ!

— ❦ —

(೧೩ನೇ ಪುಟದಿಂದ)

ರಾಜಮನೆತನದ ಸಿಂಹಾಸನವೂ, ಕಂಪಿಸಲು ಶುರುವಾಯಿತು. ಆಗಲೇ, ಯುರೋಪಿನ ಇತಿಹಾಸ ಪುಸ್ತಕಗಳಲ್ಲಿನ, ಈ ರಾಜವಂಶದ ಶಿಲೋಲ್ಲೇಖಗಳೂ ಮೆಲ್ಲ ಮೆಲ್ಲನೆ ಕ್ಷೀಣಿಸತೊಡಗಿದುವು.

ಆದರೂ, ಹಿಟ್ಲರನು, ಒಂದು ಆಡಂಬರಮಯವಾದ ಜರ್ಮನ್ ಕಾರಿನ ಮುಂಭಾಗದಲ್ಲಿ ಕುಳಿತು, ಈಚಿಗೆ ಆಸ್ಟ್ರಿಯಾದಲ್ಲಿ ಗಂಭೀರವಾಗಿ, ಸುಖಪ್ರಯಾಣ ಮಾಡಿದ್ದ ಕಾಲದಲ್ಲಿ, ತಾನು ದೇಶಭ್ರಷ್ಟನಾಗಿದ್ದರೂ, ಪುನಃ ಅರಸನಾದೇನೆಂಬ ಆಶೋತ್ತರವನ್ನು ಇಟ್ಟುಕೊಂಡಿದ್ದ, ಆದರೆ ಹಿಟ್ಲರನ ಇಂದಿನ ದಿಗ್ವಿಜಯದಿಂದ ನಿರಾಶೆಗೊಂಡಿದ್ದ, ಹೆಪ್ಸ್‌ಬರ್ಗಿನ ರಾಜವಂಶೀಯನೊಬ್ಬನು ಜೀವಂತನಾಗಿಯೇ ಇದ್ದ.

ಇವನೇ ಆ ಆರ್ಚ್ ಡ್ಯೂಕ್ ಒಟೋ!

ಆಶಾವಾದಿಯೂ, ಸಾಹಸಿಯೂ, ಮನೋಹರಾಕಾರನೂ ಆದ ಒಟೋ,—ನಿರ್ನಾಮವಾದ ಆಸ್ಟ್ರಿಯದ ಸಿಂಹಾಸನಕ್ಕೇರಲು ಹಲವು ಬಗೆಯ ಯತ್ನಗಳನ್ನು ನಡೆಸಿದ್ದನು. ಪಾಪ! ಫಲಿಸಲಿಲ್ಲ.

ಈತನ ಮುಂದಿನ ಗತಿ ಏನೆಂದು ಗೊತ್ತಿಲ್ಲ. ಶೂಷ್ನಿಗರ ಗತಿ ಏನು? ಆತನಿಗಿಂತಲೂ ಈತನ ಗತಿಯು ಹೀನವೇ? ಯಾರೂ ಹೇಳಲಾರರು.

ಈ ರೀತಿಯಲ್ಲಿ ಸಿಂಹಾಸನವನ್ನು ಕಳೆದುಕೊಂಡು, ಅಧಿಕಾರವನ್ನು ಹೋಗಲಾಡಿಸಿಕೊಂಡು ದೇಶಾಂತರವಾಸಿಗಳಾದ ರಾಜರೂ, ರಾಜಕಾರಣಪಟುಗಳೂ ಇನ್ನೂ ಕೆಲವು ಮಂದಿ ಇದ್ದಾರೆ. ಇನ್ನೂ ಅವರು ರಾಜರಾದೇವು, ಅಧಿಕಾರಕ್ಕೆ ಬಂದೇವು ಎಂದು ಹಾರೈಸುತ್ತಿದ್ದಾರೆ; ಹವಣಿಸುತ್ತಿದ್ದಾರೆ. ಆದರೆ ವ್ಯರ್ಥ[...]

ಇನ್ನೊಂದು ಸಮಯದಲ್ಲಿ ಹಿಟ್ಲರರೇನಾಗುವರು? ಸ್ಟ್ಯಾಲಿನರೇನಾಗುವರು? ಚಿರಕಾಲವೂ ಅವರು ಆ ಅಧಿಕಾರಪದವಿಯಲ್ಲೇ ಇರುವರೇ? ಇದು ಭವಿಷ್ಯದ ಉಡಿಯಲ್ಲಿರುವ ದೈವೇಚ್ಛೆಯ ಮಾತು!

× × × ×

ದೇಶಭ್ರಷ್ಟರಿಗಾಗಿ ಸಹಾನುಭೂತಿ

ಘೋರಯುದ್ಧಕ್ಕೆ ಮುಂಚೆ, ಇಂಗ್ಲೆಂಡಿನಲ್ಲಿ ಆಶ್ರಯ ಪಡೆದಿದ್ದ ರಾಜವಂಶೀಯರಿಬ್ಬರೇ; ಮೂರನೇ ನೆಪೋ[...]ಲಿಯನ್ ಚಕ್ರವರ್ತಿ, ಆತನ ಮಡದಿ ಮ[...]ರಾಣಿ; ಹಾಗೂ ಪೋರ್ಚ್‌ಗಲ್ಲಿನ ಮ[...]ವೆಲ್.

ಕಿರೀಟತ್ಯಾಗಿಗಳಾದ ಇವರಿಂದಲೂ ಹೆಚ್ಚು ದುಃಖ[...]ಕ್ಕೆ ಒಳಗಾದವರೆಂದರೆ,—ಅವರ ಮತ್ತು ಇತರ [...]ದೇಶದ ಪ್ರಜೆಗಳು. ಆ ದೇಶಭ್ರಷ್ಟರ ಸಂಖ್ಯೆ [...] ಹೀಗಿದೆ:—ರಷ್ಯದವರು ೨೦ ಲಕ್ಷ; ಜರ್ಮನ[...] ಲಕ್ಷ; ಆಸ್ಟ್ರಿಯ[...]ದವರು, ಸ್ಪೈನಿನವರು, ಇ[...]ಯವರು ಇವರ ಈ ಪಡೆಯಂತೂ, ದೊಡ್ಡ[...]ದೇ ಇದೆ. ಇವರೆಲ್ಲರೂ, ಜಗತ್ತಿನಲ್ಲಿ ತಮಗೊಂದು ಹೊಸ ನೆಲೆ[...]ಯನ್ನು ಕಂಡು ಹಿಡಿಯಲು ಅಲೆದಾಡುತ್ತಿದ್ದಾರೆ. [...]ದರೆ, ಇವರಿಗೆಲ್ಲಿಯೂ ಆಶ್ರಯವಿಲ್ಲ.

ಅಷ್ಟೇಕೆ? ಇವರಲ್ಲಿ ಹಲವರಿಗೆ, 'ಪಾಸುಪೋರ್ಟು' ಕೂಡ ಇಲ್ಲ. ಜನಾಂಗಸಂಘ, ಇವರಿಗೆ ಪಾಸುಪೋರ್ಟ್ ಕೊಡಿಸಿ, ಸಹಾಯ ಮಾಡುತ್ತದೇನೋ ಸರಿ; ಆದರೆ, ಈ ಪಾಸುಪೋರ್ಟ್ ಇದ್ದವರೂ, ಎಲ್ಲಿಯೂ, ಯಾವ ದೇಶದ ನಾಗರಿಕ ನಿವಾಸಿಗಳೂ ಆಗಲಾರರು.

ಯಥೇಷ್ಟ ದುಡ್ಡು ಸುರಿದರೆ, ಕೆಲ ಸಣ್ಣ ರಾಷ್ಟ್ರಗಳು, ಇವರನ್ನು ತಮ್ಮ ದೇಶದ 'ನಾಗರಿಕ'ರೆಂದು ಒಪ್ಪಿಕೊಳ್ಳುವ ಒಂದು ರೀತಿಯುಂಟು. ಆದರೆ ಅಷ್ಟು ದುಡ್ಡು ಕೊಟ್ಟು, ಆ 'ನಾಗರಿಕ ಜೀವನ'ವನ್ನು ಕೊಳ್ಳುವ ಶಕ್ತಿ ಇವರಿಗೆಲ್ಲಿ ಬಂತು?

ಯಾವ ದೇಶವೂ ತಮ್ಮದೆನ್ನಲು ಬಾಯಿ ಬಾರದ ಇವರಿಗಾಗಿ, ಕೊಂಚ ಸಹಾನುಭೂತಿಯು ನಿಮ್ಮಲ್ಲಿರಲಿ!

—೦೦೦—

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO ORIGINAL KILLER REGD. TRADE MARK.

ನಕಲಿಗಳ ವಿಷಯ ಜಾಗರೂಕರಾಗಿರಿ. ಕೊಳ್ಳುವ ಮೊದಲು ಕೋಳಿ ಗುರುತಿನ ಕೆಂಪು ಶೀಲನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತಾ ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

೬೦ ಮಾತ್ರೆಗಳ ಬುಡ್ಡಿಯೊಂದರ ಬೆಲೆ ರೂ. 3/—. ವಿ. ಪಿ. ಚಾರ್ಜು ಆಣೆ 8 ಪ್ರತ್ಯೇಕ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲಭಾಯಿ [...]ಟೇಲ್ [...]ರೋಡ್, ಮುಂಬ[...]

Sole Manufacturer Dr. D. N. JASAN[...] M. Vithalbhai Pate[...]d, Bombay[...]

(ಪತ್ರ[...] ಇಂಗ್ಲೀಷಿನಲ್ಲಿ.)



ಮಗೂ,

ಈ ಬಾರಿ ನಿಮಗೆ ಎರಡು ಕತೆಗಳನ್ನು ಕೊಟ್ಟಿದ್ದೇನೆ. ಅವೆರಡನ್ನೂ ತಮ್ಮಂದಿರೇ ಬರೆದರೆಂದು ತಿಳಿಸಲು ಅಣ್ಣನಿಗೆ ಬಹಳ ಆನಂದವಾಗುತ್ತದೆ. ಎಲ್ಲ ತಮ್ಮ ತಂಗಿಯರೂ ಇದೇ ರೀತಿ ಕತೆಗಳನ್ನೂ, ಹಾಡುಗಳನ್ನೂ ಬರೆದು ಕಳುಹಿಸಲು ಪ್ರಯತ್ನಿಸಬೇಕು. ತಪ್ಪಾಗಿದ್ದರೆ ಅಣ್ಣನು ತಿದ್ದಿ ಸರಿ[illegible]ಡಿಸುವನು. ಹಾಗೆಯೇ ಒಗಟುಗಳಿಗೂ [illegible]ಉತ್ತರ ಬರೆಯಬೇಕು. ಇದರೊಂದಿಗೆ ಇ[illegible]ರರೂ ಕೂಟವನ್ನು ಸೇರುವಂತೆ ಒತ್ತಾ[illegible]ಯ ಪಡಿಸಬೇಕು.

ಸದಾ ನಿಮ್ಮ ಆನಂದವನ್ನೇ [illegible]ಯುಸುವ
ನಿಮ್ಮ 'ಅ[illegible]



ಸಿಂಹದ ಮೇಲೆ ಸವಾರಿ.

ಹುಡುಗರು ಹೇಳಿದಂತೆ ಕೇಳುವುದು ಅಪರೂಪ. ಆದರೆ ಈ ಚಿತ್ರದಲ್ಲಿ, ಸಿಂಹಗಳು ಹೇಗೆ ಹೇಳಿದಂತೆ ಕೇಳುತ್ತಿವೆ ಎಂಬುದನ್ನು ನೋಡು! ಇವು ಸರ್ಕಸ್ಸಿನ ಸಿಂಹಗಳು. ಒಂದು ಬಂಡಿಯನ್ನು ಎಳೆಯುತ್ತಿವೆ. ಆ ಬಂಡಿಯಲ್ಲಿ ಸವಾರಿ ಮಾಡುತ್ತಿರುವವನೇ ಅವುಗಳನ್ನು ಪಳಗಿಸಿ ಸಾಧುವಾಗಿ ಮಾಡಿದವನು. ಈ ಸಿಂಹಗಳು ಅವನು ಹೇಳಿದಂತೆ ಕೇಳಿ ಆತನಿಗೆ ವಿಧೇಯವಾಗಿ ಇರುತ್ತವೆ.

ಕುರುಡ ಸಿದ್ಧ.

ಅದೊಂದು ಚಿಕ್ಕ ಹಳ್ಳಿ. ಅಲ್ಲಿರುವ ಬರೇ ನಾಲ್ಕಾರು ಮನೆಗಳಲ್ಲಿ, ಒಂದರಲ್ಲಿ ಪೆದ್ದಣ್ಣನ ಮಗ ಸಿದ್ದಣ್ಣನು ವಾಸವಾಗಿದ್ದನು. ಅವನು ಹುಟ್ಟು ಕುರುಡನಾಗಿದ್ದ ಕಾರಣ, ಕುರುಡ ಸಿದ್ದನೆಂದು ಎಲ್ಲರೂ ಕರೆಯುತಿದ್ದರು. ಅವನು ಭಿಕ್ಷೆ [illegible]ೀವಿಸುತಿದ್ದನು. ಸಿದ್ದನಿ[illegible] ಹೆಂ[illegible]ಕ್ಕಳು ಇರಲಿಲ್ಲ. [illegible] ದಿನಪಡೀ [illegible]ಹೊಟ್ಟೆಗೆ ಸಾಕಷ್ಟು ಸಿಕ್ಕದಿ[illegible] [illegible]ೀಸರ[illegible]

ದೇವರ ಧ್ಯಾನಕ್ಕೆ ಆರಂಭಿಸಿದನು. ಹತ್ತಿರದ ಕಾಡಿಗೆ ತೆರಳಿ ಅಲ್ಲೊಂದು ಬಂಡೆಯ ಮೇಲೆ ಕುಳಿತುಕೊಂಡು, ಒಂದೇ ಸವನೆ ದೇವರನ್ನು ಧ್ಯಾನಿಸಲು ಆರಂಭಿಸಿದನು.

ಹೊತ್ತು ಮಧ್ಯಾಹ್ನವಾಗುತ್ತಾ ಬಂತು. ಸಿದ್ದನು ಕುಳಿತ ಬಂಡೆಗೆ ಬಿಸಿಲು ಜೋರು ಜೋರಾಗಿ ಬೀಳಹತ್ತಿತು. ಕುಳಿತುಕೊಳ್ಳಲೂ ಸಾಧ್ಯವಿಲ್ಲದಷ್ಟು, ಬಂಡೆಯು ಬಿಸಿಯಾಡೊಡನೆ, ಸಿದ್ದನು ಎದ್ದು ನಿಂತನು. ಆದರೂ ದೇವರನ್ನು ಒಂದೇ ಮನಸ್ಸಿನಿಂದ ಭಜಿಸುತಿದ್ದನು. ಕಾಲು ಬಿಸಿಯೇರಲು, ಒಂದು ಕಾಲಿನಿಂದ ನಿಲ್ಲುತ್ತಲೂ, ಒಂದು ಕಾಲು ಬಿಸಿಯಾಗಲು ಅದನ್ನೆತ್ತಿ ಇನ್ನೊಂದು ಕಾಲನ್ನೂರುತ್ತಲೂ, ನೆತ್ತಿಗೆ ಸೂರ್ಯನ ಬಿಸಿಲು ಬೇಕಷ್ಟು ಹೊಡೆಯುತ್ತಿರಲು ಸಿದ್ದನು ಭಕ್ತಿಯಿಂದ ದೇವರನ್ನು ಪ್ರಾರ್ಥಿಸುತ್ತಾ ಇರುತ್ತಿದ್ದನು.

ಅವನ ಈ ತೆರನ ದೃಢಭಕ್ತಿಯನ್ನು ಕಂಡು, ದೇವರಿಗೂ ಸಂತೋಷವಾಯಿತು. ಆತನು 'ಸಿದ್ದಾ—ನಿನ್ನಂತಹರನ್ನು ಕಷ್ಟ ಪಡಿಸಲು ನನಗೆ ಇಚ್ಛೆಯಿಲ್ಲ. ಆದುದರಿಂದ ನಿನಗೆ ಬೇಕಾದ ಒಂದೇ ಒಂದು ವರವನ್ನು ಕೇಳು' ಎಂದನು.

ಸಿದ್ದನು, ಅದಾವ ವರವನ್ನು ಕೇಳಲಿ—ಎಂದು ಮನಸ್ಸಿನಲ್ಲೇ ಯೋಚಿಸಿದನು. ಐಶ್ವರ್ಯ ಕೇಳಿದರೆ, ಸುಖ ಪಡೆಯಲು ಹೆಂಡತಿ ಮಕ್ಕಳೂ, ಕಣ್ಣೂ ಇಲ್ಲ. ಹೆಂಡಿರು ಮಕ್ಕಳನ್ನು ಕೇಳಿದರೆ, ಐಶ್ವರ್ಯವಿಲ್ಲ. ಅದೇ ಕಣ್ಣುಗಳನ್ನು ಕೇಳಿದರೆ ಭಿಕ್ಷೆ ಬೇಡುವುದು ತಪ್ಪುವುದಿಲ್ಲ. ಇದರಿಂದ ಆತನು ಹೀಗೆಂದು ಉತ್ತರವಿತ್ತನು 'ಸ್ವಾಮಿಯೇ, ನನ್ನ ಮೊಮ್ಮಗನು ಮದುಮಗನಾಗಿ, ಚಿನ್ನದ ಪಾಲಕಿಯಲ್ಲಿ ಕುಳಿತು, ಮೆರವಣಿಗೆ ಹೋಗುತ್ತಿರುವದನ್ನು ನೋಡುವ ಭಾಗ್ಯವೊದಗಿಸಿ ಕೊಡು'.

ಹೆಂಡತಿ, ಮಗ, ಐಶ್ವರ್ಯ, ಕಣ್ಣು, ಆಯುಷ್ಯ—ಎಲ್ಲವನ್ನು ಒಂದೇ ವರದ ಮೂಲಕ ಕೇಳಿದ ಇ[illegible] [illegible]ತಾಣ್ಮೆಯನ್ನು ಕಂಡು, ದೇವರ[illegible] [illegible]ೊಂಡು ವರವನ್ನಿತ್ತು ಮಾ[illegible]

[illegible]ಷ್ಣ ಶೆಣೈ.

ನೀವು ಅಭಿವೃದ್ಧಿಗೆ ಪಾತ್ರರಿರುವಿರಾ?

ನಿಮ್ಮನ್ನೇ ನೋಡಿ: ನೀವು ಶಕ್ತಿವಿಹೀನರಾಗಿರುವಿರಿ. . . .ನೀವು ಮುಗುಳ್ನಗೆ ನಗುವುದು ಅಪರೂಪ. . . . ಯಾವಾಗಲೂ ನಿದ್ರಾಸಕ್ತಿ: ನಿಮ್ಮ ಹೊಟ್ಟೆಯೂ ರಕ್ತವೂ ವಿಷಪೂರಿತ ರಸಗಳನ್ನುಳ್ಳವಾಗಿವೆಯೆಂಬ ಚಿಹ್ನೆಗಳು. ಇನೋಸ್ "ಫ್ರುಟ್ ಸಾಲ್ಟ್" ಮಾತ್ರ ಈ ವಿಷಪೂರಿತ ರಸಗಳನ್ನು ಸೌಮ್ಯವಾಗಿಯೂ ಸಮರ್ಥವಾಗಿಯೂ ನಿವಾರಿಸುವುದು. ಸಾವಿರಾರು ಗಂಡಸರು, ಹೆಂಗಸರು ಮತ್ತು ಮಕ್ಕಳು ತಮ್ಮ ವೈದ್ಯರ ಸಲಹೆಯನ್ನು ತೆಗೆದುಕೊಂಡು ಅನುನಿತ್ಯವೂ ಇನೋಸ್ "ಫ್ರುಟ್ ಸಾಲ್ಟ್" ENO'S "FRUIT SALT" ಕುಡಿಯುತ್ತಾರೆ. ಅವರು ಆರೋಗ್ಯಶಾಲಿಗಳಾಗಿಯೂ ಸುಖಿಗಳಾಗಿಯೂ ಇದ್ದಾರೆ. ಆರೋಗ್ಯಕ್ಕಾಗಿ ಇಂದೇ ಇನೋಸ್ ತೆಗೆದುಕೊಳ್ಳಲು ಆರಂಭಿಸಿರಿ.

ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ವೈದ್ಯರುಗಳಿಂದ ಹೊಗಳಿಸಿಕೊಂಡಿದ್ದ ಇನೋಸ್ "ಫ್ರುಟ್ ಸಾಲ್ಟ್" ENO'S "FRUIT SALT" ಪಕ್ವವಾದ ಹಸಿ ಹಣ್ಣುಗಳ ಅನೇಕ ಪ್ರಯೋಜನಕಾರಿ ಗುಣಗಳನ್ನುಳ್ಳ ಪದಾರ್ಥವಾಗಿದೆ.

ಆರೋಗ್ಯವನ್ನು ಕೊಡುವ ಈ ಪಾನೀಯವನ್ನು ಎಲ್ಲರೂ ಪಡೆಕೊಳ್ಳಲು ಅನುಕೂಲವಿದೆ. ಪ್ರತಿಯೊಂದು ಬಾರಿಯು ಸೇವನೆಗೂ ತಗಲುವ ವೆಚ್ಚವು ಅತ್ಯಲ್ಪ. ಎಲ್ಲೆಲ್ಲಿಯೂ ಮೂರು ವಿಧಗಳಲ್ಲಿ ಬಿಕರಿ ಮಾಡಲ್ಪಡುತ್ತವೆ.

"ನಕಲಿಗಳನ್ನು ನಿರಾಕರಿಸಿರಿ. ತಾಜಾ ಫ್ರುಟ್ ಸಾಲ್ಟ್ ಬಾಟ್ಲಿಗಳಲ್ಲಿ ಮಾತ್ರ ಬಿಕರಿ ಮಾಡಲ್ಪಡುತ್ತದೆ. ಇದಿನ್ನೂ ಸಮಾಧಾನಕರವಾದ ಪ್ಯಾಕಿಂಗ್ ವಿಧಾನವೆಂದು ನಮ್ಮ ಎಪ್ಪತ್ತು ವರ್ಷಗಳ ಅನುಭವವು ಖಚಿತಪಡಿಸುತ್ತದೆ."

EVK. 4.

ನಾಗಮಂಡಲ

ಅದಾವುದೋ ಒಂದು ಊರು. ಅಲ್ಲಿ ಒಬ್ಬರು 'ಮುನ್ಸೀಪ'ರಿದ್ದರು. ಅವರ ಹೆಸರಾವುದೋ ನಾನರಿಯೆನು. ಆ ಊರಿನಲ್ಲಿ ಅವರಿಗೆ ತುಂಬಾ ಸನ್ಮಾನ ದೊರೆಯುತ್ತಿತ್ತು. ಒಮ್ಮೆ ಅವರಿಗೆ ಒಂದು ನಾಗಮಂಡಲಕ್ಕೆ ಆಮಂತ್ರಣ ಬಂದಿತ್ತು. ಅವರಿಗೊಬ್ಬ ಪೇದೆ ಇದ್ದನು. ಅವನ ಹೆಸರು ಘೋರಿ ಎಂದು. ಮುನ್ಸೀಪರು ತಮ್ಮಲ್ಲಿದ್ದ ಬೆತ್ತದ ಕಟ್ಟನ್ನು ಬಿಚ್ಚಿ ಒಂದು ಚಲೋದಾದ ಸಪೂರವಾದ ಬೆತ್ತವನ್ನು ತೆಗೆದು, ತನ್ನ ಪೇದೆಗೆ ಕೊಟ್ಟು, ನಾಗಮಂಡಲಕ್ಕೆ ಹೊರಟರು. ಮುನ್ಸೀಪರಲ್ಲವೇ? ಅವರಿಗಾಗಿ ಅಲ್ಲಿ ಕುರ್ಚಿಯ ಏರ್ಪಾಡು ಮೊದಲೇ ಇತ್ತು. ಅವರು ಸಿಗರೇಟು ಸೇದುತ್ತಾ ತಮ್ಮ ನಾಯಿಯನ್ನು ಕಾಲ ಬುಡದಲ್ಲಿ ಕುಳ್ಳಿರಿಸಿ ಕುರ್ಚಿಯಲ್ಲಿ ಕೂತರು. ದರ್ಶನಕ್ಕೆ ಪ್ರಾರಂಭವಾಯಿತು. ದರ್ಶನವು ಮಿತಿಮೀರಿತು. ಮುನ್ಸೀಪರಿಗೆ ಸಿಟ್ಟೇರಿತು. ಅವರು ಪೇದೆಯನ್ನು ಕರೆದು 'ಘೋರಿ ನಿನ್ನ ಮುಂಗಸಿ ದರ್ಶನವಾಗಲಿ' ಎಂದು ಅಪ್ಪಣೆ ಕೊಟ್ಟರು. ಅಪ್ಪಣೆ ಕೊಟ್ಟುದೇ ತಡ 'ಹೋ ಹ್ಹೋ ಹ್ಹೋ' ಎಂದು ಸಪುರವಾದ ಬೆತ್ತವನ್ನು ಕೈಯಲ್ಲಿ ಹಿಡಿದುಕೊಂಡು ರಪ್, ರಪ್, ಎಂದು ನಾಗ ದರ್ಶನ ಮಾಡುವವನ ಬೆನ್ನ ಮೇಲೆ ನಾಲ್ಕಾರು ಪೆಟ್ಟು ಕಾಯಿಸಿದನು. ಪೆಟ್ಟು ಬಿದ್ದುದೇ ತಡ ನಾಗವೂ ಇಲ್ಲ! ದರ್ಶನವೂ ಇಲ್ಲ! ಯಾವುದೂ ಇಲ್ಲ! ಪಾಪ! ದರ್ಶನದವರು ಪಲಾಯನ ಮಾಡಿದರು. ಮುನ್ಸೀಪರು ಮನೆಗೆ ಹೊರಟರು. ನಾಗಮಂಡಲದ ಗೊಂದಲವೇ ಗೊಂದಲ.

ತಮ್ಮ-ರಮೇಶ ಪೈ.

ಒಗಟುಗಳು

೧. ಎಂಟು ಗೀಟಿಗೆ ಮೀರದ ಒಂದು ಚಿಕ್ಕ ಪದ್ಯ ಬರೆದು ಕಳುಹಿಸು. ನೀನೇ ಬರೆದುದಾಗಬೇಕು. ಬೇರೆ ಪುಸ್ತಕಗಳಿಂದ ತೆಗೆಯುವುದಾಗಲೀ ಇತರರನ್ನು ಕೇಳಿ ಬರೆಯುವುದಾಗಲೀ ಕೂಡದು.

ಉತ್ತರವನ[illegible] ೧೫—೧೧—೩೮ರೊಳಗೆ 'ಅಣ್ಣ'ನಿಗೆ ಕಳುಹಿ[illegible]ಬೇಕು.

ಹನ್ನೆರಡು ವರುಷ ಪ್ರಾಯದೊಳಗಣ ಮಕ್ಕಳು ನಾಲ್ಕಾಣೆಯನ್ನೂ, ೧೨ರಿಂದ ೧೬ ವರುಷಗಳ ವರೆಗಿನವರು ಎಂಟಾಣೆಯನ್ನೂ, ಹದಿನಾರರಿಂದ ೨೧ರ ವರೆಗಿನವರು ರೂ. [illegible]ನ್ನೂ ಕೊಟ್ಟು, ಸದಸ್ಯರು, ಸ್ನೇಹಿತರು [illegible]ಗೂ ಜೊತೆಗಾರರಾಗಿ ಸೇರಬಹುದು.

ಸದಸ್ಯರು, ಸ್ನೇಹಿತರು ಹಾಗೂ ಜೊತೆಗಾರರಾಗಲಿಚ್ಛಿಸುವವರು ಈ ಪುಟದಲ್ಲೇ ಕಾಣುವ ಗುರುತು ಚೀಟಿ ಭರ್ತಿ ಮಾಡಿ ಕಳುಹಿಸಬೇಕು. ಒಮ್ಮೆ ಕೊಟ್ಟ ವಂತಿಗೆ ಆಯಾಯಾ ಪ್ರಾಯ ದಾಟುವ ತನಕವೂ ಬರುತ್ತದೆ. ಅದರಿಂದ ವರುಷ, ವರುಷ ವಂತಿಗೆ ಕೊಡುವ ಕಷ್ಟವಿಲ್ಲ. ಸದಸ್ಯರು ಕೂಟವನ್ನು ಸೇರಿದೊಡನೆಯೇ ಅವರಿಗೊಂದು ನಂಬರನ್ನು ಕೊಡಲಾಗುವುದು. ಆ ನಂಬರನ್ನು ಅಣ್ಣನಿಗೆ ಪತ್ರ ಬರೆಯುವಾಗಲೂ, ಒಗಟಿಗೆ ಉತ್ತರ ಬರೆಯುವಾಗಲೂ ಅಗತ್ಯ ತೋರಿಸಬೇಕು.

ಸದಸ್ಯರು ನಂ. ೧ನೇ ಒಗಟನ್ನೂ, ಸ್ನೇಹಿತವರ್ಗದವರು ನಂ. ೨ನೇ ಒಗಟನ್ನೂ ಮಾತ್ರ ಬಿಡಿಸಿ ಕಳುಹಿಸಬೇಕು.

ಗುರುತು ಚೀಟಿ

ಅಣ್ಣಾ,

ನಾನು ಮಕ್ಕಳ ಕೂಟದ ಸದಸ್ಯನಾಗಲು ಇಚ್ಛಿಸುತ್ತೇನೆ. ವಂತಿಗೆ ಹಣ ....ಆಣೆಯ ಅಂಚೆಚೀಟು ಕಳುಹಿಸಿರುತ್ತೇನೆ.

ಹೆಸರು ....

ತಂದೆಯ ಹೆಸರು..............................

ವಿಳಾಸ..............................

ಹುಟ್ಟಿದ ತಾರೀಕು ....

....
ಸಹಿ

ಕಲಿಯುತ್ತಿರುವ ಶಾಲೆಯ [illegible] ....

...ಮಲೇರಿಯಾ ಮಿಕ್ಶ್ಚರ್

ಮಲೇರಿಯಾ, ಎಗ್ಯೂ ಮತ್ತಿತರ ಕಠಿಣ ಜ್ವರಗಳಿಗೆ
ಖಾತ್ರಿಯಾದ ಸಿದ್ಧೌಷಧ.

= ಕ್ರಯ ಆಣೆ 0—13—0 =

ಝಂಡೂ ಸಾಹಿತ್ಯಗಳು

ದಕ್ಷಿಣ ಕನ್ನಡದಲ್ಲಿನ ಎಲ್ಲಾ ಏಜೆಂಟರಲ್ಲೂ ಸಿಗುತ್ತವೆ.

(1) ಶಾ ಕಂಪೆನಿ, ಮಂಗಳೂರು. (2) ವಿ. ವಿ. ಶೆಣೈ, ಕಾರ್ಕಳ.
(3) ಪಿ. ಎ. ಪೈ ಬ್ರದರ್ಸ್, ಉಡುಪಿ. (4) ಕ್ಷೇಮಾಯತನ ಫಾರ್ಮಸಿ, ಕಾಸರಗೋಡು.

ZANDU Pharmacy

Agents wanted in other places
not already represented.

FOR TERMS & CATALOGUES APPLY.

Sole Agents:— **DAMODER & CO.,**
78 China Bazaar Road, G. T., MADRAS.

ಜನರಲ್ ಇನ್ಶ್ಯೂರೆನ್ಸ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್

ಮಂಗಳೂರು.
1933ರಲ್ಲಿ ಸ್ಥಾಪಿತವಾದದ್ದು.

ಪ್ರಕಟಣೆ

ಇದೇ, 1937ನೇ ಇಸ್ವಿ ಜುಲೈ ತಾ. 1ರಿಂದ, ನಮ್ಮ ಆಫೀಸಿನ ಕೆಲಸ ಮಾಡು... ಸಮಯವು ಈ ಕೆಳಗಿನಂತಿದೆ ಎಂದು ನಮ್ಮ ಪಾಲಿಸಿದಾರರೂ, ಏಜೆಂಟರೂ, ಇತರರಾ... ಸಮಸ್ತ ಜನಗಳೂ ತಿಳಿದಿರುವುದು:—

ವಾರದ ದಿನಗಳು: ಪ್ರಾತಃ 11 ಗಂಟೆಯಿಂದ ಸಂಜೆ 4ರ ವರೆಗೆ.
ಶನಿವಾರಗಳಲ್ಲಿ: ಪ್ರಾತಃ 11 ಗಂಟೆಯಿಂದ ಅಪರಾಹ್ನ 2ರ ವರೆಗೆ.

ಜೀವ ಶಾಖೆ ಮತ್ತೂ ವಿವಾಹ ಶಾಖೆಗಳ "ಮೆಚ್ಯೂರಿಟಿ" ಅವಧಿಕಾಲವಾದ ... ಮತ್ತೂ 18 ತಿಂಗಳುಗಳು, ಇದೇ 1937ನೇ ಇಸ್ವಿ ಜುಲೈ ತಾ. 1ರಿಂದ, ಅನುಕ್ರಮವಾ... 12 ಮತ್ತೂ 24 ತಿಂಗಳುಗಳಿಗೆ ಹೆಚ್ಚಿಸಲ್ಪಟ್ಟಿದೆ.

ಮಂಗಳೂರು, ಪಿ. ಕೆ. ಮೆನೊನ್,
ತಾರೀಕು 1ನೇ ಜೂನ್ 1937. ಸೆಕ್ರಟರಿ.

ದಿ ರಿಲಾಯನ್ಸ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೆಡ್ ಆಫೀಸು:—ಬೆಂಗಳೂರು ಸಿಟಿ. ಬ್ರಾಂಚ್ ಆಫೀಸು:—ಬೊಂಬಾಯಿ.

1917ನೇ ಇಸ್ವಿಯ ಮೈಸೂರು ಕಂ...ಳ ರೆಗ್ಯುಲೇಶನ್ 8ರ ಮೇರೆಗೆ ಇನ್ಕಾರ್ಪರೇಟ್ ಆಗಿ, 1912ನೇ ಇಸ್ವಿಯ ಇಂಡಿಯನ್ ಲಾ... ಎಶ್ಯೂರೆನ್ಸ್ ಕಂಪೆನಿಗಳ ಆಕ್ಟ್ VIರಿಂದ ವ್ಯವಹರಿಸಲ್ಪಡುತ್ತದೆ.

3,64,000 ರೂಪಾಯಿಗಳಿಗೆ ಮೇಲ್ಪಟ್ಟು ಕ್ಲೈಮ್‌ಗಳ ಪಾವತಿಯಾಗಿದೆ.
ನಿಧಿಗಳು 1,88,000 ರೂಪಾಯಿಗಳಿಗೆ ಮಿಕ್ಕಿವೆ.
ಪ್ರಥಮ ಮೌಲ್ಯವೇತನದ ಫಲಿತಾಂಶ=ಉಳಿತಾಯ.

ವಿಶೇಷ ಗುಣಲಕ್ಷಣಗಳು

1. ಪರ್ಮನೆಂಟ್ ಪ್ರೊಟೆಕ್ಶನ್ ಪಾಲಿಸಿಯಲ್ಲಿ ವಿಮೆ ಇಳಿಸಿದ ರೂ. 1000/-ಕ್ಕೆ ವರ್ಷಕ್ಕೆ ರೂ. 15/-ರ ಬೋನಸಿನ ಗ್ಯಾರಂಟಿ. 2. ವಿಸ್ತೃತವಾದ ವಿಮೆ. 3. ಶಾಶ್ವತವಾದ ಅಂಗದೌರ್ಬಲ್ಯದ ಪ್ರಯೋಜನ. 4. ಇಮ್ಮಡಿಯ ಇಂಡೆಮ್ನಿಟಿ ಪ್ರಯೋಜನ. 5. ವಿಶೇಷ ರೀತಿಯ ಪುನರುಜ್ಜೀವನದ ಪದ್ಧತಿ. 6. ಮಕ್ಕಳಿಗೆ ಮುಂದಿನ ರಕ್ಷಣೆಯ ಪಾಲಿಸಿ.

ಗ್ಯಾರಂಟಿ ಕೊಡುವ ವ್ಯವಹಾರಗಳೊಂದಿಗೆ ಪ್ರಾತಿನಿಧ್ಯವಿಲ್ಲದ ಕ್ಷೇತ್ರಗಳಲ್ಲಿ ಚೀಫ್ ಏಜಂಟರುಗಳೂ, ಆರ್ಗನೈಜರುಗಳೂ ಸಂಬಳ ಮತ್ತು ಕಮಿಶನ್‌ಗಳೆರಡರ ಮೇಲೂ ಬೇಕಾಗಿದ್ದಾರೆ.

1938ನೇ ಸಪ್ಟಂಬರ ತಿಂಗಳಲ್ಲಿ 12 ಮರಣಗಳು ರಿಪೋರ್ಟಾಗಿರುವದರಿಂದ ಮ್ಯೂಚುಯಲ್ ಬೆನೆಫಿಟ್ ಸ್ಕೀಮಿನ ಎಲ್ಲಾ ಮೆಂಬರುಗಳೂ ಎಂದಿನಂತೆ ಒಂದು ತಿಂಗಳೊಳಗಾಗಿ ತಮ್ಮ ಚಂದಾ ಹಣವನ್ನು ಕಳುಹಿಸಬೇಕಾಗಿ ಅರಿಕೆ.

ತಿರುಪತಿ ಎಂಡ್ ಕೊ.,
ಮ್ಯಾನೇಜಿಂಗ್ ಏಜಂಟರುಗಳು.

ಪರೀಕ್ಷಿಸಿ! ರುಚಿ ನೋಡಿ!! ಸಂತೋಷಪಡಿ!!

ದಕ್ಷಿಣ ಹಿಂದೂಸ್ಥಾನದ ಬ್ರಾಹ್ಮಣರಿಂದ ತಯಾರಿಸಲ್ಪಟ್ಟಿರುವ
ಅತ್ಯಂತ ರುಚಿಕರವೂ ಹಿತಕರವೂ ಆದ ತಿಂಡಿ ಪದಾರ್ಥಗಳು ಇದೀಗ ಬಂದಿವೆ.

ಮಾವಿನ ಉಪ್ಪಿನಕಾಯಿ (ಬಿಸಿ)			ಸಿರಪ್ಪಿನಲ್ಲಿ ಹ...ಟ್ಟ ಶುಂಠಿ		
	ಬಾಟ್ಲಿಯೊಂದರ	0-13-0		ಬಾಟ್ಲಿಯೊಂದರ	0-13-...
ಡಿ ತೈಲದಲ್ಲಿ	,,	0-12-0	ಅನನಾಸ್ ಮಾ...ೇಡ್	,,	...-12-...
ಉಪ್ಪಿನಲ್ಲಿ ಹಾಕಿದ ಮಾವಿನಕಾಯಿ	,,	0-13-0	ಬನಾನಾ ಚಾಪ್...	,,	0-...2-...
ವ್ಯಾಲ್ಡ್ ಸಾರ್ಸಪರಿಲ್ಲಾ	,,	0-13-0	ಹಲಸಿನಹಣ್ಣಿನ ಜ...	,,	0-12-...
ಕರಿಮೆಣಸು	,,	0-13-0	ಬಾರ್ಲಿ ಪೌಡರ್	,,	0- 2-...
ನೆಲ್ಲಿಕಾಯಿ ತೈಲದಲ್ಲಿ	,,	0-12-0	ಜಗಿಯುವ ಹೊಗೆಸೊಪ್ಪು ಡಜನೊಂದಕ್ಕೆ		0...

Manufactured by:—
THE NEW ERA MFG. CO., PALGHAT.
ಏಜೆಂಟರು:—ಶಾ ಕಂಪೆನಿ, ಮಂಗಳೂರು.

THE PIE-MONEY BANK, LTD.,
MAIDAN ROAD, MANGALORE.

Undertakes all kinds of Banking Business.
Current account at $2\frac{1}{2}\%$ per annum.
Savings Bank Deposits at $4\frac{1}{2}\%$ per annum.

FIXED DEPOSITS.

For 2 years	5%	For 6 months	4%
1 year	$4\frac{1}{2}\%$	3 months	$3\frac{1}{2}\%$

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:— **K. R. GURU,** *Managing Director.*

Quite Sir, O. K.

As much as you are sure to disarm any traffic controller, by promptly producing your licence if so demanded while driving your car out, think twice and make sure that you carry **our cheque book** on your person, whenever you go out shopping or otherwise when **Quite Sir, O. K.** shall greet you from all sides.

JAWAHAR BANK,
(Regd.)
MANGALORE.

(ರಿಜಿಸ್ಟರ್ಡ್) **ಬಾಲಾರ್ಕಮಧು** ಲಕ್ಷಗಟ್ಲೆ ಮಕ್ಕ... ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ, ಅಸ್ಥಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ 0—12—0. ಟ. ಖ. 0—9—0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ-
ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ, (ಮೈಸೂರು ಸೀಮೆ).

ಯೋಗ್ಯ ದರದಲ್ಲಿ ಉತ್ತಮ
ದೇವಪೂಜಾ ಸಾಮಗ್ರಿ
ಅಪೇಕ್ಷಿಸುವವರು ಇಂದೇ ನಮ್ಮ ಶಾಖೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪ ಕರಣಗಳು ... ದ ಸೈಜಿನಲ್ಲಿ ಖಾತ್ರಿಯ... ಸಿಕ್ಕುವಿರು ವುವು. ...ಪಿಯಲ್ಲಿ ತಯ... ಮಾಸು ಗಳ... ದ ತ... ಗ... ಜ... ನ...

...ನ್ಯಾಸಾಚಾರ್ಯ. Ka...
... ವ್ಯಾಪಾ...
ಉಡು...

ಕಂಠೀರವ

ವಾರಕ್ಕೆರಡಾವರ್ತಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಪ್ರಕಟವಾಗುವ ಶ್ರೇಷ್ಠ ವರ್ಗದ ಕನ್ನಡ ವಾರ್ತಾ ಪತ್ರಿಕೆ.

ಚಂದಾ ವಿವರ:—

೧ ವರ್ಷಕ್ಕೆ	....	ರೂ. ೨—೮—೦.
೬ ತಿಂಗಳಿಗೆ	....	ರೂ. ೧—೪—೦.

ಅಂಚೆ ವೆಚ್ಚದೊಡನೆ:—

೧ ವರ್ಷಕ್ಕೆ	....	ರೂ. ೪—೨—೦.
೬ ತಿಂಗಳಿಗೆ	....	ರೂ. ೨...

ಮಾದರಿ ಸಂಚಿಕೆಯು ಅಪೇಕ್ಷಕರಿಗೆ ಉಚಿ... ಕಳುಹಲ್ಪಡುವದು.

Circulation M...
KA...

THE RADHA BANK, LTD.
MANGALORE. (*Branch*)
'TEMPLE VIEW' GANAPATHI TEMPLE ST., WEST.

ದಿ ರಾಧಾ ಬೇಂಕ್, ಲಿಮಿಟೆಡ್
ಮಂಗಳೂರು. (ಬ್ರಾಂಚ್)
'ಟೆಂಪಲ್ ವ್ಯೂ' ಗಣಪತಿ ಟೆಂಪಲ್ ರಸ್ತೆ.

ಚಾಲ್ತಿ ಠೇವಣಾತಿಗಳು ಸಾ। ಶೇ। $2\frac{1}{2}$.
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು ಸಾ। ಶೇ। 4.

ಕಾಯಂ ಠೇವಣಾತಿಗಳು.

3 ತಿಂಗಳ ಬಾಬ್ತು ಸಾ। ಶೇ। 3. 6 ತಿಂಗಳ ಬಾಬ್ತು ಸಾ। ಶೇ। 4. 12 ತಿಂಗಳ ಬಾಬ್ತು ಯಾ ಅದರ ಮೇಲೆ ಸಾ। ಶೇ। 5
ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುತ್ತ... ...ಗಳ ... ವೆ...

ಹೆಂಗಸರಿಗಾಗಿ

ಆಸ್ಟ್ರಿಯದ ಹೆಂಗಸರೂ, ಮಕ್ಕಳೂ

ಜರ್ಮನಿಯು ಅನಿರೀಕ್ಷಿತವಾಗಿ ಆಸ್ಟ್ರಿಯಾವನ್ನು ನುಂಗಿತು. ಜಗತ್ತು ಕಣ್ದೆರೆದು ನೋಡುತ್ತಿದ್ದಂತೆಯೇ, ಅದನ್ನು ತನ್ನದಾಗಿ ಮಾಡಿಕೊಂಡಿತು. ಅದರಿಂದ, ಇಂದು ಆಸ್ಟ್ರಿಯದಲ್ಲಿ ವಿಶೇಷವಾದ ಬದಲಾವಣೆಗಳಾಗಿವೆ. ಸರಕಾರವೊಂದು ಬೇಕಾಗಿದ್ದರೆ ಕೆಡುಕಿರಲಿಲ್ಲ. ಬದಲು ಸರಕಾರದ ಮತವೂ ಬೇರೆಯಾಗಿದೆ.

ಇಂದು ಆಸ್ಟ್ರಿಯದ ಸ್ತ್ರೀಯರು, ಸದಾ ಭಯಪಡುತ್ತಾ ಜೀವಿಸುವಂತಾಗಿದೆ. ತಮ್ಮ ಮನಬಂದಂತೆ ನಡೆವ ಅಧಿಕಾರ ಅವರಿಗಿಲ್ಲ. ಹಾಗೆಂದು ಅದನ್ನಿದಿರಿಸಿದರೆ, ಸರ್ವಾಧಿಕಾರಿಯ ಕರಾಳ ಶಾಸನಕ್ಕೆ ಬಲಿ ಬೀಳಬೇಕಾಗುತ್ತಿದೆ. ದಿನ ದಿನ ಹೊಸ ಭ[illegible]ಭೀತಿಗಳು, ಇವರ ಜೀವನ ಮಾರ್ಗದಲ್ಲಿ [illegible]ಹತ್ತಿದೆ. ಜೀನಸಿನ ಧಾರಣೆ ತಡೆಯಿಲ್ಲದೆ ಏ[illegible]ಹತ್ತಿದೆ. ಸವಲತ್ತುಗಳೂ, ಸ್ವಾತಂತ್ರ್ಯಗಳೂ ನಾಶವಾಗುತ್ತ ಬರುತ್ತಿವೆ. ಚಿಕ್ಕ ಚಿಕ್ಕ ಮಕ್ಕಳ[illegible]ಲ್ಲಿ ಸರಕಾರದವರಿಂದ—ಸೈನಿಕ ಶಿಕ್ಷಣಕ್ಕಾ[illegible] ಒಯ್ಯಲ್ಪಡುತ್ತಲಿವೆ. ತಾಯಿಗೆ ತನ್ನ ಮ[illegible]ನ ವಿದ್ಯಾಭ್ಯಾಸದ ಕ[illegible]ತಾಗಿ ಯೋಚಿ[illegible] ಅಧಿಕಾರವಿಲ್ಲದಾಗಿದೆ. ಹಿಂದಿನ ಮೊಂಟೆಸ್ಸೊರಿ ಪ್ರಾಥಮಿಕ ವಿದ್ಯಾನಿಲಯಗಳೂ ಕ್ರಮಗಳೂ, ಇಂದು ಬೆಲೆ[illegible]ವುಗಳಾಗಿ, ನಾಜಿ ರೀತಿಯ ಶಾಲೆಗಳು [illegible]ಂಭವಾಗಿವೆ. ಆಸ್ಟ್ರಿಯದ ವಿದ್ಯಾಭ್ಯಾಸದ ತಳಹದಿಯನ್ನು ಬಲಪಡಿಸಿದ ಮೇಡಂ ಮೊಂಟೆಸ್ಸೊರಿಯ ಪುಸ್ತಕಗಳೆಲ್ಲ ಮುಟ್ಟುಗೋಲಿಗೆ ಒಳಗಾಗಿವೆ.

'ಮಿಲಿಟರಿ' ದಾರಿಯಲ್ಲಿ ನಡೆಸಲ್ಪಡುತ್ತಿರುವ ಶಾಲೆಗಳಿಗೆ ೮ ವರ್ಷ ಪ್ರಾಯದ ಎಳೆ ಹುಡುಗರೂ ಸೇರಬೇಕಾಗಿದೆ. ರಾತ್ರಿಯಾಗುವ ತನಕವೂ, ಅವರಿಗೆ 'ಮಿಲಿಟರಿ' ತರಬೇತಿ ನಡೆಯುತ್ತಿರುತ್ತದೆ. ಗಂಡು ಹೆಣ್ಣುಗಳೆಂದಿಲ್ಲದೆ, ಎಲ್ಲಾ ಮಕ್ಕಳೂ 'ಮಿಲಿಟರಿ' ತರಬೇತಿ ಪಡೆಯಲೇ ಬೇಕಾಗಿದೆ. ಶಾಲೆ ಇರುವ ಸಮಯದಲ್ಲಿ ಮಾತ್ರವೇ ಅಲ್ಲದೆ, ರಜಾ ದಿನಗಳಲ್ಲೂ ಮಕ್ಕಳು, 'ಮಿಲಿಟರಿ' ತರಬೇತಿಗೆ ತಪ್ಪದೆ ಹೋಗಬೇಕು. ಈ ಎಳೆಯ ಕೂಸುಗಳಿಗೆ ಸೈನಿಕ ಶಿಕ್ಷಣವನ್ನಿತ್ತು, ಸರಕಾರವು ಅದೇನು ಮಾಡ[illegible]ರುವುದೋ ಎಂಬುದು ತಾಯಂದಿರಿಗೆ ಬಿಡಿಸ[illegible]ಲಾಗದ ಸಮಸ್ಯೆಯಾಗಿದೆ.

ಮಕ್ಕಳ ವಿಚಾರದಲ್ಲಿ ಹೀಗಾಯಿತೆಂದರೆ, ಮನೆಗಳ ವಿಚಾರದಲ್ಲಿ ಅದೇ ಪಾಡು. ಆಸ್ಟ್ರಿಯದ ಸುಖಸಂಸಾರಗಳೆಲ್ಲ ಇಂದು ಇಬ್ಭಾಗವಾಗಿವೆ. ಯೆಹೂದಿ ಹಾಗೂ ಆಸ್ಟ್ರಿಯನರೊಳಗೆ ವಿವಾಹಗಳು ಸರಾಗವಾಗಿ ನಡೆದು ಬರುತ್ತಿದ್ದುವು. ಆದರೆ ಈಗ ವಿವಾಹವಿಚ್ಛೇದನದ ಗೊಂದಲವುಂಟಾಗಿದೆ. ಸರಕಾರಕ್ಕೆ ಹೆದರಿ, ತಮ್ಮ ಜೀವನ—ಸ್ಥಾನಮಾನಗಳ ಆಶೆಯಿಂದ, ಯೆಹೂದಿಯರನ್ನು ಬಿಡುವ ಸಂದರ್ಭ ಬಂದಿದೆ. ಸ್ತ್ರೀಯರು ಯೆಹೂದಿ ಪತಿಯರನ್ನೂ, ಪುರುಷರು ಯೆಹೂದಿ ಪತ್ನಿಯರನ್ನೂ ಇಂದು ಬಿಡುವಂತಾಗಿದೆ. ವಿವಾಹವಿಚ್ಛೇದನದ ಅರ್ಜಿಗಳು ಸಹಸ್ರಾರು ದಾಖಲು ಮಾಡಲ್ಪಟ್ಟು ಪ್ರೇಮಪೂರಿತ ಸುಖಸಂಸಾರವನ್ನೆಲ್ಲ ನಾಜಿ ಸರಕಾರವು ಒಡೆದು ಹಾಕಿದೆ.

ಜರ್ಮನಿಯಲ್ಲಿ, ಸ್ತ್ರೀಯರು ಮನೆಯನ್ನು ಸೇರಿದ ಮೇಲೆ, ಅದೇ ಆಳ್ವಿಕೆಯಲ್ಲಿನ ಆಸ್ಟ್ರಿಯದ ಪಾಡೂ ಅದೇ ಆಗಬೇಕಷ್ಟೆ! ಸಾರ್ವಜನಿಕ ಜೀವನದಿಂದ, ಉದ್ಯೋಗಗಳಿಂದ, ಸ್ತ್ರೀಯರು ನಿವೃತ್ತಿಪಡಿಸಲ್ಪಡುತ್ತಾರೆ. ಸ್ತ್ರೀಯರಿಗೆ, ಇನ್ನು ಮುಂದೆ ಸಾರ್ವಜನಿಕ ಕೆಲಸಗಳಲ್ಲಿ, ಸಂಘ ಸಂಸ್ಥೆಗಳಲ್ಲಿ, 'ಮೇ' ದಿನಾಚರಣೆಯಲ್ಲಿ ಕೂಡ ಕೈಯಿಕ್ಕುವ ಅಧಿಕಾರವಿಲ್ಲ. ಕಾರ್ಖಾನೆಗಳ [illegible] ಸಭೆಗಳು ಇನ್ನು ಜರಗುವಂತಿಲ್ಲ. ಬದಲು [illegible]ವಾಲಾಗಿ ನಿಂತು ಅಪ್ಪ[illegible]ಯನ್ನು ಹೊಸ ಆಳ್ವಿಕೆಯ ವಿರೋಧ ಮನೋವೃತ್ತಿಯಿಂದ, ಅವರು ಬಾರಿ ಬಾರಿಗೂ ಈ ವಿವಿಧ ವಿಚಾರಗಳನ್ನು ವಿರೋಧಿಸುತ್ತಲೇ ಇದ್ದಾರೆ. ಅದರಿಂದ, ಶಾಂತಚಿತ್ತತೆಯಿಂದ, ಈ ಹೊಸ ಸರಕಾರದ ಹೊಸ ಹೊಸ ಆಜ್ಞೆಗಳನ್ನು ಅವರು ಒಪ್ಪುವಂತಿಲ್ಲ. ಅದಾವುದನ್ನು ಅವರು ಸಹಿಸಿದರೂ, ತಮ್ಮ ಮಕ್ಕಳ 'ಸೈನಿಕ ಶಿಕ್ಷಣ'ವನ್ನು ಪ್ರಬಲವಾಗಿ ವಿರೋಧಿಸದೆ ಇರುವಂತಿಲ್ಲ.

—೦೦೦—

ವಿರಹ

ಸ್ಟಟ್‌ಗಾರ್ಟಿನ ಹ್ಯೂಗೋ ಸ್ವಾರ್ಸ್ ಬೆರ್ಗರ್ ಎಂಬಾತನು, ಆತನ ಹೆಂಡತಿ ಆತನನ್ನು ಬಿಡು ಪರಾರಿಯಾದುದರಿಂದ, ಹುಚ್ಚನಂತಾಗಿ, ಸುತ್ತಿಗೆಯಿಂದ ಹೊಡೆದು ೮ರಿಂದ ೧೧ ವರ್ಷಗಳೊಳಗಣ ತನ್ನ ಆರು ಮಕ್ಕಳನ್ನು ಕೊಂದ. ಮನೆಯೊಳಗಿನ ಮೇಜು ಕುರ್ಚಿಗಳ ಮೇಲೆ 'ಪೆಟ್ರೋಲು' ಸುರಿಸಿ ಬೆಂಕಿ ಹತ್ತಿಸಿದ. ತನ್ನ ಅಂಗಡಿ ಹಾಗೂ ಪುಟ್ಟ ಕಾರಖಾನೆಯನ್ನು ಅಗ್ನಿಗೆ ಆಹುತಿ ಕೊಟ್ಟು, ತನ್ನ ಅಂಗಿಯನ್ನು ಪೆಟ್ರೋಲಿನಲ್ಲಿ ಅದ್ದಿ ಅದನ್ನು ಧರಿಸಿಕೊಂಡು, ಅದಕ್ಕೆ ಬೆಂಕಿ ಹತ್ತಿಸಿ ಓಡಾಡುತ್ತಾ ಗುಂಡಿಟ್ಟುಕೊಂಡು ಸತ್ತ. ವಿರಹದುರಿ ಸುತ್ತಲೂ ಹಬ್ಬಿತು.

—೦÷೦—

ಸಂಯುಕ್ತ ಪ್ರಾಂತ್ಯದ ಮುನ್ನಡೆ

ಸಂಯುಕ್ತ ಪ್ರಾಂತ್ಯದಲ್ಲಿ, ಕಡ್ಡಾಯ ಸ್ತ್ರೀ ವಿದ್ಯಾಭ್ಯಾಸವನ್ನು ಹರಡಲು, ಸರಕಾರವು ಯೋಚಿಸಿ, ಇದೀಗ ಕಾಶಿಯಲ್ಲಿನ ಥಿಯೋಸೋಫಿಕಲ್ ಶಾಲೆಯಲ್ಲಿ ಸ್ತ್ರೀ ಉಪಾಧ್ಯಾಯಿನಿಯರ ತರಬೇತಿ ಕೇಂದ್ರವೊಂದು ತೆರೆಯಲ್ಪಟ್ಟಿದೆ. ಎಂಟು ತಿಂಗಳು ಇದು ಕಾರ್ಯಕ್ರಮವನ್ನು ನಡೆಸುವುದು. ಅದಕ್ಕಾಗಿ ೧೧ ಸಾವಿರ ರೂಪಾಯಿಗಳು ಖರ್ಚು ಮಾಡಲ್ಪಡಲಿವೆ.

ಇದರಲ್ಲಿ, ಸ್ಟೈಪೆಂಡ್, ಉಪಾಧ್ಯಾಯಿನಿಯರನ್ನು, ತರಬೇತಿ ಕೇಂದ್ರಕ್ಕೆ ಕಳುಹಿಸಿದಾಗ ಖಾಲಿ ಆದ ಅವರ ಸ್ಥಾನಕ್ಕೆ ನೇಮಿಸಲಾದ ಉಪಾಧ್ಯಾಯಿನಿಯರ ಸಂಬಳ ಹಾಗೂ ಥಿಯಾಸಫಿಕಲ್ ಶಾಲೆಗೆ ತರಬೇತಿ ನಡೆಸಿದ ಬಗ್ಗೆ ವಿದ್ಯಾರ್ಥಿಯೊಬ್ಬಳಿಗೆ ಕೊಡುವ ರೂ. ೮ರ ಮೊತ್ತ, ಈಗಿರುವ ೩೨ ವಿದ್ಯಾರ್ಥಿನಿಯರ ಬಾಬ್ತು ಸಂಬಳ, ಶಾಲಾ ಬಾಡಿಗೆ, ಮುಂತಾದುವೆಲ್ಲಾ ಸೇರಿವೆ. ಹಳ್ಳಿಗಳ ಪುನರ್ಘಟನೆಗಾಗಿ ತೆಗೆದಿರಿಸಲಾದ ೧೦ ಲಕ್ಷದಿಂದ, ಈ ಹಣವನ್ನು ತೆಗೆಯುವರಂತೆ.

ಸಂಪೂರ್ಣ ಸಂಯುಕ್ತ ಪ್ರಾಂತದ ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ ಕೊಡಲು, ೫೦ ಸಾವಿರ ಸ್ತ್ರೀ ಉಪಾಧ್ಯಾಯಿನಿಯರು ಬೇಕಾಗಬಹುದು. ಆದರೆ, ಈಗ ತರಬೇತಿ ಹೊಂದಿದವರು, ಪುನಃ ಇತರರನ್ನು ತರಬೇತಿ ಮಾಡಲು ನಿಯೋಜಿಸಲ್ಪಡುವರು.

—೦೦೦—

ಅಳುವ ಮಕ್ಕಳು

'ಶಾಲೆಯಿಂದ ಮಕ್ಕಳು ಮನೆಗೆ ಬಂದೊಡನೆಯೇ ಹಟ ಮಾಡಿ, ಸಿಟ್ಟುಗೊಂಡು ಛಲ ಮಾಡುವದಿದೆ. ಆಗ ಅವುಗಳಿಗೆ ಬೈಯುವುದರ ಬದಲು ಸಿಹಿ ತಿಂಡಿಯನ್ನೀಯಬೇಕು. ಈ ಛಲಕ್ಕೆ ಕಾರಣವೆಂದರೆ, ಅವರ ದೇಹದಲ್ಲಿ ಸಕ್ಕರೆಯ ಅಂಶವು ಕಡಿಮೆಯಾಗಿರುವುದೇ. ಸಕ್ಕರೆಯ ಸತ್ವವು ಅವರು ಸದಾ ಹುರುಪಿನಿಂದಿರುವಂತೆ ಮಾಡುತ್ತದೆ.' ಎಂದು ಯಾಲೆ ವಿಶ್ವವಿದ್ಯಾನಿಲಯದ ವಿಜ್ಞಾನಿಗಳಾದ ಪ್ರೊಫೆಸರ್ ಹೊವಾರ್ಡ್ ಡಬ್ಲ್ಯು. ಹಗ್ಗಾರ್ಡ್‌ರವರು ಅಭಿಪ್ರಾಯವಿತ್ತಿದ್ದಾರೆ.

—೦÷೦—

ಪಾಶ್ಚಾತ್ಯ ಸ್ತ್ರೀಯರು

[illegible]

ವರ್ಷಾಂತರಗಳಿಂದ, ಹಿಂದೂಸ್ಥಾನದಲ್ಲಿನ ಮಿಲಿಯಾಂತರ ಮನೆಮಂದಿಗಳು **ಕಾಮಿನಿಯಾ ತೈಲ** ತನ್ನ ಪಾಲಕರ ಮೇಲೆ ಕರುಣಿಸುವ ಕೂದಲಿನ ಆರೋಗ್ಯದ ಮತ್ತು ಸೌಂದರ್ಯದ ಸಂಪತ್ತನ್ನು ಅನುಭವಿಸಿ ಅರಿತುಕೊಂಡಿರುವರು.

ವರ್ಷಾಂತರಗಳಿಂದ ಅದೇ ಸುಗಂಧಪೂರಿತ ಸುವಾಸನೆಯು ಮನೆಯನ್ನೆಲ್ಲಾ ತನ್ನ ಸಂತಸದಿಂದ ಆವರಿಸಿಕೊಂಡಿದ್ದು, ಸ್ತ್ರೀಯರ ಸೌಂದರ್ಯದ ರಹಸ್ಯವು ತಾಯಿಯಿಂದ ಮಗಳಿಗೂ ಪುನಃ ಆಕೆಯ ಮಗಳಿಗೂ ಕಾಮಿ[illegible]ಯೂ—ಎಲ್ಲೆಲ್ಲಿಯೂ ರೂಪವತಿಯರ ಪ್ರಿಯ[illegible]ದ ಸಾಧನದ ಹೆಸರಲ್ಲಿ ತಿಳುಹಲ್ಪಟ್ಟಿದೆ.

always insist on the

KAMINIA OIL

COOLS-NOURISHES & STIMULATES THE HAIR ROOTS

(ರಿಜಿಸ್ಟರ್ಡ್)

ಬಾಟ್ಲಿಯೊಂದರ ರೂ. 1. ವಿ. ಪಿ. ಪಿ. ಅಲ್ಲಾದಾ.
¾ ಆಣೆ ಅಂಚೆಚೀಟು ರವಾನಿಸಿದಲ್ಲಿ ಸ್ಯಾಂಪಲ್ ಉಚಿತ.
ಎಲ್ಲರಿಂದಲೂ ಸ್ಟಾಕಿನಲ್ಲಿಡಲ್ಪಡುತ್ತದೆ.

ಸೋಲ್ ಏಜೆಂಟ್:—
ಆಂಗ್ಲೋ-ಇಂಡಿಯನ್ ಡ್ರಗ್ & ಕೆಮಿಕಲ್ ಕೊ., ಬೊಂಬಾಯಿ, 2.

ಆಟ-ವಿನೋದಗಳನ್ನು ಜರಗಿಸಿ, ಬಯಲು ಪ್ರದೇಶದಲ್ಲಿ ಹಾರಾಡಿ ಆನಂದ ಹೊಂದುತ್ತಿದ್ದಾರೆ. ಮೇಲಿನ ಚಿತ್ರದಲ್ಲಿ ಸ್ತ್ರೀಯರು, ಆವೆಗಳ ಪಂದ್ಯಾಟದಿಂದ ಆನಂದ ಹೊಂದುತ್ತಿರುವುದನ್ನು ಕಾಣಬಹುದು.

ಆದರೆ, ನಮ್ಮಲ್ಲಿ ಈ ಆಟ ವಿನೋದಗಳು ಸಾಧ್ಯವೇ? ಸಾಧ್ಯ. ಆದರೆ ನಮ್ಮ ಸ್ತ್ರೀಯರು, ಇನ್ನೂ ಹಿಂದೆಯೇ ಉಳಿದಿರುವುದಕ್ಕೆ ಕಾರಣ ಅವರಲ್ಲೇ ಇರುವ ಕುರುಡು ಭಾವನೆ. ಸಮಾಜದಲ್ಲಿ ಮುಂದೆ ಬಂದು ಬೆರೆತುಕೊಳ್ಳಲು ಅವರಿಗಿನ್ನೂ ಸಾಹಸ ಬಂದಿಲ್ಲ. ಗಂಡುಸರ ಕುರಿತಾಗಿ ಯೋಚಿಸುವ ಹಾಳು ಹವ್ಯಾಸವನ್ನುಳಿದು, ತಮ್ಮ ಮಾನ ಮರ್ಯಾದೆ

ಗರ್ಭ-ಧಾರಣೆ ತಡೆಯಲು

"ರಾಹತ್" ಎಂದೂ ನಿಷ್ಫಲವಾಗದ ಸಂತತಿ ಪ್ರತಿಬಂಧಕವಾಗಿದ್ದು, ಬರೇ ಮೂರು ದಿನಗಳ ಉಪಯೋಗವು, ಶರೀರ ಸೌಖ್ಯಕ್ಕೆ ಏನೊಂದೂ ಬಾಧೆಯಾಗದಂತೆಯೂ, ಮುಟ್ಟುತನದ ಕ್ರಮವು ತಪ್ಪದಂತೆಯೂ, ಹೆರಿಗೆಯ ಆಜೀವ ಕಷ್ಟವನ್ನು ನಿವಾರಿಸುವುದು. ಪ್ರತಿಯೊಂದು ಆರ್ಡರಿನೊಂದಿಗೆ ಗ್ಯಾರೆಂಟಿ ಪತ್ರವು ಕಳುಹಲಾಗುವುದು. ಬೆಲೆ ರೂ. 5—8.

ರಾಜವಟಿ:—ನಿಂತುಹೋದ ಮುಟ್ಟುತನವನ್ನು ಕ್ರಮವಾದ ರೀತಿಯಲ್ಲಿ ಪುನರಾರಂಭಿಸುವುದು. ಬೆಲೆ ರೂ. 5—8, ವಿದೇಶಕ್ಕೆ 10 ಶಿಲ್ಲಿಂಗ್.

ವಿವಿಧ-ವೃತ್ತ

...ಳ ಉಷ್ಣ ಅಳೆಯಲು—

...ಶದ ಡಾ॥ ಜಾನ್ ಸ್ಟ್ರೊಂಗ್‌ರವರು, ಒಂದು ಗುಂಡಿನಂತಹ ಉಷ್ಣಮಾಪಕ ಯಂತ್ರವನ್ನು ಕಂಡುಹಿಡಿದಿದ್ದಾರೆ. ಇದನ್ನು ಬೇಕಾದಂತೆ ಬೇಕಾದೆಡೆ ತಿರುಗಿಸಲು ಅನುಕೂಲವಾಗುವಂತೆ, ಇರಿಸಿದ್ದಾರೆ. ಇದನ್ನು ಗುಂಡಿನಂತೆ ತಕ್ಕ ಗ್ರಹಕ್ಕೆ ಮುಖ ಮಾಡಿ ಇರಿಸಿದೊಡನೆ, ಅದು ಆ ಗ್ರಹದ ಉಷ್ಣವನ್ನು ಅಳೆದು ತೋರುವುದು. ಈ ಯಂತ್ರದ ತಯಾರಿಯಲ್ಲಿ, ಚಿನ್ನದ ಅದುರು, ಕಲ್ಲುಪ್ಪಿನ ಅದುರು, ಗಾಜಿನ ತುಣುಕು, ಕೂದಲಷ್ಟು ಸಪೂರದ ಸರಿಗೆಗಳು ಮುಂತಾದ ವಿಶೇಷ ತೆರನ ವಸ್ತುಗಳು ಉಪಯೋಗಿಸಲ್ಪಟ್ಟಿವೆ. ಯಂತ್ರವು ಗ್ರಹಗಳ ಕುರಿತಾದ ಅನೇಕ ಗೂಢ ವಿಚಾರಗಳನ್ನು ತಿಳಿಯುವುದರಲ್ಲಿ ಸಹಕಾರಿಯಾಗಬಹುದಂತೆ.

—●—

ನಮ್ಮ ಮಂತ್ರಿಗಳು ಹೀಗಾದಾರೇ?

ಸ್ವೀಡನ್ ದೇಶದ ಪ್ರಧಾನರೆಂದರೆ, ಅವರು ಜಗತ್ತಿಗೆ ಆದರ್ಶರು. ಅದರಿಂದಲೇ ಇಂದು, ೧೯೧ಳರಲ್ಲಿ ಅವರಿಗೆ ದೊರೆತ ಗದ್ದುಗೆ ಇನ್ನೂ ಬದಲಾಗಲಿಲ್ಲ. ಇಲ್ಲಿ ನ್ಯಾಯಖಾತೆ, ಕಾನೂನು, ಸೈನ್ಯ ಮುಂತಾದುವುಗ...ವೂ, ನೇರಾಗಿ ಇಬ್ಬರು ಅಧಿಕಾರಿಗಳ ...ಲ್ಲಿರುವುದರಿಂದ, ವರುಷಗಟ್ಟಲೆ ...ಂದೋಲನವನ್ನು ಮಾಡಿದರೂ, ನಾವು ಪಡೆ...ದ ಫಲವನ್ನು, ಅಲ್ಲಿನ ಮಂದ್ರಿ ಕೆಲ ದಿನಗಳಲ್ಲೇ ಪಡೆಯಲು ಅನುಕೂಲವಾ...ದೆ. ಪ್ರಧ್ಯಾ...ರು, ಈ ಅಧಿಕಾರಿಗಳ ಮೇಲಿನವರು. ಪ್ರತಿ ದಿನ ಆಫೀಸಿಗೆ ಸಾಮಾನ್ಯ ಮನುಷ್ಯನಂತೆ, ಅದೇ ಉಡುಗೆಯಲ್ಲಿ, ಸಾರ್ವಜನಿಕ ಟ್ರಾಮ್‌ನಲ್ಲೇ ಹೋಗಿ, ಮನೆಗೆ ಹಿಂತಿರುಗುವರು. ಬಡವರ ಗೋಳನ್ನು ತಿಳಿದುಕೊಳ್ಳುವರು. ಅದೊಮ್ಮೆ, ಅವರು ಬಸ್ಸಿನ ಕಂಡಕ್ಟರನನ್ನು ಮನೆಗೆ ಕರೆಯಿಸಿ, ಅವನೊಡನೆ ಆಟವಾಡಿದ್ದರು. ಬಡವರಂತೆ ಜೀವಿಸಿ, ಬಡವರ ಗೋಳನ್ನು ತಿಳಿವ ಇವರಂತಾದರೂ, ನಮ್ಮ ಮಂತ್ರಿಗಳಾದರೆ ಸಾಕು!

—●—

ಕೆಲವು ಪ...ತ್ವಗಳಲ್ಲಿ

ಅಂದಲ್ಲಿ, ಕೈಕೆಳಗಿನ ...ಜೆಗಳನ್ನು ಬೆಕ್ಕು ಇಲಿಯನ್ನು ಆಡಿಸುವಂತ ಆಳುತ್ತಿರಬೇಕು ಎಂದು ಕೆಲವರ ವ್ಯಾಖ್ಯಾನ. ಅದರಂತೆ, ಲಂಡನಿನ ವಿಲ್ಲಿಯಂ ಹೇರ್ಸ್ ಎಂಬ ರೈಲು ಗಾಡಿ ಪರೀಕ್ಷಕ, ಆತನ ಹೆಂಡತಿ ಕೋನ್ಸ್ಟೆನ್ಸ್ ಅವರಿಬ್ಬರು, ಮನುಷ್ಯರಾರೂ ಸಿಗದಿದ್ದುದರಿಂದಲೋ ಎಂಬಂತೆ, ಒಂದು ಬೆಕ್ಕನ್ನು ತಂದು, ಮನೆಯಲ್ಲಿ ಕಟ್ಟಿ ಹಾಕಿದರು. ಅದೂ ೭ ವರ್ಷಗಳ ತನಕ. ಇದರಿಂದ, ಆ ಬೆಕ್ಕಿನ ಮೈ ಕೈ ಎಲುಬುಗಳು ಮುರಿದು ಹೋಗಿ, ಅದು ಅಪ್ರಯೋಜಕವಾಯಿತು. ಪೋಲೀಸರು ಪ್ರಾಣಿಯ ಚಿತ್ರಹಿಂಸೆಗಾಗಿ, ಇವರ ಮೇಲೆ ದಾವೆ ತಂದು, ಇಬ್ಬರಿಗೂ ೨ ಪವನುಗಳ ದಂಡವನ್ನೂ, ದಾವಾ ವೆಚ್ಚ ೨ ಪವನು ೨ ಶಿಲ್ಲಿಂಗುಗಳನ್ನೂ ವಿಧಿಸಿದರು. ಕೋರ್ಟಿನಲ್ಲಿ, ದಂಪತಿಗಳು ತಾವು ಪ್ರೀತಿಯಿಂದ ಬೆಕ್ಕನ್ನು ಸಲಹುತಿದ್ದೆವೆಂದರು. ಆದರೆ, ಪ್ರಜೆಗಳನ್ನು ಇದಕ್ಕಿಂತಲೂ 'ಪ್ರೀತಿಯಿಂದ' ಸಾಕುವವರಿಗೆ ಯಾರೂ ಏನೂ ಮಾಡಿಲ್ಲವೆಂಬುದೇ ಸ್ವಾರಸ್ಯ.

—●—

೪೦ ವರುಷಗಳಲ್ಲಿ ೬ ಚುಂಬನ!

ರಾತ್ರಿ, ಹೊತ್ತು ಮಾಡಿ ಬರುವ, ತನ್ನ ೩೫ ವರುಷದ ಮಗಳನ್ನು ಗದರಿಸಿದ ನಿಮಿತ್ತ, ಆಕೆ ತನ್ನ ತಂದೆಯ ಮೇಲೆ ದಾವೆ ತಂದಳು. ಆಕೆಯ ತಂದೆ ಜಾರ್ಜ್ ತಾಂಪ್ಸನ್‌ನು, ಮ್ಯಾಜಿ...ಡನೆ ತನ್ನ ಉದಾಹರಣೆ ಕೊಡುತ್ತಾ, ...ಳೆಕಾಲದವನು. ನನ್ನ ಮಗಳು, ...ವ್ಯಾಗತೆ ತೆಗೆದುಕೊಳ್ಳುವ...ಷ್ಟಾಗಿದ್ದರೂ, ಆಕೆಯ ಕುರಿತಾದ ಜಾಗ್ರತೆ ತೆಗೆದುಕೊಳ್ಳುವುದು ನನ್ನದೂ ಕರ್ತವ್ಯ. ಇದೀಗ, ನಾನು ವಿವಾಹವಾಗಿ ೪೦ ವರ್ಷವಾದರೂ, ನನ್ನ ಮುದಿಯನ್ನು, ನಾನು ಬರೀ ಆರು ಬಾರಿ ಚುಂಬಿಸಿರುವೆನಷ್ಟೆ!' ಎಂದನು. ದಾವೆಯಂತೂ ರಾಜಿಯಾಯಿತು. ಮ್ಯಾ...ಟರು, ಆಕೆ ಶನಿವಾರ ಮತ್ತು ಆದಿತ್ಯವಾರಗಳಲ್ಲಿ, ಮಧ್ಯರಾತ್ರಿಯೊಳಗೆ, ಇತರ ದಿನಗಳಲ್ಲಿ ಹತ್ತು ಗಂಟೆಯೊಳಗೆ ಮನೆ ಸೇರಬೇಕೆಂದು ತಿಳಿಸಿದರು.

—●—

ನಿದ್ದೆ ಬಂದಿತ್ತು

ನಿದ್ದೆ ಬಂದಾಗ ಎದ್ದು ನಡೆವ ಅಭ್ಯಾಸ ಹಲವರಿಗಿದೆ. ಇದೊಂದು ತೆರನ ರೋಗವೆಂದು 'ದಾಕ್ತರಿ' ವರ್ಗದವರು ಅಭಿಪ್ರಾಯಪಟ್ಟು, ಅದಕ್ಕೆ 'ಸೊಮ್ನಾಬುಲಿಸ್ಮ್' ಎಂದು ಹೆಸರಿಟ್ಟಿದ್ದಾರೆ. ಇಂತಹ ರೋಗದ ಅತ್ಯುತ್ಕೃಷ್ಟ ಆಧಾರವೊಂದು, ಇದೀಗ ತಿಳಿದುಬಂದಿದೆ. ಫೆರೋಸ್‌ಪುರದ ಪಂಡಿತ್ ರಾಮ್‌ರಖಾ ಎಂಬವನು,—ರಾತ್ರೆ (ಮನೆಯಲ್ಲೇ) ಮಲಗಿಕೊಂಡ. ಆದರೆ, ಮುಂಜಾನೆ ಎಚ್ಚತ್ತುದು ಮಾತ್ರ, ಮನೆಯಿಂದ ಹದಿನಾರು ಮೈಲಿಗಳ ದೂರದ ಕಸೂರು ರೈಲ್ವೆ ಸ್ಟೇಷನ್ನಿನಲ್ಲಿ. ಈ ಸ್ಟೇಶನಿಗೆ ಹೋಗುವ ದಾರಿಯಾದರೂ ಬಹಳ ಕಡಿದಾದುದು. ಆದರೇನು? ನಿದ್ದೆಯಲ್ಲಿಯೇ ಅದನ್ನೂ ನಡೆದುಬಿಟ್ಟ!

—●—

ಕುರಿಯ ಸಾಹಸ!

'ಕುರಿಯು ಸಾಧುವಾದ ಪ್ರಾಣಿ' ಎಂದು ಉಪಾಧ್ಯಾಯರು, ಮಕ್ಕಳು ಅದರ ಮೇಲೆ ದಂಗೆ ಏಳದಂತೆ, ಮೊದಲನೆಯ ದರ್ಜೆಯಲ್ಲೇ ಕಲಿಸುವುದಿದೆಯಲ್ಲ! 'ಆದರೆ, ಅದು ಸಾಹಸಿ' ಎಂದು ಈಗ ವ್ಯಕ್ತವಾಗಿದೆ. ಇಂಗ್ಲಾಂಡಿನಲ್ಲಿ, ನಾಯಿಯೊಂದು ಕರಿ ಕುರಿಯೊಂದನ್ನು ಬೆನ್ನಟ್ಟಿತು. ಕುರಿ ಹೆದರಿಕೊಂಡು, ನಾಲ್ಕು ಅಡಿ ಎತ್ತರದ ಗೇಟನ್ನು ಹಾರಿತು; ಒಂದು ಕಿಟಕಿಯ ಮೂಲಕ ಮನೆಯೊಳಗೆ ಹಾರಿತು; ಅಲ್ಲಿ ಊಟಕ್ಕೆ ಕುಳಿತಿದ್ದವರ ಊಟದ ಮೇಜಿನ ಮೇಲೆ ಹಾರಿ, ತಿಂಡಿತಿನಿಸುಗಳನ್ನು ಗಾಜಿನೊಡನೆ ಬೆರೆಯಿಸಿತು; ಎಲ್ಲರನ್ನೂ ಒಮ್ಮೆ ಕುಣಿಸಿ ಬಿಟ್ಟಿತು. ಇದು ಕುರಿಯ ಸಾಹಸ! ಅದು ಜೀವದಾಸೆಯಿಂದ ಎಂದು ನೀವಂದರೂ ಸರಿಯೆ!

—●—

ಸೆರೆಯ ಸುಖ

ಅನುಭವಿಸಲು ಸಿದ್ಧರಾದವರೂ, ಇದ್ದಾರೆಂದು ತಿಳಿದಿದೆ. ಅದರಲ್ಲೂ ಹಣ ಸಿಗುವುದಾದರೆ ಎಷ್ಟು ಮಂದಿ ಸಿದ್ಧರಾಗರು? ಪೋಲೆಂಡಿನ ಸ್ತ್ರೀಯೊಬ್ಬಳು, ೩ ದಿನಕ್ಕೆ, ೧೦ ಶಿಲ್ಲಿಂಗುಗಳಂತೆ ತೆಗೆದುಕೊಂಡು, ಅನೇಕ ಸ್ತ್ರೀ ದರೋಡೆಕೋರರ ಬದಲು, ತಾನು ಸೆರೆಮನೆ ಸೇರಿ, ಸೆರೆ ಅನುಭವಿಸಿ ಹಿಂತಿರುಗುತಿದ್ದಳು. ಆದರೆ, ಈ ರೀತಿ ಅಲ್ಪಸ್ವಲ್ಪ ಹಣ ಗಳಿಸುವುದರೊಳಗಾಗಿಯೇ, ಪೋಲೀಸರಿಗೆ, ಆಕೆಯ ಉದ್ಯೋಗದ ಗೂಢ ತಿಳಿಯಿತು. ಈಗ ಆಕೆ, ಆಕೆಯ ಸ್ವಂತದ ಲೆಕ್ಕದಲ್ಲಿಯೇ ಸೆರೆಯಲ್ಲಿರುವಳು.

—●—

ಪ್ರಣಯಜ್ವಾಲೆ

ಇದು ಬಿಸಿಯಾಗಿದೆಯೆಂದು, ಪ್ರಣಯಿಗಳನ್ನು ಪರೀಕ್ಷಿಸಿದ ದಾಕ್ತರರು ಅಭಿಪ್ರಾಯಪಟ್ಟು, ಅದರ ಮೇಲೆ ಶೋಧವನ್ನೂ ನಡೆಸಿದ್ದಾರೆ. ಪ್ರಣಯಿಗಳಿಗೆ ಶೀತಬಾಧೆ ತಟ್ಟುವುದಿಲ್ಲವೆಂದೇ ಈ ಶೋಧ. ಅವರಲ್ಲಿರುವ ಉತ್ಸಾಹ, ಆಶೆ, ಆಸಕ್ತಿಗಳಿಂದ, ದೇಹವು ಬಿಸಿಯೇರಿ, ಅದು ಶೀತ ಅಣುಗಳು ದೇಹದೊಳಕ್ಕೆ ಪ್ರವೇಶಿಸದಂತೆ ತಡೆಯುವುದಂತೆ. ವಿವಾಹಕ್ಕೆ ನಿಶ್ಚಯವಾಯಿತೆಂದಾದರಂತೂ, ಶೀತ ಖಂಡಿತ ಬರುವುದೇ ಇಲ್ಲವಂತೆ. ಹಾಕ್ಕೆ ...ಲ್ಲಾದರೂ ಬಂದಿದ್ದರೆ, ಅದು ಪ್ರಣಯಾಕಾಂಕ್ಷೆ ಕಡಿಮೆಯಾದುದರಿಂದೆಂದು ತಿಳಿದರಾಯಿತು!

ವೆಂಕಟಗಿರಿ ಮಹಾತ್ಮೆ

೪೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಬ್ಲಾಕುಗಳಿಂದ ಕೂಡಿದೆ.

ಮುದ್ದಾದ ಮುದ್ರಣ. ಬೆಲೆ ರೂಪಾಯಿ ೧—೮—೦. ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ...ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ...ಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅ...ತ್ಯದ ಪಠನ ಪುಸ್ತಕವಾಗಿರಲು ಉಚಿತವಾಗಿರುವ... ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ...ನಾರಿನ ಬೈಂಡು ಪ್ರತಿಯೊಂದಕ್ಕೆ ರೂ. 1-... ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಬಾಲಗುಟ್ಟಿ
ಧೂತಪಾಪೇಶ್ವರ
ಬಾಲಕಡು
ಇದನ್ನು ಮಕ್ಕಳಿಗೆ ಕೊಡಿರಿ.

ಶ್ರೀ ಧೂತಪಾಪೇಶ್ವರ ಪನವೇಲ ಲಿ.
ಪನವೇಲ-ಕುಲಾಬಾ

ಸಾವಕಾರ
ಶ್ರೀನಿವಾಸ ರಂಗ ಪೈ
ವಜ್ರಗಳು
ಸಾವಕಾರ ಮಹಾಲ್,
ಮಂಗಳೂರು.

ಕೊಮನ್‌ವೆಲ್ತ್
ಎಶ್ಯೂರೆನ್ಸ್ ಕೊ., ಲಿಮಿಟೆಡ್, ಪೂನಾ.

ಏಜೆಂಟರು:—

ಗವಾನಕರ್ ಎಂಡ್ ಸನ್,
ಗಾಂಧಿ ನಗರ,
ಬೆಂಗಳೂರು.

ಮದ್ರಾಸು ಶಾಖಾ ಕಾರ್ಯಾಲಯ,
22, ...ಡ್ವೆ,
ಮದ್ರಾಸು.

aya Laxmi Bank, Ltd., ESTD: alore.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ...ೂರು.

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮ..., ಮೂಡಿಗೆರೆ ಮತ್ತು ಕಣ್ಣಾನೂರು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ. ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ—ಸೇ. 3%; 6 ತಿಂಗಳ ಠೇವಣಾತಿಗಳಿಗೆ—ಸೇ. 3½%
12 „ „ „ 4%;

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬಂಗಾರದ ನಗಗಳ ಈಡಿನ ಮೇಲೆ ಮಂಗಳೂರು ಹೆಡ್ಡ್ ಆಫೀಸಿನಲ್ಲಿ ಬಹು ಕಡಿಮೆ ಬಡ್ಡಿಯಲ್ಲಿ ಸಾಲಗಳನ್ನು ಕೊಡಲಾಗುವುದು.

M. GANESH RAO,
ಸೆಕ್ರಿಟರಿ.

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ

?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ.
(ಟಪ್ಪಾಲು ಖರ್ಚು ಪ್ರತ್ಯೇಕ).

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

ನಿಮ್ಮ ನಿತ್ಯದ ತಾಂಬೂಲದೊಡನೆ ಸೇಲಮ್ ಅಶೋಕಾ ಅಡಿಕೆಯೇ ಉಪಯೋಗಿಸಿರಿ.

ಇದಕ್ಕೆ ನಮ್ಮ ಮಂತ್ರಿವರ್ಯರೂ ಬಹುತೇಕವಾಗಿ ಶ್ಲಾಘಿಸಿರುವರು.

ತೃಪ್ತಿ ಪಡಿಸುವದು **SALEM ASOKA** ರುಚಿಸುವದು

ಸೇಲಮ್ ಅಶೋಕಾ ಜಗಿಯುವದರಿಂದ ಸ್ಫೂರ್ತಿಯುತರಾಗುವಿರಿ.

ಏಜೆಂಟರು:— ಶಾ ಕಂಪೆನಿ, ಮಂಗಳೂರು.

ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ, ಲಿಮಿಟೆಡ್

ಮುಖ್ಯ ಕಚೇರಿ:—ಮದ್ರಾಸು. ಪೋಸ್ಟು ಬಾಕ್ಸ್ ನಂಬ್ರ 182.

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.

'ರಿಜಿಸ್ಟ್ರಾರ್ ಓಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಆಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತಗಳು ಅತ್ಯಾಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ. ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಏಜಂಟರು ಬೇಕು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಜಂಟರರಾಗಲಿಚ್ಛಿಸುವವರು ಈ ವಿಳಾಸಕ್ಕೆ ಬರೆಯಬೇಕು:—ಸೆಕ್ರೆಟರಿ, **ಸೌತ್ ಕೆನರಾ ಸೆಂಟ್ರಲ್ ಕೊ-ಓಪರೇಟಿವ್ ಬೇಂಕ್, ಲಿಮಿಟೆಡ್, ಮಂಗಳೂರು.**

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡು...ಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ ... ನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.
(2) ಕನ್ವೀ... ಲೋಕಲ್ ಬೋರ್ಡ್ಸ್ ಓಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ...ನ್ಶೂರೆನ್ಸ್ ... ...ೋ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್, ಮಡಿಕೇರಿ,
... ಕೊ-ಒಪರೇಟಿವ್

Service & Promptness

A Feature and a Fact with the "POPULAR"

M. VENKATESH PAI,
Banker.

Sri Krishna Bhavan,
Mangalore,
25th July, 1938.

The Managing Director,
The Popular Insurance Co., Ltd.,
MANGALORE.

Policy No. 40.

Dear Sir,

I very much appreciate your promptness in settling the claim in less than a week in respect of the above policy on the life of my late lamented Father-in-law, Sri Nagar Vasudeva Shenoy who passed away on the 19th instant.

I quite appreciate too the service you rendered the claimant in voluntarily forwarding the Claim Papers and assisting in their completion. Then the cheque for Rs. 2,558—7—0 is delivered to the claimant and all within the short period of 6 days.

This spirit of service and promptitude evinced by the 'POPULAR' is highly laudable and it is but proper that the Company should be 'POPULAR'. It should naturally bring home to the public immense advantages of getting insured with a local Life Office and I would certainly recommend the Company to all.

I wish the Company a brilliant career of usefulness and prosperity.

Yours faithfully,
(*Sd.*) M. Venkatesha Pai.

The Company requires influential Ladies and Gentlemen to work as Agents on most remunerative terms including hereditary renewals.

Apply to:—

The Popular Insurance Co., L...

Head Office: MANGALORE.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುಮಾನಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್

ಟ್ರೇಡ್ ಮಾರ್ಕ್.

ಡಾ. ವಾಮನ್ ಗೋಪಾಲ...

ಸ ರ್ಸ ಪ ರಿ ಲ್ಲಾ

100 ವರ್ಷಗಳ ಅನುಭವದಿಂದ ಮಿಲ್ಲಿಯಗಟ್ಲೆ ಜನರು, ರಕ್ತಶುದ್ಧಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ। ಗೌತಮರಾವ್ ಕೇಶವರಾವ್‌ರವರ ಟೊನಿಕ್ ಫೊಸ್ಫರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ। ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾಯಿ.

THE PREMIER BA... OF INDIA, LIMITED.

ದಿ ಪ್ರೀಮಿಯರ್ ಬೇ... ಇಂಡಿಯಾ, ಲಿಮಿಟೆಡ್,

Head Office:—ಮದರಾಸು. ...ಗಳು:—ಮದುರೆ ಮತ್ತು ನೆಲ್ಲೂರ್.

ಅಧ್ಯಕ್ಷರು:—...ಕ್ಟರ್ ಯು. ಯಲ್... ...ರಾಯಣರಾವ್, ಮದರಾಸು.

12 ತಿಂಗಳುಗಳಿಗೆ ಮತ್ತು 24 ತಿಂಗಳುಗಳಿಗೆ ... ...ಂದರ ... ...ಲೆ ಬಡ್ಡಿಯಲ್ಲಿ ನಿರಖು ಠೇವಣಾತಿಗಳು ಸ್ವೀಕರಿ... ವರ್ಷಕ್ಕೊಮ್ಮೆ. 5000 ರೂಪಾಯಿ ... ವಿಶೇಷ ಬಡ್ಡಿ ದರಗಳಿವೆ...

ಈ ವಾರದ ಕಥೆ

...ತ್ತು. ನಾನು
...ಥಾರಣ ರಾತ್ರೆ ಒಂ
...ಬಹುದು. ಚಿಕ್ಕಮ್ಮನು, ಊಟ
...ದಿರಬಹುದೆಂದು ನಾನು ನನ್ನ ಕೊಠಡಿ
...ನ್ನು ಸೇರಿ, ಉಡುಪನ್ನು ಬದಲಾಯಿಸತೊಡ
...ದೆ. ಪಡಸಾಲೆಯಲ್ಲಿದ್ದ ವಿಮಲೆಯು ಕೈ
...ಯಲ್ಲೊಂದು ಲಕೋಟೆಯನ್ನು ಹಿಡಕೊಂಡು
...ನ್ನ ಕೊಠಡಿಯತ್ತ ಬರುತ್ತಿದ್ದಳು. ಆದರೆ, ನಾನು ಉಡುಪನ್ನು ಬದಲಾಯಿಸುತ್ತಿರ...ವು ...ದನ್ನು ಕಂಡು, ತಲೆಯನ್ನು ತಗ್ಗಿಸಿ ನಗುತ್ತಾ ಹಿಂತಿರುಗಿದಳು. ಆಕೆಯ ಆಗಿನ ಸರಳ ವರ್ತನೆಯನ್ನು ಕಂಡು, ನನಗೂ ನಗು ಬಂದಿತು.

ಉಡುಪನ್ನು ಬದಲಾಯಿಸಿಕೊಂಡು 'ವಿಮಲಾ!' ಎಂದು ಕರೆದೆ. ಬಾಗಿಲ ಮರೆಯಲ್ಲೇ ನಿಂತಿದ್ದ ವಿಮಲೆಯು, ನಗುತ್ತಾ ತಾರೊಂದನ್ನು ಕೈಗಿತ್ತಳು. ಅಷ್ಟರಲ್ಲಿ ಅಡಿಗೆ ಮನೆಯಲ್ಲಿದ್ದ ಚಿಕ್ಕಮ್ಮನೂ ಅಲ್ಲಿಗೆ ಬಂದಳು. ತಾರನ್ನು ಒಡೆದು ಓದಿಕೊಂಡೆ. ಚಿಕ್ಕಮ್ಮನು ಗಡಿಬಿಡಿಯಿಂದ 'ಯಾರಿಂದ ತಾರು ಬಂದಿರುವುದು?' ಎಂದು ಕೇಳಿದಳು.

'ತಾರು ರಾಜುವಿನಿಂದ ಬಂದಿರುತ್ತದೆ. ನನಗಾಗಿ ಒಂದು ಕೆಲಸವನ್ನು ಗೊತ್ತು ಮಾಡಿರುವುದಾಗಿಯೂ, ನಾನು ಕೂಡಲೆ ಮುಂಬಯಿಗೆ ಹೊರಟು ಬರುವಂತೆಯೂ ತಿಳಿಸಿರುವನು' ಎಂದು ನಗುತ್ತಾ, ಒಮ್ಮೆ ಚಿಕ್ಕಮ್ಮನನ್ನೂ, ವಿಮಲೆಯನ್ನೂ ನೋಡಿದೆ. ದೃಷ್ಟಿಯು ವಿಮಲೆಯ ಮೇಲೆ ಬಿದ್ದೊಡನೆ ನನ್ನ ನಗುವು ಮಾಯವಾಯಿತು.

ವಿಮಲೆಯ ಮುಖವಂತೂ ಕಂದಿಹೋಗಿತ್ತು. ನಮ್ಮಿಬ್ಬರ ದೃಷ್ಟಿಯು ಕೂಡಿದೊಡನೆ ಮುಖವನ್ನು ತಿರುಗಿಸಿಕೊಂಡು ವಿಮಲೆಯು ತನ್ನ ಕೊಠಡಿಗೆ ಹೋದಳು. ಚಿಕ್ಕಮ್ಮನು ಮಾತ್ರ ಬಹು ಬೇಸರದಿಂದ ನನ್ನನ್ನು ನೋಡುತ್ತಾ ನಿಂತು ಬಿಟ್ಟಿದ್ದಳು.

ನಾನು ಮೆಲ್ಲನೆ 'ಅನಾಯಾಸವಾಗಿ ದೊರೆತ ಉದ್ಯೋಗವನ್ನು ಬಿಡಲು ಸಾಧ್ಯವೇ? ರಾಜುವಾದರೂ ಏನೆಂದು ತಿಳಿದಾನು? ಮುಂಬಯಿಗೆ ಹೋದ ಒಂದೆರಡು ತಿಂಗಳಲ್ಲಿ ಬಿಡಾರದ ವ್ಯವಸ್ಥೆಯನ್ನು ಮಾಡಿ, ನಿನ್ನನ್ನೂ ವಿಮಲೆಯನ್ನೂ ಕರಕೊಳ್ಳುವೆನು. ಒಂದೆರಡು ತಿಂಗಳ ಮಟ್ಟಿಗೆ ಸುಧಾರಿಸಿಕೊಳ್ಳಲು ಸಾಧ್ಯವಿಲ್ಲವೇ, ಚಿಕ್ಕಮ್ಮಾ' ಎಂದೆ.

ನನ್ನ ಮಾತುಗಳು ಆಕೆಗೆ ಸರಿಯೆಂದು ತೋರಿದರೂ, ಮನಸ್ಸಿನ ವೇದನೆಯಿಂದ ಏನೊಂದು ಉತ್ತರವನ್ನೂ ಕೊಡದೆ ನಡೆದು ಬಿಟ್ಟಳು. ನನಗೂ ಅವರಿಬ್ಬರನ್ನು ಬಿಟ್ಟು ಹೋಗುವುದೆಂದರೆ ಬೇಸರವೆನಿಸುತ್ತಿತ್ತು. ಆದರೆ ಬೇರೆ ಉಪಾಯವಿರಲಿಲ್ಲ. ...ಬೆಳಿಗ್ಯೆ ಎಂಟು ಘಂಟೆಯ ರೈಲಿನಲ್ಲಿ ಹೊ...ಗುವುದೆಂದು ನಿಶ್ಚಯಿಸಿ, ಬೇಗನೇ ಊಟವನ್ನು ತೀರಿಸಿ ಮಲಗಿಕೊಂಡೆ.

ನಿದ್ರೆಯಂತೂ ಬರಲಿಲ್ಲ; ಒತ್ತಿಗೆ ನನ್ನ ...ವನದ ದೃಶ್ಯಗಳು ಒಂದೊಂದಾಗಿ ಕಣ್ಣೆದುರು ...ಡಿಕೊಂಡು ಮಾಯವಾಗುತ್ತಿದ್ದವು; ಜನ್ಮ...ವ ಮೊದಲೇ, ತಂದೆಯನ್ನು ಕಳೆದುಕೊಂಡ ...ರ್ಭಾಗ್ಯನನ್ನು, ಹೆತ್ತ ತಾಯಿಯೂ ಕೂಡಾ, ...ನ್ನ ಎಂಟನೇ ವಯಸ್ಸಿನಲ್ಲಿ ನನ್ನ ಪೋಷಣೆಯ ಭಾರವನ್ನು, ನೆರೆಮನೆಯ ಹಾಗೂ ತನ್ನ ಆಪ್ತ ಮಿತ್ರಳಾದ ಕಲ್ಯಾಣಿಯ ಮಡಿಲಲ್ಲಿಟ್ಟು ತೀರಿಕೊಂಡಳು. ಅಂದಿನಿಂದ, ಕಲ್ಯಾಣಿಯನ್ನು ಚಿಕ್ಕಮ್ಮನೆಂದೇ ಸಂಬೋಧಿಸತೊಡಗಿದ್ದೆ. ಸಮಾಜದ ದೃಷ್ಟಿಯಲ್ಲಿ, ನಾನು ಅನಾಥನೆಂದು ಕಂಡರೂ, ಚಿಕ್ಕಮ್ಮನು ಮಾತ್ರ, ಅದಕ್ಕೆ ಎಡೆ ಕೊಡಲಿಲ್ಲ. ತನ್ನ ರಾಜು ವಿಮಲೆಯರಿಗಿಂತಲೂ, ಹೆಚ್ಚಿನ ಪ್ರೀತಿಯಿಂದ ನನ್ನನ್ನು ಕಾಣುತ್ತಿದ್ದಳು.

ರಾಜು ವಿಮಲೆಯರಿಗಂತೂ ನನ್ನಲ್ಲಿ ಹೆಚ್ಚಿನ ಆದರ. ವಿಮಲೆಯೂ, ನಾನೂ ಒಂದೇ ತರಗತಿಯಲ್ಲಿ ಓದುತ್ತಿದ್ದೆವು. ಇದರಿಂದಾಗಿ ನಮ್ಮಿಬ್ಬರಲ್ಲಿ ಅನ್ಯೋನ್ಯ ಪ್ರೀತಿ ಮತ್ತು ...ತನ್ನ...ಯು ನೆಲಸಿತ್ತು. ತಾಯಿಯು ತೀರಿಕೊ... ...ಗ, ಅವಳ ಮತ್ತೂ ಚಿಕ್ಕಮ್ಮನ ಸ್ನೇ...ದೆಯ ...ರುತಿಗಾಗಿ, ವಿಮಲೆಯನ್ನು ನನಗೆ ಕೊ... ...ಂದಳು ...ಲಂ ವರಿ... ...ಚಿಕ್ಕಮ್ಮ...

...ಚುಂಬನ! ಆಕೆಯ... ...ಜಾರ್ಜ್... ...ತಾಂಪ್ಸನ್ ನು, ಮ್ಯಾಜಿ... ...ಒಡನೆ ತನ್ನ ಉದಾಹರಣೆ ಕೊಡುತ್ತಾ, ...ಕಳೆಕಾಲದವನು. ನನ್ನ ಮಗಳು, ...ಗತೆ ತೆಗೆದುಕೊಳ್ಳುವ

"ಅದೂ ಹೀಗಾಯಿ..."

(ಲೇಖಕ:—ಶ್ರೀ. ಅ. ನಾ. ಬೋಳಾರ, ಕನ್ನಡಿಗರ ಕೂಟ, ಮುಂಬಯಿ.)

ಕೆಲವು ತಿಂಗಳ ಹಿಂದೆ, ರಾಜುವು ತನ್ನ ಪತ್ನಿ ಸರಳೆಯೊಂದಿಗೆ, ಮುಂಬಾಯಿಗೆ ಹೋಗಿ ನೆಲಸಿದ್ದುದರಿಂದ, ಮನೆಯಲ್ಲಿ ...ಮ್ಮನ ಹೊರತು ನಾವಿಬ್ಬರೇ. ಅಂದ ಮೇಲೆ, ನನ್ನ ಮತ್ತು ವಿಮಲೆಯ ಪ್ರೇಮ ಸಂಭಾಷಣೆಗೆ ಯಾರ ಅಡ್ಡಿಯೂ ಇರಲಿಲ್ಲ. ಚಿಕ್ಕಮ್ಮನಿಗಂತೂ, ನಮ್ಮಿಬ್ಬರ ಹೃದಯದ ಪರಿಚಯವಿದ್ದರೂ, ಏನನ್ನೂ ಅರಿಯದವಳಂತೆ ನಟಿಸುತ್ತಿದ್ದಳು.

ಒಂದರ ಮೇಲೊಂದರಂತೆ ಆಲೋಚನೆಗಳು ಹತ್ತಿ, ಕೋಣೆಯಲ್ಲಿದ್ದ ಗಡಿಯಾರವು ಹನ್ನೆರಡು ಗಂಟೆಯನ್ನು ಬಾರಿಸಿದುದು ನನಗೆ ತಿಳಿಯಲೇ ಇಲ್ಲ. ಮನೆಯೊಳಗಿನ ದೀಪವನ್ನು ಆರಿಸಿಕೊಂಡು, ಚಿಕ್ಕಮ್ಮನು ಮಲಗಿಕೊಂಡಿದ್ದಳು. ಮೈಮೇಲೆ ವಸ್ತ್ರವನ್ನು ಎಳಕೊಂಡು, ಮಗ್ಗಲಿಗೆ ಸರಿದುಕೊಂಡು, ಮಲಗಿದೆ. ಸ್ವಲ್ಪ ಜೊಂಪು ಹತ್ತಿದಂತಾಯಿತು. ಆದರೆ ಪಕ್ಕನೆ ಎಚ್ಚರವಾಯಿತು.

ಮುಖದ ಮೇಲೆ ಒಂದೆರಡು ನೀರ ಹನಿಗಳು ಬಿದ್ದಂತೆ ಭಾಸವಾಯಿತು. ಅವುಗಳನ್ನು ಒರಸಿಕೊಳ್ಳುತ್ತಾ ಕಣ್ಣನ್ನು ತೆರೆದೆ. ಮಬ್ಬುಗತ್ತಲಲ್ಲಿ ಯಾರೋ, ಹಾಸಿಗೆಯ ಮೇಲೆ, ನನ್ನ ಬಳಿ ಕುಳಿತಿರುವಂತೆ ತೋರಿತು. ವ್ಯಕ್ತಿಯು ಸ್ತ್ರೀ! ವಿಮಲೆ!!

ನನ್ನ ಮುಖದ ಮೇಲೆ ಬಿದ್ದ ನೀರಹನಿಗಳು, ಆಕೆಯ ಕಣ್ಣೀರು. ನಾನು ಎಚ್ಚತ್ತುದನ್ನು ಕಂಡು, ತನ್ನ ಸೆರಗಿನಿಂದ ಕಣ್ಣೀರನ್ನೊರಸಿಕೊಂಡಳು. ನಾನು ಮೆಲ್ಲನೆ ಕೇಳಿದೆ, 'ವಿಮಲಾ! ಕಣ್ಣೀರಿಡುವುದೇತಕ್ಕೆ?' ಎಂದು. ಉತ್ತರವಿಲ್ಲ. ನಿಟ್ಟುಸಿರೊಂದು ಮಾತ್ರ ಕೇಳಿಸಿತು.

ಪುನಃ ಅದೇ ಪ್ರಶ್ನೆಯನ್ನು ಕೇಳಿದೆ. ಉತ್ತರದ ಬದಲು, ಬಿಕ್ಕಿ ಬಿಕ್ಕಿ ಅಳಲಾರಂಭ. ನಾನು ಆಕೆಯ ಕೂದಲನ್ನು ಸವರುತ್ತಾ, 'ವಿಮಲಾ! ಚಿಕ್ಕ ಮಗುವಿನಂತೆ ಅಳುವುದೇತಕ್ಕೆ? ಮಾತನಾಡುವುದಿಲ್ಲವೇಕೆ?' ಎಂದೆ. ಅವಳು ಸ್ವಲ್ಪ ಸುಧಾರಿಸಿಕೊಂಡು, 'ರಾಮೂ! ಮುಂಜಾನೆ ಬೊಂಬಾಯಿಗೆ ಹೊರಡುವುದು ನಿಶ್ಚಯವೇ?' ಎಂದಳು. ಅವಳ ಆಗಿನ ಸ್ವರದಲ್ಲಿ ದೈನ್ಯಭಾವವಿತ್ತು.

ನನಗೂ ಆಕೆಯ ಸ್ಥಿತಿಯನ್ನು ಕಂಡು ಬೇಸರವೆನಿಸಿತು. 'ಹೋಗದೆ ಮತ್ತೇನು ಮಾಡಲಿ? ವಿಮಲಾ! ವಿದ್ಯಾವತಿಯಾದ ನಿನಗೆ, ಈಗಿನ ನಿರುದ್ಯೋಗದ ಸಮಸ್ಯೆಯನ್ನು ನಾನು ವಿವರಿಸಿ ಹೇಳಬೇಕಾಗಿಲ್ಲವಲ್ಲ! ಅಂದ ಮೇಲೆ, ಸುಲಭವಾಗಿ ದೊರೆತ ಉದ್ಯೋಗವನ್ನು ಬಿಡುವುದೇ? ಒಂದೆರಡು ತಿಂಗಳಲ್ಲೇ, ನಿನ್ನನ್ನೂ, ಚಿಕ್ಕಮ್ಮನನ್ನೂ ಕರಕೊಳ್ಳುವೆನು.'

ಒಂದು ತಾಸಿನ ತನಕ ಸಮಾಧಾನ ಪಡಿಸಿದ ಮೇಲೆ, ವಿಮಲೆಯು ಸ್ವಲ್ಪ ಸುಧಾರಿಸಿಕೊಂಡಂತೆ ತೋರಿತು. ಕೋಣೆಯಲ್ಲಿನ ಗಡಿಯಾರವು ಆಗಲೇ ಎರಡು ಗಂಟೆಯನ್ನು ಬಾರಿಸಿದುದರಿಂದ, ವಿಮಲೆಯು ಮೆಲ್ಲನೆದ್ದು ಹೋಗುತ್ತಾ, 'ರಾಮೂ, ಮುಂಬಯಿಗೆ ಹೋದ ನಂತರ ನನ್ನನ್ನು ಮರೆತು ಬಿಡಲಾರೆಯಷ್ಟೆ!' ಎಂದು ನಗುತ್ತಾ ಕೇಳಿದಳು.

ನನಗೊಂದು ವಿಚಾರವು ಹೊಳೆಯಿತು. 'ವಿಮಲಾ! ಒಂದು ವಿಷಯವನ್ನು ಮರೆತಿದ್ದೆ' ಎಂದೆ. ವಿಮಲೆಯು ಬಾಗಿಲಲ್ಲಿ ನಿಂತು ಬಿಟ್ಟಳು. ನಾನು ಹಾಸಿಗೆಯಿಂದೆದ್ದು, ಅವಳ ಬಳಿಗೆ ಹೋಗಿ, 'ವಿಮಲಾ! ನಿನ್ನನ್ನು ಮರೆಯಲು ನನ್ನಿಂದ ಸಾಧ್ಯವೇ?' ಎನ್ನುತ್ತಾ ಆಕೆಯನ್ನು, ನನ್ನೆರಡು ಬಾಹುಗಳಲ್ಲಿ ಬಂಧಿಸಿದೆ.

ಆಕೆಯು ತನ್ನೆರಡು ಕೈಗಳಿಂದ ನನ್ನನ್ನು ಹಿಂದಕ್ಕೆ ದೂಡಿ ಬಿಟ್ಟು, 'ಚಿಕ್ಕಮ್ಮನೆಲ್ಲಿಯಾದರೂ, ನೋಡಿದರೆ?' ಎನ್ನುತ್ತ ನಾಚಿಕೆಯಿಂದ ತಲೆ ತಗ್ಗಿಸಿದಳು. ನಾನು ನಗುತ್ತಾ, 'ಅದು ನಿನ್ನನ್ನು ಮರೆಯದಂತೆ ನೆನಪಿಗಾಗಿ' ಎಂದೆ. ವಿಮಲೆಯು ಮಾತ್ರ, ತನ್ನ ತಲೆಯನ್ನು ಮೇಲೆತ್ತದೆ, ಬಾಗಿಲುಗಳನ್ನು ಎಳೆದುಕೊಂಡು ಹೊರಟು ಹೋದಳು. ನಾನು ಮರಳಿ ಹಾಸಿಗೆಯ ಮೇಲೆ ಬಿದ್ದುಕೊಂಡೆ.

ರಾತ್ರೆಯೆಲ್ಲಾ ನಿದ್ರೆ ಬಾರದೆ ಮುಂಜಾನೆ ನನ್ನ ಕಣ್ಣುಗಳೆರಡು ಕೆಂಪಾಗಿದ್ದವು. ಚಿಕ್ಕಮ್ಮನು, 'ರಾತ್ರಿ ನಿದ್ರೆಯು ಚೆನ್ನಾಗಿ ಬರಲಿಲ್ಲವೇ?' ಎಂದಳು. ಉತ್ತರವನ್ನು ಕೊಡುವ ಮೊದಲು, ಬಳಿಯಲ್ಲೇ ಕುಳಿತಿದ್ದ ವಿಮಲೆಯನ್ನು ನೋಡಿದೆ. ತಲೆಯನ್ನು ತಗ್ಗಿಸಿಕೊಂಡು, ಮೃದುವಾಗಿ ನಗುತ್ತಿದ್ದಳು. 'ನಿನ್ನೆ ರಾತ್ರಿ ನುಸಿಗಳ ಕಾಟವು ...ಹಳವಾಗಿತ್ತು, ಚಿಕ್ಕಮ್ಮಾ' ... ...ಲೆಯ ಮುಖದಲ್ಲಿ ಪುನಃ ಒಂದು ...ಗ... ಮಿಂಚಿತು.

ಮುಂಬಯಿಗೆ ಬಂದು ಕೆಲಸಕ್ಕೆ ಸೇರಿ... ದಾಯಿತು. ರಾಜು ಸರಳೆಯರಿಬ್ಬರೂ, ನನ್ನನ್ನು, ತಮ್ಮಲ್ಲೇ ಇರಲು ಹೆಚ್ಚಿನ ಒತ್ತಾಯ ಪಡಿಸಿದರು. ಸರಳೆಯ ಪರಿಚಯವು, ನನಗೆ ಸಾಕಷ್ಟು ಇಲ್ಲದುದರಿಂದ, ಅವರಲ್ಲಿ ಉಳಕೊಳ್ಳುವ ಮನಸ್ಸಿದ್ದಿಲ್ಲ. ಆದರೂ, ಅವರಿಬ್ಬರ ಮನಸ್ಸನ್ನು ನೋಯಿಸಲಾರದೆ, ಅವರಲ್ಲೇ ಉಳಿದು ಬಿಟ್ಟೆ.

ಕೆಲವು ದಿವಸಗಳಲ್ಲೇ, ಸರಳೆಯ ವಿಷಯ ನನ್ನಲ್ಲಿದ್ದ ಭಿನ್ನಾಭಿಪ್ರಾಯವು ಮಾಯವಾಯಿತು. ಅವಳು ಹೆಸರಿಗೆ ತಕ್ಕಂತೆ, ಸರಳೆಯೇ ಆಗಿದ್ದಳು. ರಾಜುವಿನಂತೆ ಸರಳೆಗೂ ನನ್ನಲ್ಲಿ ಹೆಚ್ಚಿನ ಅಭಿಮಾನವಿತ್ತು. ನನ್ನನ್ನು 'ಅಣ್ಣ' ನೆಂದು ಕರೆಯುತ್ತಿದ್ದಳು. ನಾನು ಅವಳನ್ನು 'ಅತ್ತಿಗೆ' ಎನ್ನುತ್ತಿದ್ದೆ. ಹಾಗೂ ನಮ್ಮಲ್ಲಿ ಅನ್ಯೋನ್ಯ ಪ್ರೀತಿಯು ನೆಲಸಿತ್ತು.

ಮುಂಬಯಿಗೆ ಬಂದ ಮೇಲೆ, ವಿಮಲೆಯಿಂದ ಒಂದೆರಡು ಪ್ರೇಮ ಪತ್ರಗಳು ನನಗೆ ಬಂದಿದ್ದವು. ತಕ್ಕಂತೆ ಉತ್ತರವನ್ನೂ ಬರೆದಿದ್ದೆನು. ನಮ್ಮಿಬ್ಬರ ಪತ್ರಗಳ ವಿಷಯಗಳು, ಸರಳೆಗೆ ಚೆನ್ನಾಗಿ ತಿಳಿದುದರಿಂದ, ಕೆಲವೊಮ್ಮೆ ರಾಜುವು ಇದ್ದಂತೆಯೇ, ನನ್ನನ್ನು ಪರಿಹಾಸ್ಯ ಮಾಡುತ್ತಿದ್ದಳು.

ಆ ದಿನ, ನನಗೆ ನೆಗಡಿಯ ದೆಸೆಯಿಂದ, ದೇಹದಲ್ಲಿ ಸ್ವಸ್ಥವಿದ್ದಿಲ್ಲ. ಬೇಗನೇ ಮನೆಗೆ ತೆರಳಿ ವಿಶ್ರಮಿಸಬೇಕೆಂದು ಆಲೋಚಿಸಿದ್ದೆ. ಅಷ್ಟರಲ್ಲಿ ರಾಜುವು ಅಲ್ಲಿಗೆ ಬಂದು 'ಇಂದು ಸಿನೆಮಾ ನೋಡಲು ಹೋಗೋಣವೇ?' ಎಂದನು. 'ನೆಗಡಿ; ಮೈ ಚೆನ್ನಾಗಿಲ್ಲ, ಜ್ವರವು ಬರುವಂತಿದೆ. ನೆಟ್ಟಗೆ ಮನೆಗೆ ಹೋಗಿ ಸ್ವಲ್ಪ ವಿಶ್ರಮಿಸಿಕೊಳ್ಳುವೆನು' ಎಂದೆ. ರಾಜುವು, ಒಪ್ಪಿಕೊಂಡು ಹೋಗಿಬಿಟ್ಟ. ಕೆಲಸವನ್ನು ತೀರಿಸಿಕೊಂಡು ಮನೆಯತ್ತ ಹೊರಟೆ. ದಾರಿಯಲ್ಲಿ, ಮಿತ್ರನೊಬ್ಬನ ಭೇಟಿಯಾಯಿತು. ಮಾತಿಗೆ ಮಾತು ಹತ್ತಿ ಮನೆಯನ್ನು ಸೇರುವಾಗ ಕತ್ತಲಾಗುತ್ತಾ ಬಂದಿತ್ತು.

ನನ್ನ ಕೊಠಡಿಯು ಹೊರತು ಮನೆಯಲ್ಲೆಲ್ಲೂ ದೀಪವನ್ನು ಹೊತ್ತಿಸಿರಲಿಲ್ಲ. ಸರಳೆಯೇನಾದರೂ, ರಾಜುವಿನೊಂದಿಗೆ ಸಿನಿಮಾಕ್ಕೆ ಹೋಗಿರಬಹುದೇ? ಪಡಸಾಲೆಯಲ್ಲಿದ್ದ ಆಳನ್ನು ವಿಚಾರಿಸಿದೆ. 'ಅಮ್ಮನವರಿಗೆ, ಪ್ರಥ್ಯಾಹ್ನದಿಂದ ಜ್ವರವು ಬರುತ್ತಿರುವುದರಿಂದ, ತಮ್ಮ ಕೊಠಡಿಯಲ್ಲಿರುವರು' ಎಂದ. ನಾನು ಬೇಗನೆ ಸರಳೆಯ ಕೊಠಡಿಯ ಕಡೆ ನಡೆದೆ.

ದೀಪವನ್ನು ಹತ್ತಿಸಿರಲಿಲ್ಲ.

ಬಾಗಿಲಲ್ಲೇ ನಿಂತುಕೊಂಡು, 'ಸರಳಾ' ಎಂದು ಕರೆದೆ. ಮಂಚದ ಮೇಲೆ ಮಲಗಿದ್ದ ಸರಳೆಯು ಮೆಲ್ಲನೆ ತಲೆಯೆತ್ತಿ ನೋಡಿದಳು. ಕೊಠಡಿಯ ದೀಪವನ್ನು ಹತ್ತಿಸಿ, ಆಕೆಯ ಮಂಚದ ಬಳಿ ಸರಿದು, 'ವಿಪರೀತ ಜ್ವರವಿದೆಯೇ?' ಎಂದೆ.

ಸರಳೆಯು ನನ್ನ ಕೈಯ್ಯನ್ನೆತ್ತಿಕೊಂಡು ತನ್ನ ಹಣೆಯ ಮೇಲಿಟ್ಟಳು. ಜ್ವರವು ಚೆನ್ನಾಗಿಯೇ ಇತ್ತು. 'ವೈದ್ಯರನ್ನು ಕರೆಯಲೇ?' ಎಂದೆ. ಸರಳೆಯು, ಮೆಲ್ಲನೆ, 'ವೈದ್ಯರಿಂದೇನೂ ಆಗುವ ಹಾಗಿಲ್ಲ. ನನಗೆ ಇದರ ಬಾಧೆಯು, ಚಿಕ್ಕಂದಿನಿಂದಲೂ ಇದೆ. ಮೈಯೆಲ್ಲಾ ನೋಯುತ್ತಿದೆ. ಒಮ್ಮೆ ಬಿಸಿನೀರಿನಿಂದ ಶಾಕವನ್ನು ಕೊಟ್ಟರೆ ಕೂಡಲೇ ವಾಸಿಯಾಗುವುದು.' ಎನ್ನುತ್ತಾ, ನೋವಿನಿಂದ ಹಾಸಿಗೆಯ ಮೇಲೆ, ಅತ್ತಿತ್ತ ಹೊರಳಾಡಿದಳು. ಆಕೆಯ ಆಗಿನ ಸ್ಥಿತಿಯನ್ನು ಕಂಡು ನನ್ನಲ್ಲಿ ಕನಿಕರವೂ ಹುಟ್ಟಿತು.

ಮನೆಯ ಕೆಲಸದವಳು, ನಿತ್ಯದ ಕೆಲಸವನ್ನು ತೀರಿಸಿಕೊಂಡು, ಆಗಲೇ ಹೊರಟು ಹೋಗಿದ್ದಳು. ನಾನು, ಸುಮ್ಮನಿರುವುದನ್ನು ಕಂಡು, ಸರಳೆಯು 'ಒಲೆಯ ಮೇಲೆ ಬಿಸಿ ನೀರಿದೆ; ಅದನ್ನಿಷ್ಟು ಸೀಸೆಯಲ್ಲಿ ತುಂಬಿಸಿ, ತೆಗೆದುಕೊಂಡು ಬರುವೆಯಾ...' ಎಂದಳು. ನಾನು ಅಡಿಗೆ ಮನೆಯತ್ತ ...ಬೇಗನೆ ಬಿಸಿ ನೀರಿನ ಸೀಸೆಯನ್ನು ತೆಗೆ...ಯರ್ಾ...ಬಂದೆ.

ಶಬ್ದವೊಂದು... ...ಮೇಲೆ ಕ... ಬೆಚ್ಚಿ ದಾ... ಸ... ...ನಾ...

ಸರ್ವ—ಸಮ್ಮಿಳಿತ

ವಾರ್ಡನಿನ ಲ್ಯಾಫ್ ಪಾಲಿಸಿಯು

ಹಿಂದೀ ವಿಮಾಕ್ಷೇತ್ರದಲ್ಲಿ ಒಂದು ಧೈರ್ಯಪೂರ್ವಕವಾದ ಹೊಸ ಕಾರ್ಯಕ್ರಮ. ಈ ಪಾಲಿಸಿಯು **ಅವಘಡ, ಅಂಗದೌರ್ಬಲ್ಯ, ಕಾಹಿಲೆ, ವೃದ್ಧಾಪ್ಯ, ಮರಣ** ಇವೇ ಮೊದಲಾದ ಸಂದರ್ಭಗಳಲ್ಲಿ, ಯಾವ ರೀತಿಯಿಂದಲೂ ಪ್ರೀಮಿಯಮ್‌ಗಳನ್ನು ಹೆಚ್ಚಿಸದೆ, ರಕ್ಷಣೆಯನ್ನು ಒದಗಿಸುತ್ತದೆ. ಈ ಪಾಲಿಸಿಯು ಸಮಗ್ರ ಭಾರತದಲ್ಲೆಲ್ಲಾ ಬಹು ಜನಪ್ರಿಯವಾಗಿ ಪರಿಣಮಿಸಿದೆ.

"ವಾರ್ಡನ್"ನ ಕೀರ್ತಿಯು ಅದೆಷ್ಟು ಅಪೂರ್ವ ರೀತಿಯದಾಗಿದೆ ಎಂದರೆ, ಅದರಲ್ಲಿ ಜನತೆಯು ಇರಿಸಿರುವ ವಿಶ್ವಾಸವು ಅದೆಷ್ಟು ಅಖಂಡವಾಗಿರುವುದೆಂದರೆ, ಅದು ಜನ್ಮ ತಾಳಿದ ನಾಲ್ಕು ವರ್ಷಗಳೊಳಗಾಗಿಯೇ, ಇದರ ವ್ಯವಹಾರಕಾರ್ಯವು, ಸುಮಾರು **ಒಂದು ಕೋಟಿ ಮೂವತ್ತೈದು ಲಕ್ಷ** ರೂಪಾಯಿಗಳಷ್ಟಕ್ಕೂ ವಿಸ್ತರಿಸಿಕೊಂಡಿದೆ. ಹಿಂದೀ ವಿಮಾದಲ್ಲಿ ಇದು ಅತ್ಯಂತ ಖ್ಯಾತಿದಾಯಕವಾದ ಕಾರ್ಯಸಿದ್ಧಿ.

ವಾರ್ಡನ್ ಪಾಲಿಸಿಯ ವಿಚಾರ ನಡೆಸುವುದರಿಂದ ನಿಮಗೆ ಪ್ರಯೋಜನವಿದೆ.

ದಿ ವಾರ್ಡನ್ ಇನ್ಶೂರೆನ್ಸ್ ಕೋ., ಲಿಮಿಟೆಡ್.,

ಹೆಡ್ ಆಫೀಸ್:—ಅಹಮ್ಮದಾಬಾದ್.

ಬ್ರಾಂಚ್ ಆಫೀಸ್:—

ನಂಬ್ರ 5, ಎರಬಾಲು ಚೆಟ್ಟಿ ಸ್ಟ್ರೀಟ್, ಮದ್ರಾ...

...HEGDE, CHIEF AGENT, K...

... ಪ್ರಣಯ ಲೀಲೆ.

...ಯ ...ತೆ, ಕವನಗಳನ್ನು ಬರೆವ ಇವರ ಪ್ರಣಯ ಚೇಷ್ಟೆ ಜಗತ್ತನ್ನೇ ನಗಿಸುತ್ತಿದೆ.

★

ಇತರರ ಪ್ರಣಯ ಚೇಷ್ಟೆಗಳನ್ನು, ಓದುಗರಿಗೆ ವಿನೋದವಾಗುವಂತೆ ಬರೆವ ಬರಹಗಾರರೂ, ಹಾಡುವ ಕವಿಗಳೂ, ಅನೇಕರು. ಆದರೆ, ಆ ಮಹಾನುಭಾವರ ಸ್ವಂತವಾದ ಪ್ರಣಯ ಚೇಷ್ಟೆಗಳನ್ನು ಹೇಳಿದರೆ, ನೀವು ಇನ್ನೂ ಹೆಚ್ಚು ಆನಂದ ಹೊಂದಬಹುದು. ಅಂತಹ ಲೇಖಕರ ಕವಿಗಳ ಪ್ರಣಯ ಕತೆಗಳನ್ನೂ ಕೊಂಚ ತಿಳಿದುಕೊಳ್ಳಿರಿ!

ಆಲ್ ಫಿಯುರಿ! ಇಟಲಿಯ ಸುಪ್ರಸಿದ್ಧ ಕವಿ ಮತ್ತು ನಾಟಕಕಾರನೀತ. ಈತನ ಪ್ರಣಯ ಚೇಷ್ಟೆಯಾದರೂ, ವಿನೋದಮಯ ಪ್ರಹಸನವೇ ಆಗಿದೆ. ಅಥವಾ ಇದೊಂದು ಸಿನೆಮಾ ಚಿತ್ರದಂತಿದೆ ಎಂದರೂ ಸರಿಯೇ!

ಸ್ಟೋಲ್‌ಬರ್ಗಿನ ರಾಜಕುಮಾರಿ ಲೂವಿಸ್‌ಳನ್ನು, ಪ್ರಿನ್ಸ್ ಚಾರ್ಲಿ ಎಂಬಾತನು ವಿವಾಹವಾಗಿದ್ದ. ಇದು ೧೭೭೨ರ ಕತೆ. ಚಾರ್ಲಿಯಾದರೋ, ಕುಡಿಕ; ಅಲ್ಲದೆ ಸದಾ ರೋಗಿ. ವಿವಾಹದ ಹೊತ್ತು, ಆತನ ಪ್ರಾಯ ೫೦. ರಾಜಕುಮಾರಿಯ ಪ್ರಾಯ ೧೭. ಇ... ಫ್ಲಾರೆನ್ಸ್ ನಗರಕ್ಕೆ ಈ ವಿಚಾರ ತಿಳಿದಿತ್ತು! ಆಲ್ ಫಿಯುರಿಗೂ ಇದು ತಿಳಿಯ... ಇಲ್ಲ.

ಒಂದು ದಿನ, ಲೂವಿಸಳನ್ನು ನೋಡುವ ಸಂಧಿ ಆಲ್ ಫಿಯುರಿಗೆ ಉಂಟಾಯಿತು. ಆಕೆ ಸ್ವೀಡನಿನ ರಾಜನ ಚಿತ್ರವನ್ನು ನೋಡುತ್ತಾ, ತನ್ನ ಪತಿಯ ಮಹಲಿನಲ್ಲಿದ್ದಳು. ಈಕೆಯ ಸೌಂದರ್ಯಕ್ಕೆ ಮನಸೋತ ಆಲ್ ಫಿಯುರ್, ಸ್ವೀಡಸಿನ ರಾಜನಂತೆಯೇ ಉಡಿಗೆ ಧರಿಸಿ, ಮರುದಿನವೇ ಆಕೆಯ ಮುಂದೆ ಸುಳಿದಾಡ ಹತ್ತಿದ! ತರುಣರ ಗುಪ್ತ ಭಾಷೆಯ ಮೂಲಕ, ಆಕೆ ಕವಿಗೆ ಸಂಕೇತ ಮಾಡಿದಳು. ಕವಿಗೆ ಆಕೆಯ ಆ ಅಭಿನಯ ಆಶೆಯನ್ನುಂಟುಮಾಡಿತು.

ಕುಡುಕನಾದ ಚಾರ್ಲಿಯಿ...ದ, ಆಕೆಯನ್ನು ಪಾರುಮಾಡಬೇಕೆಂದೆಣಿಸಿದ, ಆಲ್ ಫಿಯುರ್, ಹತ್ತಿರದ ಕಾನ್ವೆಂಟಿನ ಒಬ್ಬಳು, ಲೂವಿಸಳನ್ನು ಅಲ್ಲಿಗೆ ಆಹ್ವಾನಿಸುವಂತೆ ಮಾಡಿದ. ಸರ್ವ ಕಾವಲಿನಿಂದ ತರುಣಿಯಾದ ಮಡದಿಯನ್ನು ಕಾಯ...ದ್ದ ಚಾರ್ಲಿ ಪ್ರಭುವೂ, ತನ್ನ ಮಡದಿಯೊಡ... ನಡೆದ. ಕಾನ್ವೆಂಟಿನ ಬಾಗಿಲಲ್ಲಿ, ಲೂವಿಸಳನ್ನು ಒಳಗೆ ಬಿಟ್ಟು, ಕೂಡಲೇ ಬಾಗಿಲು ಮುಚ್ಚಲಾಯಿತು. ಬಾಗಿಲನ್ನು ತೆರೆಯಿರೆಂದು ಚಾರ್ಲಿ ಎಷ್ಟು ಯತ್ನಿಸಿದರೂ ಸಫಲವಾಗದಿರಲು, ಅವನು ಹಿಂತಿರುಗಿದ. ಆಲ್ ಫಿಯುರ್ ಅಲ್ಲಿಂದ ಲೂವಿಸಳನ್ನು ಆಕೆಯ ಮನೆಗೆ ಒಯ್ದು, ಅಲ್ಲಿ ತನ್ನ ಜೀವಿತ ಕಾಲವನ್ನು ಕಳೆದ!

ಈ ನಡುವೆ ಆತನ ಸಾಹಸಿ...ಣನೀಯುವೇ ಆದುದು. ಬೆರ್ಲಿಯೋಸ್, ತನ್ನ ಕಾಲದಲ್ಲಿ, ಶೇಕ್ಸ್‌ಪಿಯರ್ ಕವಿಯ ನಾಟಕದಲ್ಲಿ ಅಭಿನಯಿಸುತ್ತಿದ್ದ ಐರಿಶ್ ನಟಿ, ಹರಿಯೆಟ್ ಸ್ಮಿತ್‌ಸನ್ ಎಂಬಾಕೆಯನ್ನು ಪ್ರೀತಿಸಿ, ತನಗೆ ಇಂಗ್ಲೀಷ್ ಬರುತ್ತಲೇ ಇದ್ದಿಲ್ಲವಾದರೂ, ಆಕೆಗೆ ಅತ್ಯುತ್ಕೃಷ್ಟವಾದ ಪ್ರಣಯ ಪತ್ರಗಳನ್ನು ಬರೆದ. ತನ್ನ ಪತ್ರಕ್ಕೆ, ಆಕೆಯಿಂದ ಉತ್ತರ ಬರದಿದ್ದುದನ್ನು ಕಂಡು, ವೈರಾಗ್ಯಗೊಂಡು, ಬೆರ್ಲಿಯೋಸ್ ಕಾಮಿಲ್ಲೆ ಮೋಕ್ ಎಂಬಾಕೆಯನ್ನು ಪ್ರೀತಿಸಿ, ಆಕೆಗೆ ಪ್ರಣಯ ಪತ್ರಗಳನ್ನು ಬರೆಯಹತ್ತಿದ. ಆದರೆ, ಈಕೆಯೂ ಈತನನ್ನು ಒಪ್ಪಲಿಲ್ಲ. ಬದಲು ಈತನ ವಿರೋಧಿಯನ್ನು ವಿವಾಹವಾದಳು!

ಇದರಿಂದ, ಬೆರ್ಲಿಯೋಸ್‌ನ ರೋಷ ಅಟ್ಟಕ್ಕೇರಿತು. ಸ್ತ್ರೀಯ ಉಡಿಗೆಯನ್ನು ಧರಿಸಿ, ಎರಡು ರಿವಾಲ್ವರುಗಳನ್ನು ಹಿಡಿದು, ಕಾಮಿಲ್ಲೆಯನ್ನು ಕೊಲ್ಲಲು ಮುಂದಾದ; ಆದರೆ, ಆ ರೋಷ ಅಳಿದು ಹೋಯಿತು! ರಿವಾಲ್ವರು ಉಪಯೋಗಿಸಲ್ಪಡದಾಯಿತು.

ಪ್ರಯಣ ಚೇಷ್ಟೆಗೆ ಬಲಿ ಬಿದ್ದ ಈತ, ಹರಿಯಟ್‌ಳಲ್ಲಿಗೆ ತೆರಳಿದ. ವಿಷವನ್ನೂ, ವಿಷ ಕಾರಿಸಬಲ್ಲ ಔಷಧಿಯನ್ನೂ ಎರಡನ್ನೂ ಹಿಡಿದುಕೊಂಡು, ಆಕೆಯನ್ನು ವಿವಾಹವಾಗಲು ಒಪ್ಪುವಂತೆ ಪ್ರೇರೇಪಿಸಿದ; ಬಲಾತ್ಕರಿಸಿದ. ಆಕೆ ಒಪ್ಪದಿರಲು, ವಿಷಕೊಳ್ಳುವೆನೆಂದ. ಆಕೆ ಒಪ್ಪಲಿಲ್ಲ. ನಕ್ಕು ಬಿಟ್ಟಳು. ಕೊನೆಗೆ ಬೆರ್ಲಿಯೋಸ್ ವಿಷವನ್ನು ಸಂಪೂರ್ಣವಾಗಿ ಕುಡಿದೇ ಬಿಟ್ಟ! ಇದನ್ನು ಕಂಡು, ಭಯಗೊಂಡು, ಹರಿಯಟ್ ವಿವಾಹಕ್ಕೊಪ್ಪಿದಳು. ಬೆಲ್ಲಿಯೋಸ್, ಇನ್ನೊಂದು ಔಷಧಿಯಿಂದ ವಿಷವನ್ನು ಕಾರಿಸಿಕೊಂಡು ಬದುಕಿಕೊಂಡ. ವಿವಾಹವಾಗಿ ಪ್ರಣಯ ಲೀಲೆಗಳನ್ನೆಲ್ಲವನ್ನು ತೀರಿಸಿಕೊಂಡ.

—೦೦೦—

ಕಳೆದ ವರ್ಷದಲ್ಲಿ, ಇಹವನ್ನುಳಿದ ಕವಿ ಸರ್ ಬೆಸಿಲ್ ಜಹರೋಫ್ ಕೂಡಾ, ತನ್ನ ಬಾಲ್ಯದಲ್ಲೇ ಪ್ರಣಯ ಚೇಷ್ಟೆಗೆ ಬಲಿ ಬಿದ್ದಿದ್ದನೆಂದು ತಿಳಿದುಬರುತ್ತದೆ. ಈತ, ಇನ್ನೂ ೨೦ ವರ್ಷದವನಾಗಿದ್ದಾಗ, ಒಬ್ಬಳನ್ನು ಪ್ರೀತಿಸಿದ್ದ. ಆದರೆ ಆ ವಿವಾಹವಾಗಲಿಲ್ಲ. ಹೀಗೆ, ಈತನಲ್ಲಿನ ಪ್ರೇಮ, ಹಾಗೆಯೇ ಉಳಿದುದರಿಂದ, ಅವರವರೊಳಗೆ ವಿವಾಹವಾಗುವ ಕಾಲ, ಮದುಮಗನಿಗೆ ೭೦ ವರ್ಷಗಳು ಕಳೆದಿದ್ದುವು; ಮದುಮಗಳೂ ಅಜ್ಜಿಯಾಗಿದ್ದಳು.

...ನ್ನೇ ರೀತಿಯ ಇನ್ನೊಂದು ಕತೆಯೆ... ...ತ ಗ್ರಂಥವನ್ನು ರಚಿಸಿದ ...ು. ಆತನ ಪ್ರಣಯ ಚೇಷ್ಟೆ, ...

(೪ನೇ ಪುಟದಿಂದ)

ಆಕೆಯ ಬಳಿ ಕುಳಿತುಕೊಂಡು, ಸೀಸೆಯನ್ನು ಬೆನ್ನಿನ ಮೇಲೆ ಅತ್ತಿತ್ತ ಆಡಿಸತೊಡಗಿದೆ.

ಒಂದೆರಡು ನಿಮಿಷಗಳಲ್ಲೇ, ಯಾರೋ ಕೊಠಡಿಯತ್ತ ಬರುವ ಕಾಲ ಸಪ್ಪಳವು ಕೇಳಿಸಿತು. ಯಾರಿರಬಹುದೆಂದು ಆಲೋಚಿಸುವಲ್ಲಿ, ಸರಳೆಯ ಬೆನ್ನಿನ ಮೇಲೆ ಆಡಿಸುತ್ತಿದ್ದ ಸೀಸೆಯು ಹಾಗೆಯೇ ನಿಂತುಬಿಟ್ಟಿತು. ಶಾಕವು ಒಮ್ಮೆಗೆ ಏರಿಹೋದುದರಿಂದ, ಸರಳೆಯು ನೋವಿನಿಂದ ಹಾರಿ ಬಿದ್ದು, ಗಟ್ಟಿಯಾಗಿ ಕಿರಚಿಕೊಂಡಳು. ಸರಳೆಯು ಕಿರಚಿಕೊಳ್ಳುವುದಕ್ಕೂ, ರಾಜು ಕೊಠಡಿಯೊಳಗೆ ಬರುವುದಕ್ಕೂ ಸರಿಹೋಯಿತು.

ಕೊಠಡಿಯನ್ನು ಹೊಕ್ಕ ರಾಜುವು, ಒಮ್ಮೆಲೇ ಹಿಂದೆ ಸರಿದು, ಬಾಗಿಲಲ್ಲೇ ನಿಂತುಕೊಂಡು, ರೆಪ್ಪೆಯನ್ನಾಡಿಸದೆ, ನಮ್ಮಿಬ್ಬರನ್ನು ನೋಡುತ್ತಿದ್ದ. ನಾನೂ ಎವೆಯಿಕ್ಕದೆ, ಅವನನ್ನೇ ನೋಡುತ್ತಾ ಕುಳಿತಿದ್ದೆ. ಸರಳೆಯ ದೃಷ್ಟಿಯೂ, ಅವನ ಮೇಲೆ ಬಿತ್ತು. ಕೊಠಡಿಯ ದೀಪದ ಬೆಳಕಿನಲ್ಲಿ, ರಾಜುವಿನ ದೇಹವು ನಡುಗುತ್ತಿರುವ...ತೆ ನನಗೆ ತೋರಿತು.

...ಮುಖದ ಛಾಯೆಯು, ಬಿಳುಪೇರಿತು. ಏ... ಹೇಳಬೇಕೆಂದು ಪ್ರಯತ್ನಿಸಿದನು. ಆದರೆ 'ರಾಮು............ಸರಳೆ' ಎಂಬ ಎರಡು ಶಬ್ದಗಳು ಮಾತ್ರ ನನಗೆ ಕೇಳಿಸಿದವು.

ನಾನು ಎದ್ದು ನಿಂತುಕೊಂಡೆ. ರಾಜುವು, ಮುಖವನ್ನು ತಿರುಗಿಸಿಕೊಂಡು, ಅಲ್ಲಿಂದ ಹೊರ...ನು. ಅವನನ್ನೇ ಹಿಂಬಾಲಿಸಿದೆ. ... ರಾಜುವಿನ ಆಗಿನ ...

COMMERCIAL CROSS-DIGITS COMPETITION No.2...

Drive square pegs in square holes

OUR MAGNIFICENT OFFER OF

Rs. 36000 IN PRIZES

FOR CORRECTLY FILLING UP THE DIGITS IN THE SQUARE GIVEN BELOW

OUR GUARANTEES ARE ALWAYS FULFILLED.

ಹತ್ತು ಸಂಪೂರ್ಣ-ಸರಿಯಾದ ಉತ್ತರಗಳಿಗೆ ಪ್ರತಿಯೊಂದಕ್ಕೆ ರೂ. 3,600/-ರಂತೆ.

ನಮ್ಮ ಖಾತ್ರಿ ಗ್ಯಾರೆಂಟಿ { ಸಂಪೂರ್ಣ-ಸರಿಯಾದ ಉತ್ತರಗಳನ್ನು ಕಳುಹುವ ಪ್ರತಿಯೊಬ್ಬನಿಗೂ ಕನಿಷ್ಟ ಪಕ್ಷ ರೂ. 2,000/—ದ ಗ್ಯಾರೆಂಟಿ ಬಹುಮಾನವು ಇದೆ.

ಸಮಸ್ಯೆಯ ಸರಿಯಾದ ಉತ್ತರವು ಮೊಹರು ನಿಶಿ ಮುಂಬಾಯಿಯ ಪ್ರಮುಖ ಬ್ಯಾಂಕೊಂದರಲ್ಲಿರಿಸಲ್ಪಟ್ಟಿದೆ.

ಹಿಂದಿನ ನಮ್ಮ ಬಹುಮಾನ ವಿನಿಯೋಗಗಳ ದಾಖಲೆ (ಪರೀಕ್ಷೆಗಾಗಿ ತೆ...).
ರೂ. 51,950 ನಗದಿಯಿಂದ 63 ಗ್ಯಾರಂಟಿ ಬಹುಮಾನಗಳಿಗಾಗಿ ಕೊಡಲ್ಪಟ್ಟಿದೆ.
ರೂ. 6,000 ನಗದಿಯಿಂದ 130 "ರನ್ನರ್ಸ್-ಅಪ್" ಬಹುಮಾನಗಳಾಗಿ ಹಂಚಲ್ಪಟ್ಟಿದೆ.
ನೂರಾರು ರೂಪಾಯಿಗಳ ಮೌಲ್ಯದ ನಮ್ಮ ಸಾಹಿತ್ಯಗಳು 6,000 ಸ್ಪರ್ಧ...ರಿಗೆ ಹಂಚಲಾಗಿವೆ.

ಈ ಚೌಕದಲ್ಲಿ 5ರಿಂದ 20ರ ವರೆಗಿನ ಸಂಖ್ಯೆಗಳನ್ನು ಪ್ರತಿಯೊಂದು ಸಾಲಿನಲ್ಲಿ ಅಡ್ಡಕ್ಕೂ ನೀಟಕ್ಕೂ ಮತ್ತು ಒಂದು ಮೂಲೆಯಿಂದ ಇನ್ನೊಂದು ಮೂಲೆಗೂ ಜುಮ್ಲಾ 50 ಬರುವಂತೆ ಕ್ರಮವಾಗಿ ಸರಿಪಡಿಸಿರಿ. ಪ್ರತಿಯೊಂದು ಸಂಖ್ಯೆಯೂ ಒಂದೊಂದೇ ಬಾರಿ ಉಪಯೋಗಿಸಲ್ಪಡಬೇಕು.
ಪ್ರವೇಶ ಧನ:—ರೂ. 1/8/- ಪ್ರತಿಯೊಂದು ಸಮಸ್ಯೆಗೆ.
ರಿಯಾಯಿತಿಯ ಪ್ರವೇಶ ಧನ:—ರೂ. 5/- ನಾಲ್ಕು ಸಮಸ್ಯೆಗಳಿಗೆ.
ವಿಶೇಷ ರಿಯಾಯಿತಿ:-ರೂ. 8/- ಎಂಟು ಸಮಸ್ಯೆಗಳ ಪ್ರತಿಯೊಂದು ಸೆಟ್ಟಿಗೆ.
ಆಖೈರು ತಾರೀಕು:— 9ನೇ ನವಂಬರ 1938.

ಕ್ರಮಗಳು:— ಎಷ್ಟು ಉತ್ತರಗಳನ್ನು ಬೇಕಾದರೂ ಖಾಲಿ ಕಾಗದದ ಮೇಲೆ ಬರೆದು, ಅದರೊಂದಿಗೆ ಮೇಲೆ ನಮೂದಿಸಿದ ಅಗತ್ಯದ ಫೀಸನ್ನು ಮನಿ ಆರ್ಡರ್ ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬಹುದು. ಇದರ ಫಲಿತಾಂಶವು 1938ನೇ ಇಸವಿ ನವಂಬರ ತಾ. 16ರಲ್ಲಿ ಪ್ರಕಟಿಸಲ್ಪಟ್ಟು, ತಮ್ಮ ವಿಳಾಸ ಬರೆದು ಸ್ಟಾಂಪ್ ಅಂಟಿಸಿದ ಲಕೋಟೆಯನ್ನು ಉತ್ತರದೊಂದಿಗೆ ಕಳುಹಿಸಿದ ಸ್ಪರ್ಧೆಗಾರರಿಗೆ, ಅದನ್ನು ತಿಳಿಸಲಾಗುವುದು. ನಮ್ಮ ತಪಾಸಣೆಗಾಗಿ ಉತ್ತರಗಳೊಂದಿಗೆ ಮನಿ ಆರ್ಡರ್ ರಶೀದಿಯನ್ನು ಲಗ್ತೀಕರಿಸತಕ್ಕದ್ದು.

ಬ್ಯಾಂಕಿನಲ್ಲಿ ಠೇವಣಾತಿಯಾಗಿರಿಸಿದ ಉತ್ತರಕ್ಕೆ ಹೋಲಿಕೆಯಾಗುವಂತಹ ಸರಿಯಾದ ಉತ್ತರಗಳನ್ನು ಕಳುಹಿದ ಯಶಸ್ವಿ ಸ್ಪರ್ಧೆಗಾರರೊಳಗೆ ಬಹುಮಾನದ ಮೊತ್ತವನ್ನು ಹಂಚಲಾಗುವುದು. ಬಹುಮಾನದ ಯೋಜನೆಯು, ಸ್ವೀಕರಿಸಿದ ಉತ್ತರಗಳ ಮೇಲೆ ಹೊಂದಿಕೊಂಡಿದೆಯಾದರೂ, ಪ್ರತಿಯೊಂದು ಸರಿಯಾದ ಉತ್ತರಕ್ಕೆ ಕನಿಷ್ಠ ರೂ. **2,000**/—ದ ಬಹುಮಾನವಿದೆಯೆಂಬುದು ಸಿದ್ಧಾಂತ. ಗ್ಯಾರೆಂಟಿ ಬಹುಮಾನ ಹೊರತು, ಸರಾಸರಿ ಮುಂತಾದ ಅದಾವ ತೆರನ ವಿವಾದಗಳೂ ಬಹುಮಾನ ವಿನಿಯೋಗದಲ್ಲಿಲ್ಲ. ಸರಿಯಾದ ಉತ್ತರಗಳು ಅದೆಷ್ಟು ಬಂದರೂ ಪ್ರತಿಯೊಬ್ಬನಿಗೂ ಬಹುಮಾನ ಹಂಚಲಾಗುವುದು. ಮೆನೇಜರರ ತೀರ್ಮಾನವೇ ಕೊನೆಯದು ಮತ್ತು ನ್ಯಾಯಬದ್ಧವಾದುದು.

ಮೇಲಿನ ನಗದಿ ಬಹುಮಾನಗಳಲ್ಲದೆ, 8 ಉತ್ತರಗಳ ಸೆಟ್ಟನ್ನು ಕಳುಹಿಸುವ ಪ್ರತಿಯೊಬ್ಬನಿಗೂ ನಮ್ಮ ಪ್ರಸಿದ್ಧ ತಯಾರಿಕೆಗಳಲ್ಲಿ ಯಾವುದಾದರೊಂದನ್ನು, ಅಂದರೆ ಸ್ವೀಟೋ (ಸಕ್ಕರೆಯ ಬದಲು ಆದರ್ಶವಾದ ಪ್ರತಿವಸ್ತು); ಸೆಕ್ಸ್-ಓ-ಮೇಕ್ಸ್ (ನರಗಳ ಮತ್ತು ಮಿದುಳಿನ ಆಶ್ಚರ್ಯಕಾರಕ ಟಾನಿಕ್); ಫೆಟ್ರೆಡ್ ಒಬೆಸಿಟೀ ಸೋಪ್ (ಕೊಬ್ಬು ಕರಗಿಸುವ ಆದರ್ಶ ಸಾಬೂನು); ಲಿಕ್ಕರ್-ಎಕ್ಸ್ (ಪಾನದ ಚಟವನ್ನು ನಿರ್ಮೂಲಿಸುವಂಥದ್ದು) ಮುಂತಾದ್ದು ಸ್ಪರ್ಧೆಗಾರರ ಇಷ್ಟಾನುಸಾರ ಬಹುಮಾನವಾಗಿ ಹಂಚಲಾಗುವುದು. (ಒಂದೇ ಲಕೋಟೆಯಲ್ಲಿ ಹಲವು ಹೆಸರುಗಳನ್ನು ಸ್ವೀಕರಿಸಲಾಗುತ್ತದೆ.)

ನಿಮ್ಮ ಉತ್ತರಗಳನ್ನೂ ಫೀಸನ್ನೂ ಈ ವಿಳಾಸಕ್ಕೆ ರವಾನಿಸಿರಿ:—

THE MANAGER,
SWEETO CHEMICAL & INDUSTRIAL WORKS,
Prospect Chambers—Hornby Road, Fort—BOMBAY.

ನಮ್ಮ ಹಿಂದಿನ ಸ್ಪರ್ಧೆಯ ಮೊಹರು ನಿಶಿಯ ಉತ್ತರ.

ಮೊದಲನೆ ಸಾಲು,	16	2	11	9
ಎರಡನೆ ಸಾಲು,	6	5	12	15
ಮೂರನೆ ಸಾಲು,	13	14	7	4
ನಾಲ್ಕನೆ ಸಾಲು,	3	17	8	10

ನನ್ನನ್ನೇ, ನಾನು ಮರೆತು ಬಿಟ್ಟಂತೆ ಇದ್ದೆ. ಸಮುದ್ರ ತೀರಕ್ಕೆ ಹೋಗಿ, ಆಲೋಚಿಸಿದೆ. ಯಾವ ನಿರ್ಧಾರವನ್ನೂ, ಮಾಡಲಾಗಲಿಲ್ಲ. ಮನೆಗೆ ಹಿಂತೆರಳುವಾಗ, ರಾತ್ರಿ ಒಂದು ತಾಸಾಗಿತ್ತು. ಆಳು ಬಾಗಿಲನ್ನು ತೆರೆದನು. ನನ್ನ ಕೊಠಡಿಯ ದೀಪವು ಇನ್ನೂ ಉರಿಯುತ್ತಿತ್ತು. ಮೇಜಿನ ಮೇಲೊಂದು ಪತ್ರ. ಅದನ್ನೆತ್ತಿ ಓದಿದೆ. 'ನಿರ್ಭಾಗ್ಯನನ್ನು, ಮನೆಯಲ್ಲಿ ಸಾಕಿ ಸಲಹಿದುದಕ್ಕೆ, ಪ್ರಾಯಶ್ಚಿತ್ತವಾಯಿತು. ಉಂಡ ಮನೆಗೆರಡನ್ನು ಬಯಸಿದ ಪಾಪಿ, ನೀನು. ನಿನಗಿನ್ನು ನನ್ನ ಮನೆಯಲ್ಲಿ ಸ್ಥಳವಿಲ್ಲ. ಮನೆಯಿಂದ ಇಂದೇ ಹೊರಟು ಹೋಗು' ಎಂದಿತ್ತು.

ರಾಜುವಿನ ಕೈಬರಹ. ಕಾಗದವನ್ನು ಹರಿದು ಬಿಸಾಡಿದೆ. 'ಮರುದಿನ... ...ನ್ನು ಬಿಟ್ಟು, ಬೇರೊಂದು ಕೋ... ಮಾಡಿ, ಅಲ್ಲಿಯೇ ಇದ್ದು ಬಿಟ್ಟೆ.

ನಾನೊಮ್ಮೆ, ರಾಜುವನ್ನು ಕಂಡು, ನಿಜಾಂಶವನ್ನು ತಿಳಿಸಲೇ? ಎಂದು ಭಾವಿಸಿದೆ. ಪ್ರಯೋಜನವಿಲ್ಲನೆಂದು ಕಂಡು ಬಂದಿತು. ಒಮ್ಮೆ ಸರಳೆಯ ಸ್ಥಿತಿಯೇನಾಗಿರಬಹುದೆಂಬ ಆಲೋಚನೆ. ನಾಲ್ಕಾರು ದಿನಗಳಲ್ಲಿ, ರಾಜುವಿನ ಆಳು, ಪತ್ರವೊಂದನ್ನು ಕೊಟ್ಟು ಹೋದನು. ಅದು ವಿಮಲೆಯ ಪತ್ರ. 'ಅಣ್ಣನು, ಅಮ್ಮನಿಗೆ ಬರೆದ ಪತ್ರವನ್ನು ಓದಿದೆ. ನನ್ನನ್ನು ಮರೆತು ಬಿಡು!' ಎಂದಿತ್ತು.

ಮನುಷ್ಯನಲ್ಲಿ ಸ್ವಾಭಾವಿಕವಾಗಿರುವಂತೆ, ನನ್ನಲ್ಲೂ ಒಂದು ...ಸೆಯಿತ್ತು. ವಿಮಲೆಯನ್ನು ಲಗ್ನ... ...ವನ್ನು ಕಟ್ಟಿಕೊಂ... ...ಖವಾಗಿ ... ಅದೂ ...

128(16)

ಮಹಾರಾಜರುಗಳ ವಿಲಾಸ.
ಠಾಗೂರರ ವೇದಾಂತ.
ಆಗಾಖಾನರ ಸಂಪತ್ತು.

ಇವು ಮೂರು, ಭಾರತ ದೇಶದ ರೋಗತ್ರಯಗಳು

—"ವಿಶ್ವವಾಣಿ" ಪತ್ರಿಕೆಯ ವಿಮರ್ಶೆ.

ರಾಜರೂ, ಮಹಾರಾಜರೂ

ಭಾರತ ದೇಶದಲ್ಲಿನ ಮಹಾರಾಜರ ಸಂಪತ್ತೂ, ವಿಲಾಸವೂ ಜಗತ್ತಿನಲ್ಲೇ ಹೆಸರಾದದ್ದು. ಅವರಿಗಿರುವ ಬಯಕೆಯಾದರೂ ಎರಡೇ. 'ನಾವು ವಿಲಾಸದ ಜೀವನವನ್ನು ನಡೆಸಬೇಕು' ಎಂಬುದೊಂದು; 'ನಮ್ಮ ಪ್ರಜಾವರ್ಗವೆಲ್ಲವೂ ನಮಗೆ ಅನುಕೂಲರಾಗಿ, ವಿಧೇಯರಾಗಿ ನಮ್ಮ ಊಳಿಗವನ್ನು ಮಾಡುತ್ತಿರಬೇಕು' ಎಂಬುದು ಇನ್ನೊಂದು.

ಶ್ರೀ. ಆಗಾಖಾನ್ ಪ್ರಭೃತಿಯವರು.

ದುಡ್ಡಿಲ್ಲದೆ ವಿ[illegible]ಸಗಳಿಲ್ಲ. ಆದ್ದರಿಂದ, ಇವರಲ್ಲಿ ಕೆಲವರು, ನಾನಾ ವಿಧವಾಗಿ, ಪ್ರಜೆಗಳ ಮೇಲೆ ತೆರಿಗೆಯನ್ನು [illegible]ೇರಿ, ಬೊಕ್ಕಸವನ್ನು ತುಂಬಿಸಲು ನೋಡುತ್ತಾರೆ. ಅಲ್ಲದೆ, ತಮ್ಮ ಪ್ರಜೆಗಳ ಹಿತದ ಮೇಲೆ ಹೆಚ್ಚಿನ ಶ್ರದ್ಧೆ ಇಡದೆ, ಆ ಪ್ರಜೆಗಳು, ನಿಕೃಷ್ಟಸ್ಥಿತಿಯಲ್ಲಿ ಇರುವುದನ್ನೇ, ಇವರು ನೋಡಲು ಬಯಸುತ್ತಾರೆ, ಪ್ರಜೆಗ[illegible] ವಸೂಲ್ಮಾಡಿದ ದುಡ್ಡನ್ನು, ಅವರಿಗಾಗಿ ವಿನಿಯೋಗಿಸದೆ,—ಪ್ರ[illegible]ಗಳ ಹಿಟ್ಟು ಬಟ್ಟೆಗಳ ಗತಿ ಏನೆಂಬುದರ ಪರವೆಯೇ ಇಲ್ಲದೆ,-ಇವರು, ರಾಜಭಂಡಾರದಲ್ಲಿ ಜಮೆಯಾದ ಆ ಪ್ರಜೆಗಳ ಹಣವನ್ನು, ನೀರಿನಂತೆ, ಕೇವಲ ತಮ್ಮ ವಿಲಾಸ ಆಡಂಬರಗಳಿಗಾಗಿ ಖರ್ಚುಮಾಡುತ್ತಾರೆ. ಹೀಗೆ, ಇಂಥವರ ಪ್ರಜಾಪರಿಪಾಲನಾ ರೀತಿಯು, ಭಾರತಕ್ಕೊಂದು ಪ್ರತ್ಯಕ್ಷ ಕಳಂಕವಾಗಿದೆ.

ಠಾಗೂರರ ವೇದಾಂತ

ಈ ಮಹನೀಯರು, ಭಾರತ ದೇಶದ ಕವಿಸಾರ್ವಭೌಮರು; ಬಹಳ ದೊಡ್ಡ ಶ್ರೀಮಂ

ಕವಿಸಾರ್ವಭೌಮ ಠಾಗೂರರವರು.

ತರೂ, ಗೌರವಾನ್ವಿತರೂ ಆಹುದು. ಇವರ ವೇದಾಂತದ ಮುಂದೆ, ದೊಡ್ಡ ದೊಡ್ಡ ಕವಿಗಳೂ, ಉಚ್ಚಾಧಿಕಾರಿಗಳೂ ತಲೆಬಾಗುವರು. ಇವರ ಮುಖದಿಂದ ಹೊರಡುವ ಪ್ರತಿಯೊಂದು ವಿಚಾರವೂ, ಭಾರತದಲ್ಲೊಂದು 'ತುಫಾನ'ನ್ನೇ ಉಂಟುಮಾಡುತ್ತಿದೆ. ಆದರೆ ಇವರ ವೇದಾಂತದಿಂದ ನಮ್ಮ ದೇಶಕ್ಕೆ ಏನು ಉಪಕಾರವಾಗಿದೆ ಎಂಬುದೇ ಪ್ರಶ್ನೆ!

ಆಗಾಖಾನ್ ಪ್ರಭೃತಿ

ಇವರು, ಭಾರತ ದೇಶದ ಒಂದು ಪಂಗಡದ ಅಧಿಪತಿಗಳು. ಇವರ ಧ್ವಜದ ಕೆಳಗೆ, ಅಗತ್ಯ ಬಿದ್ದು, 'ಹೂಂ' ಎಂದರೆ ಸಾಕು; ೧೦ ಲಕ್ಷ ಮಂದಿ ಆ ಧ್ವಜದ ನೆರಳಿಗೆ ಓಡಿ ಬರುವರು; ಅಷ್ಟು [illegible]ಸ್ಥಾಪಕರು ಆಗಾ[illegible]ಾನರು. [illegible]ಂದೂ ದೇ[illegible] [illegible]ನ, ಯ[illegible] [illegible]ಾರ್ಗದ [illegible] ನಾ[illegible] [illegible]ರ ನೋ[illegible]

ಅಂಥ ಶ್ರೀಮಂತರೇ. ಇವರು ಮಾತಿನಲ್ಲಿ ರವೀಂದ್ರನಾಥ ಠಾಗೂರರಿಗೂ, ಸಂಪತ್ತಿನಲ್ಲಿ, ರಾಜಮಹಾರಾಜರಿಗೂ ಸಮಾನರಾಗಿರುವರು. ಅಷ್ಟು ಗೌರವ ಇವರಿಗೆ. ಆದರೆ ಭಾರತ ದೇಶದ ಕ್ಷೇಮದ ವಿಷಯಕ್ಕೆ, ಇವರ ಮನೋವೃತ್ತಿಯೂ, ಕೆಲ ಕೆಲವು ಭಾರತದ ಮಹಾನುಭಾವರುಗಳಂತೆ, ಬರಿದಾಗಿದೆಯೆನ್ನಬೇಕು.

ಮಹಾತ್ಮಾಜಿಯವರು

ಇನ್ನು, ಮಹಾತ್ಮಾಜಿಯವರ ವಿಚಾರವನ್ನೂ, ಇಲ್ಲಿ ಕೊಂಚ ವಿಚಾರಿಸೋಣ. ಅವರು ಲೋಕದಲ್ಲೆಲ್ಲ ಪ್ರಸಿದ್ಧ ಪುರುಷರು. ಅವರಲ್ಲಿ, ದೇವತಾಂಶ ಇದೆ ಎಂದೂ ಜನರು ಭಾವಿಸಿದ್ದಾರೆ; ನಂಬಿದ್ದಾರೆ. ಆದ್ದರಿಂದಲೇ, ಕೋಟ್ಯಾಂತರ ಮಂದಿ ಇಂದು ಅವರ ಅಮೃತ ವಚನಗಳನ್ನು ಪಾಲಿಸುತ್ತಿದ್ದಾರೆ. ಬೀದಿಯಲ್ಲಿ, ಅವರನ್ನು ಕಂಡಾಗಲೂ, ತಮ್ಮ ಅಲಂಕಾರ ಆಭರಣಗಳನ್ನು ಒಡನೆಯೇ ಕಳಚಿ, ಅವರಿಗೆ ಸಮರ್ಪಿಸುವ ಜನಗಳು, ಸಾವಿರಾರು ಮಂದಿ ನಮ್ಮಲ್ಲಿ ಇದ್ದಾರೆ. ಆದರೂ, ಅವರು ಸುಧಾಮನಂತೆ, ಬಡತನದ ಜೀವನವನ್ನೇ ನಡೆಸುತ್ತಿದ್ದಾರೆ. ತಮ್ಮ ಕೈಯಿಂದಲೇ ಮಾಡಿದ ಟೊಪ್ಪಿ ಮತ್ತು ಅಂಗವಸ್ತ್ರವನ್ನೇ ಧರಿಸಿ, 'ಅರ್ಧ ನಗ್ನ ಫಕೀರ'ರೆನಿಸಿದ್ದಾರೆ. ತನ್ನ ಪರ್ಣಶಾಲೆಯಲ್ಲಿ ಕುಳಿತು, ಅವರು ಮಾಡುತ್ತಿರುವ ತಪಸ್ಸೆಂದರೆ ಒಂದೇ—ಭಾರತ ದೇಶವು, ತನ್ನ ದಾಸ್ಯಶೃಂಖಲದಿಂದ ಪಾರಾಗಲೆಂಬುದೇ. ಇಂಥ ಮಹಾತ್ಮರ ಸಿದ್ಧಾಂತದ ಮುಂದೆ, ಬ್ರಿಟಿಶರ ಶಸ್ತ್ರಾಸ್ತ್ರಗಳೆಲ್ಲವೂ ನಿಷ್ಪ್ರಯೋಜನಗಳಾದುವು. ಅದನ್ನು ಕಂಡೇ 'ನಿಜವಾಗಿ ಮಹಾತ್ಮರೇ ಭಾರತ ದೇಶದ ಏಕಮಾತ್ರ ನಾಯಕರು;'-ಹಾಗೆಂದು ಭಾರತೀಯರೂ ಮುಕ್ತಕಂಠದಿಂದ ಹೊಗಳುತ್ತಿದ್ದಾರೆ.

ನಿಜವಾಗಿಯೂ ಭಾರತ ದೇಶವು, ಪರಿಪರಿಯ ದೌರ್ಭಾಗ್ಯಕ್ಕೆ ಈಡಾಗಿದ್ದರೂ, ಮಹಾತ್ಮರಂಥ ರತ್ನವನ್ನು ಪಡೆಯುವ ಸೌಭಾಗ್ಯವು, ಪ್ರಪಂಚದಲ್ಲಿ ಭಾರತಕ್ಕೆ ಮಾತ್ರ ಒದಗಿದುದು ನಮ್ಮ ಭಾರತೀಯ ಪೂರ್ವ ಪುಣ್ಯ ಪರಿಪಾಕವೇ ಸರಿ.

ಠಾಗೂರರವರ ವೇದಾಂತವು, 'ಭಾರತೀಯರು ಸ್ವಾತಂತ್ರ್ಯಕ್ಕೆ ಅನರ್ಹರು' ಎಂದು ಸಾರುತ್ತಿದ್ದರೆ, ಗಾಂಧಿಯವರು, 'ಮಾನವ ವರ್ಗವನ್ನು, ಈಶ್ವರನು, ಸ್ವತಂತ್ರವಾಗಿಯೇ ಸೃಷ್ಟಿಸಿರುವ'ನೆಂದೂ 'ಧನವಂತರೂ, ಬಡವರೂ, ಪಂಡಿತರೂ, ಪಾಮರರೂ, ಈಶ್ವರನ ದೃಷ್ಟಿಯಲ್ಲಿ ಸಮಾನರೇ' ಎಂದೂ ಪ್ರತಿ ಹೇಳುತ್ತಿದ್ದಾರೆ.

'ಭಾರತದ ಜನಸಂಖ್ಯೆ ವಿಪರೀತ. ಇವರಿಗೆ ಸ್ವಾತಂತ್ರ್ಯ ಕೊಟ್ಟರೆ ದೇಶಕ್ಕೆ ಹಾನಿಯುಂಟು' ಎಂದು ಠಾಗೂರರ ವೇದಾಂತವು ಉದ್ಘೋಷಿಸಿದರೆ, ಗಾಂಧಿಯವರು, 'ಹಿಂದುಸ್ಥಾನದವರು ಶ್ರಮಜೀವಿಗಳು; ಇದರಿಂದಲೇ, ಅವರ ಬಾಹುಬಲ ಹೆಚ್ಚಿದೆ. ಪರಕೀಯರ ಮದ್ದು ಗುಂಡುಗಳನ್ನು, ಇವರು ಕೇವಲ ತಮ್ಮ [illegible] ಗೈಯಿಂದಲೇ ತಡೆಯಬಲ್ಲರು' ಎನ್ನುತ್ತಿ[illegible]

ಭೂವ್ಯಾಕಾಶಗಳಲ್ಲಿ ಠಾಗೂರರ ಕವಿತ್ವವೂ, ವೇದಾಂತವೂ ಮೆರೆದಾಡಬಹುದು, ಮೆರೆಯಲಿ. ಇವನ್ನು ಮೆಚ್ಚಿ, ಯುರೋಪಿನವರೂ ಇವರ ಮೇಲೆ, ಸ್ವರ್ಣವೃಷ್ಟಿ[illegible] ಕರೆದಿರಬಹುದು; ಕರೆಯಲಿ [illegible] ದಿಂದ ಮಗ[illegible] ಅಂತ[illegible] ಅಷ್ಟುತು.

ದೇಶಕ್ಕೆ, ಇವುಗಳಿಂದ ಏನು ಉ[illegible]ಯೋಗ? ಎಂದೂ ಕೇಳುವವರು ಇಲ್ಲದೆ ಇ[illegible].

ಇನ್ನು, ಈ ಭಾರತ ದೇಶದಲ್ಲಿ, ಕ[illegible]ಣಾಂತರಗಳಿಂದ, ಯುದ್ಧಪ್ರಸಕ್ತಿಯೇ ಉಂಟಾಯಿತೆನ್ನೋಣ. ಆಗ, ಇಂಡಿಯದ ರಾಜಮಹಾರಾಜರುಗಳೂ, ಠಾಗೂರರಂಥವರೂ, ಆಗಾಖಾನರಂಥವರೂ ಹೆಚ್ಚು ಮಂದಿ ಕಾಣಸಿಗಲಾರರು. ಇವರಲ್ಲಿ, ಹೆಚ್ಚಿನವರು, ಯುರೋಪಿನಲ್ಲಿ ಕುಳಿತು, ಅಲ್ಲಿನ ವಿಲಾಸ ವಿಭ್ರಮಗಳ ಪ್ರವಾಹದಲ್ಲಿ ತೇಲಾಡುತ್ತಿರಬಹುದಲ್ಲದೆ; ಭಾರತ ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ, ಸಹಭಾಗಿಗಳಾಗುವುದನ್ನು ಮರೆತು, ತಮ್ಮ ವಿಲಾಸ ವಿಭ್ರಮಗಳಿಗೆ ಒದಗಬಹುದಾದ ತೊಡಕುಗಳನ್ನು ಪರಿಹರಿಸಿಕೊಳ್ಳುವಲ್ಲಿಯೂ, ತಮ್ಮ ಹಕ್ಕುಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವಲ್ಲಿಯೂ ಸ್ಥಾಪಿಸಿಕೊಳ್ಳುವಲ್ಲಿಯೂ ನಿರತರಾಗಬಹುದು. ಸಂಕ್ಷೇಪತಃ, ಭಾರತ ದೇಶವನ್ನು, ಕೆಲಕೆಲವರು ಸ್ವಾರ್ಥಕ್ಕಾಗಿ ಅಡವಿಡಲೂ ಬಹುದು. ಹೀಗಿ[illegible]ವಲ್ಲಿ, ಭಾರತ ದೇಶವು, ತನ್ನ ಕಾಲ ಮೇಲೆ [illegible]ನು ನಿಲ್ಲಬಲ್ಲುದೇ?

—✳—

[illegible]ಂದ. [illegible] ಯಾ [illegible] ಪರಿಹ[illegible]ದೆ [illegible] ಇದು ಚಕ್ರವರ್ತಿ ಸ್ಥಾನದಲ್ಲಿ [illegible]ತ್ರಗಳ ಡಬ್ಬಿ ಕ್ರಯ [illegible] [illegible]ನ ಮಂಜರಿ ಫಾರ್ಮ[illegible] [illegible]ನಾ ಬಜಾರ್, ಮದ[illegible]

ಪುನಃ ಆರೋಗ್ಯವಂತನ[illegible] ಆಗು ಪ್ರ[illegible]

"ನಾನು ನಿನಗೆ ಹೇಳುತ್ತೇನೆ. [illegible]ನ್ನ [illegible] ನ್ನೆಲ್ಲಾ ಮರೆತುಬಿಡು ಮತ್ತು ಸ್ಯಾನಟೋಜನ್ [illegible] ವಿಸು. ಅದೊಂದು ಆಶ್ಚರ್ಯಕರವಾದ ಪುಡಿ, ಮತ್ತು ದರಿಂದಲೇ ನಾನಿನ್ನೂ ಈಗ ಇಷ್ಟು ಬಲವಂತನಾಗಿರುವುದು. ದೀರ್ಘಕಾಲದ ಕಾಹಿಲೆಯ ನಂತರ ನಾನು ಸಂಪೂರ್ಣವಾಗಿ ಬಳಲಿದ್ದೆನು. ವೈದ್ಯರು ಸ್ಯಾನಟೋಜನ್ ಉಪಯೋಗಿಸಲು ಸಲಹೆ ಕೊಟ್ಟರು. ಅದು ನನ್ನನ್ನು ಸ್ವಲ್ಪ ಸಮಯದೊಳಗಾಗಿಯೇ ಪುನಃ ಆರೋಗ್ಯವಂತನನ್ನಾಗಿಯೂ ಬಲವಂತನನ್ನಾಗಿಯೂ ಮಾಡಿತು. ಅದು ನನಗೆ ಅತ್ಯಾಶ್ಚರ್ಯಕರವಾಗಿ ಸಹಾಯ ಮಾಡಿತು ಮತ್ತದು ನಿನ್ನನ್ನು ಕೂಡ ಪುನಃ ಸಂಪೂರ್ಣ ಆರೋಗ್ಯವಂತನನ್ನಾಗಿ ಬೇಗನೆ ಮಾಡುವದೆಂದು ನಾನು ಮನಗಂಡಿದ್ದೇನೆ."



"ನಾನು ಸ್ಯಾನಟೋಜನನ್ನು ನರಗಳ ಬಾಧೆಯ ರೋಗಿಗಳಲ್ಲಿ, ದೀರ್ಘಕಾಲದ, ಬಿಡದೆ ಬಂದ ಜ್ವರದ ನಂತರದ ಚೇತರಿಸಿಕೊಳ್ಳುವ ಸಮಯದಲ್ಲಿ ಮತ್ತಿತರ ಕ್ಷಯಿಸುವ ರೋಗಗಳಲ್ಲಿ ಉಪಯೋಗಿಸಿದಲ್ಲಿ ಅತ್ಯುತ್ತಮವಾದ ಪರಿಣಾಮಗಳನ್ನು ಕಂಡಿದ್ದೇನೆ."

ಎ.ಕೆ.ಆರ್., ಎಂ.ಬಿ., ಬಿ.ಎಸ್.ಸಿ.

ಸ್ಯಾನಟೋಜನ್ ತಾರುಣ್ಯವನ್ನೂ ಆರೋಗ್ಯವನ್ನೂ ಉಂಟುಮಾಡಬಲ್ಲ ಸಾಹಿತ್ಯಗಳನ್ನು, ಸುಲಭವಾಗಿ ಜೀರ್ಣಿಸಬಲ್ಲ ರೂಪದಲ್ಲಿ ಉಳ್ಳುದಾಗಿದೆ. [illegible]ಸ್ವಲ್ಪ ನೀರಿನಲ್ಲಿ ಜಿರಿಕೆ ಮಾಡಿದ ಈ ಪುಡಿಯ ಪ್ರತಿಯೊಂದು ಗು[illegible]ಟುಕಿನೊಡನೆ, ನಿಮ್ಮ ದೇಹದೊಳಗೆ ಹೊಸ ಸಾಮರ್ಥ್ಯವು ಚಲಿಸುವುದನ್ನು ಅನುಭವಿಸುವಿರಿ.

ಕೆಲಸ ಮಾಡಲು ನಿಮ್ಮ ಉತ್ಸಾಹವು ಅಧಿ[illegible]ವಾಗುವದನ್ನು ನೀವು ಕಾಣುವಿರಿ. ಮತ್ತು ನೀವು ಎಲ್ಲಾ ವಿಧದ ಕೆಲಸಗಳನ್ನು ಪುನಃ ಮಾಡಲು ಶಕ್ತರಾಗುವಿರಿ. ನವಯೌವನದ ಚೈತನ್ಯದಿಂದ ಹುರುಪುಗೊಂಡವರಾಗಿ, ನೀವು ಜೀವನದ ಸುಖವನ್ನು, ಪೂರ್ಣವಾಗಿ ಅನುಭವಿಸಬಲ್ಲಿರಿ.

ಆಶ್ಚರ್ಯಕರವಾದ ಬಲವನ್ನು ಕೊಡತಕ್ಕ ಸ್ಯಾನಟೋಜನ್‌ನ ಉಪಯೋಗವನ್ನು ಹೊಂದಲು ತಡ ಮಾಡಬೇಡಿರಿ.

ನಿಜವಾದ ಟಾನಿಕ್ ಆಹಾರ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗ[illegible]ಲ್ಲಿಯೂ ದೊರೆಯುವುದು.

ಸ್ಯಾನಟೋಜನ್ ಅದರ ತಯಾರಿಯ ಯಾವದೇ ಕಾಲದಲ್ಲಿ ಕೈಯಿಂದ ಮುಟ್ಟಲ್ಪಡುವುದಿಲ್ಲ ಮತ್ತು ಯಾವ ಜಾತಿ ಯಾ ಮತಕ್ಕಾಗಲಿ ವಿರೋಧಕರವಾದ ಪದಾರ್ಥವನ್ನು ಉಳ್ಳುದಾಗಿಲ್ಲ.